09 August 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕು ನಶ್ವರ ಎಂದು
ನಮ್ಮೊಳಗೆ ಅರಿವಿದ್ದರೆ,
ಪಾಪ ಕಾರ್ಯಗಳಿಗೆ ಕೈ ಹಾಕುವುದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಅಪಹರಣ ಪ್ರಕರಣ: ನಾಲ್ವರು ಆರೋಪಿಗಳ ಬಂಧನ
ಪುಟ ಸಂ. 2



ಟೌನ್‌ಶಿಪ್‌ಗೆ ವಿರೋಧ: ಇಂದಿನಿಂದ ಜೆಡಿಎಸ್ ಪಾದಯಾತ್ರೆ
ಪುಟ ಸಂ. 3



ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ
ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 246 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಇನ್ನೂ ಮುಗಿಯದ 'ಖಾತೆ ಕಗ್ಗಂಟು'

## ಅಧಿವೇಶನ ಸಮೀಪಿಸಿದರೂ ಸಚಿವರಿಗೆ ಸಿಕ್ಕಿಲ್ಲ ಖಾತೆ

**ಬೆಂಗಳೂರು:** ವಿಧಾನಮಂಡಲ ಅಧಿವೇಶನಕ್ಕೂ ಮುನ್ನ ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡಲೇಬೇಕಾದ ಇಕ್ಕಟ್ಟಿನಲ್ಲಿ ಸರ್ಕಾರವಿದೆ. ಆದರೆ ಇನ್ನೂ ಸಚಿವ ಸ್ಥಾನ ಆಕಾಂಕ್ಷಿಗಳ ಒತ್ತಡವನ್ನು ಬಗೆಹರಿಸಲು ಸಹ ಸಾಧ್ಯವಾಗಿಲ್ಲ. ಇದು ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಮತ್ತೊಂದು ಸಮಸ್ಯೆಗೆ ದಾರಿ ಮಾಡಿಕೊಟ್ಟಿದೆ.



ಈಗಾಗಲೇ ಆಂತರಿಕ ಅಸಮಾಧಾನದ ಅಲೆಯನ್ನು ಎದುರಿಸುತ್ತಿರುವ ಪಕ್ಷವು ಈಗ ಎರಡನೇ ಬಾರಿಯ ಮತ್ತೊಂದು ಸಮಸ್ಯೆಗೆ ಸಿಲುಕುತ್ತಿದೆ. ಖಾತೆ ವಿತರಿಸಿದ ನಂತರ ಸಚಿವರು ಅಸಮಾಧಾನ ವ್ಯಕ್ತಪಡಿಸುವ ಸಾಧ್ಯತೆ ಇದೆ.

ಮೊದಲ ಸುತ್ತಿನಲ್ಲಿಯೇ ಪ್ರಧಾನ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಈಗ ಉಳಿದಿರುವ ಕೆಲವೇ ಪ್ರಮುಖ ಖಾತೆಗಳಿಗೆ ಲಾಬಿ ಆರಂಭವಾಗಿದೆ.

ಅಧಿವೇಶನ ಪ್ರಾರಂಭವಾದ ನಂತರ ಅಪೂರ್ಣ ಖಾತೆ ಹಂಚಿಕೆ ಪಕ್ಷವನ್ನು ಮುಜುಗರಕ್ಕೆ ಒಳಪಡಿಸಬಹುದು. ಯಾರು ಯಾವ ಇಲಾಖೆಯನ್ನು ಹೊಂದಿದ್ದಾರೆ ಎಂಬುದರ ಪುಟ 2ಕ್ಕೆ

### ಮಹಿಳೆಯರಿಗೆ ಸ್ಥಾನ: ಡಿಕೆಶಿ

**ಬೆಂಗಳೂರು:** ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ಇದ್ದೇ ಇರುತ್ತದೆ. ನಾವು ಮಹಿಳೆಯರಿಗೆ ಹೆಚ್ಚು ಶಕ್ತಿ ನೀಡುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧ ಆವರಣದಲ್ಲಿ ಸಿಎಂ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದರು. ದೆಹಲಿಗೆ ಹೋಗುತ್ತಿದ್ದೀರಾ ಎಂದು ಕೇಳಿದಾಗ, ಹೋಗಲೇಬೇಕಲ್ಲವೇ, ನಿಮಗೆ ಮಾಹಿತಿ ನೀಡಿಯೇ ಹೋಗುತ್ತೇವೆ ಎಂದರು.

ಸದ್ಯದಲ್ಲೇ ಸಂಪುಟ ಪುಟ 2ಕ್ಕೆ

### ಪಾಪಕ್ಕೆ ಪ್ರಾಯಶ್ಚಿತ ಯಾತ್ರೆ!

**ಎಚ್‌ಡಿಕೆ ವಿರುದ್ಧ ಸಚಿವ ಬಾಲಕೃಷ್ಣ ವಾಗ್ದಾಳಿ**



**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಕೈಗೊಂಡಿರುವ ಪಾದಯಾತ್ರೆ ಎಚ್.ಡಿ.ಕುಮಾರಸ್ವಾಮಿ ಮಾಡಿದ ಪಾಪ ಕೃತ್ಯಕ್ಕೆ ಮಾಡಿಕೊಳ್ಳುತ್ತಿರುವ ಪ್ರಾಯಶ್ಚಿತ ಯಾತ್ರೆ ಎಂದು ಸಚಿವ ಎಚ್.ಸಿ.ಬಾಲಕೃಷ್ಣ ತೀವ್ರ ವಾಗ್ದಾಳಿ ನಡೆಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರೇ ತಂದ ಯೋಜನೆ ವಿರೋಧಿಸಿ ಅವರೇ ಪಾದಯಾತ್ರೆ ಮಾಡುತ್ತಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆ ಆರಂಭಿಸಿದ್ದೇ ಕುಮಾರಸ್ವಾಮಿ. ಈ ಯೋಜನೆ ಮಾಡಿ ಎಂದು ಯಾರಾದರೂ ಅವರನ್ನು ಕೇಳಿದ್ದರೇ ಎಂದು ಪ್ರಶ್ನಿಸಿದರು.

ರೈತರು ಪಾದಯಾತ್ರೆ ಪುಟ 2ಕ್ಕೆ

### ಎಲ್ಲಾ 32 ಸಚಿವರು ತ್ಯಾಗ ಮಾಡಲೇಬೇಕು!

**ಬೆಂಗಳೂರು:** ಮುಖ್ಯಮಂತ್ರಿ ಅಥವಾ ಹೈಕಮಾಂಡ್ ಅಧಿಕಾರ ತ್ಯಜಿಸಲು ಹೇಳಿದರೆ ಎಲ್ಲಾ 32 ಸಚಿವರೂ ತ್ಯಾಗ ಮಾಡಲೇಬೇಕು ಎಂದು ಸಚಿವ ಮಾಗಡಿ ಬಾಲಕೃಷ್ಣ ಹೇಳಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮಗೆ ಅಧಿಕಾರ ಕೊಟ್ಟವರು ಯಾರು? ಮುಖ್ಯಮಂತ್ರಿಗಳು. ಅವರು ಏನೇ ತೀರ್ಮಾನ ತೆಗೆದುಕೊಂಡರೂ ಪಕ್ಷದ ಹಿತದೃಷ್ಟಿಯಿಂದ ನಾನು ಪುಟ 2ಕ್ಕೆ

### ಆರ್‌ಎಸ್‌ಎಸ್ ವಿರುದ್ಧ ಕಾನೂನು ಕ್ರಮ

**ಸಂಘಟನೆ ಇತಿಹಾಸ ಅಧ್ಯಯನ: ಸಚಿವ ಪ್ರಿಯಾಂಕ್ ಖರ್ಗೆ**

**ಬೆಂಗಳೂರು:** ರಾಜ್ಯ ಸರ್ಕಾರ ಆರ್‌ಎಸ್‌ಎಸ್ ವಿರುದ್ಧ ಕಾನೂನು ಚೌಕಟ್ಟಿನೊಳಗೆ ಕ್ರಮ ಕೈಗೊಳ್ಳಲಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಅವರು, ಕಾನೂನು ಕ್ರಮವನ್ನು ನಿರ್ಧರಿಸುವ ಮೊದಲು ಸಂಘಟನೆ ಮತ್ತು ಅದರ ಇತಿಹಾಸವನ್ನು ಪುಟ 2ಕ್ಕೆ

## ಹೋರಾಟಕ್ಕೆ ಬಿಜೆಪಿ ಬೆಂಬಲ

### ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಪಾದಯಾತ್ರೆ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಆಯೋಜಿಸಿರುವ ಬೃಹತ್ ಪಾದಯಾತ್ರೆಗೆ ಮಿತ್ರಪಕ್ಷ ಬಿಜೆಪಿ ನೈತಿಕ ಬೆಂಬಲ ವ್ಯಕ್ತಪಡಿಸಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಬೆಂಗಳೂರಿನಲ್ಲಿ ಶನಿವಾರ ನಡೆದ ಜೆಡಿಎಸ್ ಮತ್ತು ಬಿಜೆಪಿ ಹಿರಿಯ ನಾಯಕರ ಸಭೆಯ ನಂತರ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ಬಿಡದಿ ಟೌನ್‌ಶಿಪ್ ಯೋಜನೆಯ ಬಗ್ಗೆ ನಾವು ಅತ್ಯಂತ ವಿವರವಾಗಿ ಚರ್ಚೆ ನಡೆಸಿದ್ದೇವೆ. ಮುಂಬರುವ ವಿಧಾನಸಭೆ ಕಲಾಪದಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿರುವ ವಿವಿಧ ವಿಷಯಗಳ ಬಗ್ಗೆ ಸಮಾಲೋಚಿಸಿದ್ದೇವೆ ಎಂದು ಅವರು ಹೇಳಿದರು.

ಬಿಡದಿ ಪಾದಯಾತ್ರೆಯನ್ನು ಬೈರಮಂಗಲದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೂ ಹಮ್ಮಿಕೊಳ್ಳಲಾಗಿದೆ. ನಿಖಿಲ್ ಕುಮಾರಸ್ವಾಮಿ ಪಾದಯಾತ್ರೆ ನೇತೃತ್ವ ವಹಿಸಿದ್ದಾರೆ. ಬಿಜೆಪಿ ನಾಯಕರು ಪಾದಯಾತ್ರೆ ಬಗ್ಗೆ ಅತ್ಯಂತ ಸಕಾರಾತ್ಮಕ ಮನಸ್ಸು ಹೊಂದಿದ್ದಾರೆ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ಪರಿಷತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಬಿಜೆಪಿ ನಾಯಕರು ಕೂಡ ಪಾದಯಾತ್ರೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ವಿಧಾನಮಂಡಲ ಅಧಿವೇಶನದಲ್ಲಿ ಬಿಡದಿ ಟೌನ್ ಶಿಪ್ ವಿಷಯ ಹಾಗೂ ನೈಸ್ ಯೋಜನೆಯ ಅಕ್ರಮಗಳ ಬಗ್ಗೆ ಧ್ವನಿ ಎತ್ತಲು ನಿರ್ಧರಿಸಲಾಗಿದೆ. ಈ ಬಗ್ಗೆ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಪುಟ 2ಕ್ಕೆ



### ಸರ್ಕಾರದ ನಡೆಗೆ ನಿರಾಸೆ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಯಾವುದೂ ಸರಿ ಇಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳು ಇವೆ. ಸಂಪುಟ ವಿಸ್ತರಣೆಗೆ ತಿಂಗಳಗಟ್ಟಲೆ ಸಮಯ ತೆಗೆದುಕೊಂಡರೂ ಇನ್ನೂ ಖಾತೆ ಹಂಚಿಕೆ ಕೂಡ ನಡೆದಿಲ್ಲ. ಸರ್ಕಾರದ ಕಾರ್ಯವೈಖರಿ ನೋಡಿದರೆ ತುಂಬಾ ನಿರಾಸೆಯಾಗುತ್ತದೆ. ಖಾತೆ ಹಂಚಿಕೆ ವಿಷಯ ಕಾಂಗ್ರೆಸ್ ದಿವಾಳಿತನ ತೋರುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ರಾಜ್ಯ ಹಿಂದೆಂದೂ ಸಿಲುಕಿರದಷ್ಟು ತೀವ್ರ ಬರಕ್ಕೆ ತುತ್ತಾಗಿದೆ. ಸರ್ಕಾರ ಜನರಿಗೆ ನೆರವಾಗುವಲ್ಲಿ ವಿಫಲವಾಗಿದೆ. ಅಧಿವೇಶನದಲ್ಲಿ ಈ ಬಗ್ಗೆಯೂ ಪ್ರಸ್ತಾಪಿಸಿ ಹೋರಾಟ ಮಾಡಲು ನಿರ್ಧರಿಸಲಾಯಿತು ಎಂದು ಸಚಿವರು ಮಾಹಿತಿ ನೀಡಿದರು.

ಇದಲ್ಲದೆ ವಾಲ್ಮೀಕಿ ಹಗರಣ, ಬೆಂಗಳೂರಿನಲ್ಲಿ ಅಸಮರ್ಪಕ ಕಸ ವಿಲೇವಾರಿ, ಕೆಪಿಎಸ್ಸಿ ಅಕ್ರಮ, ಪೊಲೀಸ್ ಇಲಾಖೆ ನೇಮಕಾತಿಯಲ್ಲಿ ಪುಟ 2ಕ್ಕೆ

## ಕೆರೆಗಳಿಗೆ ನೀರು ತುಂಬಿಸಲು ಕ್ರಮ

### ಕುಡಿಯುವ ನೀರಿನ ಅಭಾವ ನೀಗಲು ಅನುಕೂಲ: ಸಚಿವ ಯತೀಂದ್ರ

**ಮೈಸೂರು:** ಹಾರಂಗಿ ಹಾಗೂ ನುಗು ಜಲಾಶಯಗಳ ಕಾಲುವೆಗಳ ಮೂಲಕ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಕ್ರಮಕೈಗೊಳ್ಳಲಾಗಿದೆ. ಇದರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿ ಕುಡಿಯುವ ನೀರಿನ ಅಭಾವ ನೀಗಲು ಅನುಕೂಲವಾಗಲಿದೆ ಎಂದು ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ಎಚ್.ಡಿ.ಕೋಟೆ ತಾಲ್ಲೂಕಿನ ಗ್ರಾಮಗಳಲ್ಲಿ ಶನಿವಾರ ಬರ ಪರಿಸ್ಥಿತಿಯನ್ನು ವೀಕ್ಷಿಸಿದರು. ರೈತರು ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದರು. ಎಂ. ಕನ್ನೇನಹಳ್ಳಿ ಗ್ರಾಮದಲ್ಲಿ ಕೃಷಿ ಜಮೀನುಗಳನ್ನು ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ಪ್ರಸ್ತುತ ಹರಿಸಲಾಗುವ ನೀರನ್ನು ಕೃಷಿಗಿಂತ ಹೆಚ್ಚಾಗಿ ಕೆರೆಗಳನ್ನು ತುಂಬಿಸಲು ಬಳಸಲಾಗುತ್ತಿದೆ. ಕುಡಿಯುವ ನೀರಿನ ಪೂರೈಕೆ ನಮ್ಮ ಆದ್ಯತೆಯಾಗಿದೆ ಎಂದು ತಿಳಿಸಿದರು.

ಯಾವ್ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿದೆಯೋ ಅಲ್ಲೆಲ್ಲಾ ತಕ್ಷಣ ಹೊಸದಾಗಿ ಕೊಳವೆಬಾವಿ ಕೊರೆಯಲು ಸೂಚಿಸಲಾಗಿದೆ. ಕೊಳವೆಬಾವಿ ವಿಫಲವಾದರೆ ಖಾಸಗಿ ಬೋರವೆಲ್‌ಗಳನ್ನು ಬಾಡಿಗೆಗೆ ಪಡೆದು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ತಾರಕ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಹೊಸ ಪೈಪ್‌ಲೈನ್ ಕಾಮಗಾರಿ ಹಾಗೂ ವಿದ್ಯುತ್ ಸಂಪರ್ಕ ಬಾಕಿ ಇರುವ ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಿ, ಯೋಜನೆಯನ್ನು ಸಕ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಪುಟ 2ಕ್ಕೆ

## ಬೆಂ–ಮೈ ಹೆದ್ದಾರಿಯಲ್ಲಿ ಬಸ್ ಅಪಘಾತ: 2 ಸಾವು



ಬಿಡದಿ: ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶನಿವಾರ ಮುಂಜಾನೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ.

ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ನಡೆದಿದೆ. ಬಸ್ ನಿಯಂತ್ರಣ ತಪ್ಪಿ ಹೆದ್ದಾರಿ ಪಕ್ಕದಲ್ಲಿದ್ದ ಬೃಹತ್ ಸೈನ್ ಬೋರ್ಡ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಈ ಭೀಕರ ಅಪಘಾತದಲ್ಲಿ ಬಸ್ ಚಾಲಕ ಮತ್ತು ಕಂಡಕ್ಟರ್ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 14ಕ್ಕೂ ಹೆಚ್ಚು ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿದ್ದಾರೆ.

ರಾಮನಗರ ತಾಲೂಕಿನ ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯ ಅವರಗೆರೆ ಗೇಟ್ (ಬ್ರಿಡ್ಜ್) ಬಳಿ ಈ ದುರ್ಘಟನೆ ಸಂಭವಿಸಿದೆ. ಮೃತರನ್ನು ಚಾಲಕ ಮಿಥಿಲೇಶ್ ಮತ್ತು ಕಂಡಕ್ಟರ್ ಅರುಣ್ ಎಂದು ಗುರುತಿಸಲಾಗಿದೆ.

ಮುಂಜಾನೆ ಚಾಲಕನಿಗೆ ನಿದ್ದೆಯ ಮಂಪು ಆವರಿಸಿದ್ದೇ ಈ ದುರಂತಕ್ಕೆ ಪ್ರಾಥಮಿಕ ಕಾರಣ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

### ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 107.38 ಅಡಿ |
| ಒಳಹರಿವು | 12384 ಕ್ಯುಸೆಕ್ |
| ಹೊರ ಹರಿವು | 2208 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2282.71 ಅಡಿ |
| ಒಳಹರಿವು | 12820 ಕ್ಯುಸೆಕ್ |
| ಹೊರ ಹರಿವು | 9538 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2858.20 ಅಡಿ |
| ಒಳಹರಿವು | 8940 ಕ್ಯುಸೆಕ್ |
| ಹೊರ ಹರಿವು | 8000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2914.35 ಅಡಿ |
| ಒಳಹರಿವು | 5975 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

## ಕೆಲಸದಲ್ಲಿ ಕಿರುಕುಳ: ಮಹಿಳೆ ಆತ್ಮಹತ್ಯೆ

**ಮೈಸೂರು:** ಮಹಿಳಾ ಸೂಪರ್‌ವೈಸರ್ ಕಿರುಕುಳಕ್ಕೆ ಮನನೊಂದು ಕೀಟನಾಶಕ ಸೇವಿಸಿ ಮಹಿಳೆ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದಲ್ಲಿ ನಡೆದಿದೆ.



ನಗರದ ಹಿನಕಲ್ ಗ್ರಾಮದ ನಾಗೇಶ್ವರಿ ಆತ್ಮಹತ್ಯೆಗೆ ಶರಣಾದ ಮಹಿಳೆ. ಖಾಸಗಿ ಕಂಪನಿಯಲ್ಲಿ ನಾಗೇಶ್ವರಿ ಪ್ರಮೋಟರ್ ಆಗಿ ಕೆಲಸ ನಿರ್ವಹಣೆ ಮಾಡುತ್ತಿದ್ದರು.

ಕಳೆದ ಹಲವು ದಿನಗಳ ಹಿಂದೆ ಕಂಪನಿಗೆ ಸೂಪರ್ವೈಸರ್ ಆಗಿ ಡಾಲಿ ಎಂಬ ಮಹಿಳೆ ಬಂದಿದ್ದು ನನ್ನದಲ್ಲದ ತಪ್ಪಿಗೆ ನನ್ನನ್ನು ಗುರಿ ಮಾಡಿ ಕಿರುಕುಳ ಕೊಟ್ಟಿದ್ದಾರೆ. ಕಳೆದ 4 ತಿಂಗಳಿನಿಂದ ಒಂದು ವೀಕ್ ಆಫ್ ಕೂಡ ಕೊಟ್ಟಿಲ್ಲ. ಎಮರ್ಜೆನ್ಸಿ ರಜೆಗಳನ್ನು ಕೂಡ ಕೊಟ್ಟಿಲ್ಲ. ಪ್ರಶ್ನೆ ಮಾಡಿದರೆ ಕೆಲಸದಿಂದ

## ಲಾರಿಗೆ ಕಾರು ಡಿಕ್ಕಿ: ಮೂವರು ಸಾವು

**ಚಿಕ್ಕಮಗಳೂರು:** ರಸ್ತೆ ಬದಿ ನಿಂತಿದ್ದ ಎಲ್‌ಪಿಜಿ ಸಿಲಿಂಡರ್ ತುಂಬಿದ ಲಾರಿಗೆ ಕಾರು ಡಿಕ್ಕಿಯಾದ ಪರಿಣಾಮ ಮೂವರು ಸಾವನ್ನಪ್ಪಿದ್ದಾರೆ. ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ– ಚಾರ್ಮಾಡಿ ಘಾಟ್ ರಸ್ತೆಯ ಕೊಟ್ಟಿಗೆಹಾರ ಬಳಿ ಶನಿವಾರ ಮುಂಜಾನೆ ಸಂಭವಿಸಿದೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಹಳಿಲ್‌ಗದ್ದೆ ಗ್ರಾಮದವರಾದ ಗುರುಕಿರಣ್ (28), ಮೋಹನ್ (30), ಜ್ಞಾನೇಶ್ (28) ಎಂದು ಮೃತಪಟ್ಟವರನ್ನು ಗುರುತಿಸಲಾಗಿದೆ. ಗಂಭೀರ ಗಾಯಗೊಂಡಿರುವವರು ಪ್ರೇಮ್ ಕುಮಾರ್ ಹಾಗೂ ಹೃತಿಕ್ ಎಂದು ಗುರುತಿಸಲಾಗಿದೆ. ಈ ಐವರು ಒಂದೇ ಗ್ರಾಮದ ಸ್ನೇಹಿತರು ಎಂದು ತಿಳಿದು ಬಂದಿದೆ.



ತುಮಕೂರಿನಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಕಾರು ಕೊಟ್ಟಿಗೆಹಾರ ಬಳಿ ರಸ್ತೆ ಬದಿ ನಿಂತಿದ್ದ ಸಿಲಿಂಡರ್ ಲಾರಿಗೆ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ಮೂವರು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಸಾವನ್ನಪಿದ್ದಾರೆ.

ಅಪಘಾತದವಾದ ಕೂಡಲೇ ಸ್ಥಳೀಯರು ಕಾರಿನಲ್ಲಿ ಸಿಲುಕಿದ್ದ

## ಅಕ್ರಮಕ್ಕೆ ಸಂಚು: ಕೆಪಿಎಸ್‌ಸಿ ಇಬ್ಬರು ಸಿಬ್ಬಂದಿ ಬಂಧನ

### ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ಮಾಹಿತಿ ಸೋರಿಕೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿ ಈಗ ಮತ್ತೊಂದು ಗಂಭೀರ ಅಕ್ರಮ ಬೆಳಕಿಗೆ ಬಂದಿದೆ. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ಮಾಹಿತಿ ಸೋರಿಕೆ ಮಾಡಿದ ಆರೋಪದ ಮೇಲೆ ಇಬ್ಬರು ಸಿಬ್ಬಂದಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಲಸಂಪನ್ಮೂಲ ಇಲಾಖೆಯ ಕಿರಿಯ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ 1:3 ಅನುಪಾತದ ಅರ್ಹತಾ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳ ಮೊಬೈಲ್ ಸಂಖ್ಯೆ ಹಾಗೂ ಇತರ ವಿವರಗಳನ್ನು ಆಯೋಗದ ಒಳಗಿನಿಂದಲೇ ಮಧ್ಯವರ್ತಿಗಳಿಗೆ ಒದಗಿಸಲಾಗಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಕೆಪಿಎಸ್‌ಸಿಯ ತಾಂತ್ರಿಕ ಸಹಾಯಕ ಶರಣಪ್ಪ ಅಡವಳ್ಳಿ ಮತ್ತು ಹಿರಿಯ ಸಹಾಯಕ ಸ್ವಾಮಿದಾಸ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪುಟ 2ಕ್ಕೆ

## ಪತ್ರಕರ್ತ ಉದಯ್‌ಕುಮಾರ್‌ಗೆ ಖಾದ್ರಿ ಶಾಮಣ್ಣ ಪ್ರಶಸ್ತಿ

### ಅಸಮಾನತೆ ಹೋಗಲಾಡಿಸುವುದು ಪತ್ರಿಕಾಧರ್ಮ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು:** ಸಮಾಜದಲ್ಲಿ ಇರುವ ಅಸಮಾನತೆಯನ್ನು ಹೋಗಲಾಡಿಸಲು ಕೆಲಸ ಮಾಡುವುದೇ ಪತ್ರಿಕಾ ಧರ್ಮ. ಅದೇ ಸಂವಿಧಾನದ ಆಶಯ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪ್ರಜಾವಾಣಿ' ನಿವೃತ್ತ ಸಹಾಯಕ ಸಂಪಾದಕ ಉದಯ್‌ಕುಮಾರ್ ಅವರಿಗೆ ಖಾದ್ರಿ ಶಾಮಣ್ಣ ಟ್ರಸ್ಟ್ ವತಿಯಿಂದ ಶನಿವಾರ ಶೇಷಾದ್ರಿಪುರಂ ಕಾಲೇಜಿನಲ್ಲಿ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ಪತ್ರಿಕೋದ್ಯಮದಲ್ಲಿ ಅನನ್ಯ ಸೇವೆಯನ್ನು ಮಾಡಿ, ಪತ್ರಿಕಾ ಧರ್ಮವನ್ನು ಹಾಗೂ ಅದರ ಮೌಲ್ಯವನ್ನು ಎತ್ತಿ ಹಿಡಿಯುವ ಕೆಲಸ ಮಾಡಿರುವುದಕ್ಕೆ ಉದಯ ಕುಮಾರ್ ಅವರಿಗೆ ಈ ಪ್ರಶಸ್ತಿ ಸಂದಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಅದರಲ್ಲೂ ಮುಖ್ಯವಾಗಿ, ಯುವಕರಲ್ಲಿ ಪತ್ರಿಕೋದ್ಯಮದ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ಪತ್ರಿಕೋದ್ಯಮ ಬಹಳ ಮುಖ್ಯವಾಗಿದ್ದು, ಅದು ಪ್ರಜಾಪ್ರಭುತ್ವದ ಜೀವಾಳ ಎಂದರು.



ಪ್ರತಿಯೊಬ್ಬರು ಕೂಡ ಸಂವಿಧಾನವನ್ನು ತಿಳಿದುಕೊಳ್ಳುವುದು ಅವಶ್ಯಕ, ಅದರಲ್ಲೂ ಪತ್ರಿಕೋದ್ಯಮದಲ್ಲಿ ಇರುವವರು ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ ಎಂದರು. ಸಂವಿಧಾನ ನಿಮಗೆ ಸ್ವಾತಂತ್ರ್ಯವನ್ನು ಕೊಟ್ಟಿದೆ. ಆ ಸ್ವಾತಂತ್ರ್ಯವನ್ನು ಸರಿಯಾಗಿ ಉಪಯೋಗಿಸದೇ ಇದ್ದರೆ ಪ್ರಜಾಪ್ರಭುತ್ವದ ಆಶಯಗಳನ್ನು ಈಡೇರಿಸಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಪತ್ರಿಕೋದ್ಯಮದ ದಾರಿ ಬದಲಾಗುತ್ತಿದೆ. ಕೆಲವು ಪತ್ರಕೋದ್ಯಮ ಸಂಸ್ಥೆಗಳು ಅದರ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ವಿಫಲವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಿಕೆಗಳು ನಿಷ್ಪಕ್ಷಪಾತವಾಗಿ ನೈಜ ವಿಷಯಗಳನ್ನು ಜನರ ಎದುರು ಇಡಬೇಕು. ಪತ್ರಿಕೋದ್ಯಮ ಜಾತ್ಯತೀತವಾಗಿವಾಗಿರಬೇಕು.

## ಸಾವಿರ ಅಕ್ರಮ ವಲಸಿಗರ ಪತ್ತೆ

### ರಾಜ್ಯದಲ್ಲಿ 3 ತಿಂಗಳಿಂದ ಶೋಧ ಕಾರ್ಯಾಚರಣೆ: ಪ್ರಿಯಾಂಕ್



**ಬೆಂಗಳೂರು:** ರಾಜ್ಯದಲ್ಲಿ ಕಳೆದ 3 ತಿಂಗಳ ಅವಧಿಯಲ್ಲಿ ಸಾವಿರ ಮಂದಿ ಅಕ್ರಮ ವಲಸಿಗರು ಪತ್ತೆಯಾಗಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ತಿಂಗಳಿನಿಂದ ನಡೆಸುತ್ತಿರುವ ಕಟ್ಟುನಿಟ್ಟಿನ ತಪಾಸಣೆ ಮತ್ತು ಶೋಧ ಕಾರ್ಯಾಚರಣೆಯಲ್ಲಿ ಬಾಂಗ್ಲಾ



ದೇಶ ಹಾಗೂ ಆಫ್ರಿಕಾದಿಂದ ಬಂದಿರುವ ಶಂಕಿತ ಅಕ್ರಮ ವಲಸಿಗರು ಸೇರಿದಂತೆ ಸುಮಾರು 1,000 ಮಂದಿಯನ್ನು ಗುರುತಿಸಲಾಗಿದೆ ಎಂದು ತಿಳಿಸಿದರು. ಅಕ್ರಮ ವಲಸಿಗರ ವಿರುದ್ಧ ಸರ್ಕಾರ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುತ್ತಿದೆ. ಈ ಕಾರ್ಯಾಚರಣೆ ತಾತ್ಕಾಲಿಕವಾಗಿ ನಡೆಸಿ ನಿಲ್ಲಿಸುವುದಿಲ್ಲ. ನಿರಂತರವಾಗಿ ಮುಂದು ವರಿಯಲಿದೆ

### ಕೇಂದ್ರ ಸರ್ಕಾರದ ನಿರ್ಲಕ್ಷ್ಯ

ರಾಜ್ಯಕ್ಕೆ ಅಕ್ರಮ ವಲಸಿಗರು ಯಾವ ಮಾರ್ಗದ ಮೂಲಕ ಪ್ರವೇಶಿಸುತ್ತಿದ್ದಾರೆ ಎಂಬ ಪ್ರಶ್ನೆಯನ್ನೂ ಪ್ರಿಯಾಂಕ್ ಖರ್ಗೆ ಎತ್ತಿದರು. ಅಂತರರಾಷ್ಟ್ರೀಯ ಗಡಿ ಭದ್ರತೆ ಕೇಂದ್ರ ಸರ್ಕಾರದ ಜವಾಬ್ದಾರಿ. ನಮ್ಮ ರಾಜ್ಯಕ್ಕೆ ಯಾವುದೇ ಅಂತರರಾಷ್ಟ್ರೀಯ ಗಡಿ ಇಲ್ಲ. ಬಾಂಗ್ಲಾದೇಶ, ನೇಪಾಳ ಅಥವಾ ಬೇರೆ ಯಾವುದೇ ದೇಶದೊಂದಿಗೆ ನಾವು ಗಡಿ ಹಂಚಿಕೊಂಡಿಲ್ಲ. ಆದರೆ ಅವರು ರಾಜ್ಯಕ್ಕೆ ಎಲ್ಲಿಂದ ಬರುತ್ತಿದ್ದಾರೆ? ತ್ರಿಪುರ, ಅಸ್ಸಾಂ ಅಥವಾ ಪಶ್ಚಿಮ ಬಂಗಾಳದ ಪುಟ 2ಕ್ಕೆ

**ಮೊದಲ ಪುಟದಿಂದ**

## ಪಾಪಕ್ಕೆ ಪ್ರಾಯಶ್ಚಿತ ಯಾತ್ರೆ!

ಮಾಡಿದರೆ ನಾವು ವಿರೋಧಿಸುವುದಿಲ್ಲ. ಆದರೆ ಜೆಡಿಎಸ್-ಬಿಜೆಪಿಯವರು ಕೂತು ಕೂತು ದಪ್ಪ ಆಗಿದ್ದಾರೆ. ಸ್ವಲ್ಪ ಕರಗಲಿ ಎಂದು ವಾಕಿಂಗ್ ಮಾಡುತ್ತಿದ್ದಾರೆ. ದೇವರು ಅವರಿಗೆ ಒಳ್ಳೆಯದು ಮಾಡಲಿ ಎಂದು ಟಾಂಗ್ ನೀಡಿದರು. ಯಾರ ಆಡಳಿತ ಅವಧಿಯಲ್ಲಿ ಏನೇನು ನಿರ್ಧಾರ ಕೈಗೊಳ್ಳಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನೊಳಗೊಂಡ ಜಾಹೀರಾತನ್ನು ಶೀಘ್ರದಲ್ಲೇ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ವತಿಯಿಂದ ನೀಡಲಾಗುವುದು ಎಂದು ಸಚಿವರು ತಿಳಿಸಿದರು..

## ಸಚಿವರು ತ್ಯಾಗ ಮಾಡಲೇಬೇಕು!

ಅದಕ್ಕೆ ತಲೆಬಾಗುತ್ತೇವೆ. ಮುಖ್ಯಮಂತ್ರಿ ಹೇಳಿದ ಹಾಗೆ ನಾವೆಲ್ಲರೂ ಕೇಳಬೇಕು ಎಂದು ಸ್ಪಷ್ಟಪಡಿಸಿದರು. ನಮ್ಮ ಪಕ್ಷದಲ್ಲಿ 100ಕ್ಕೂ ಹೆಚ್ಚು ಪವರ್‌ಫುಲ್ ಶಾಸಕರಿದ್ದಾರೆ. ಆದರೆ, ಸಚಿವ ಸ್ಥಾನ ನೀಡಲು 33 ಮಂದಿಗೆ ಮಾತ್ರ ಅವಕಾಶವಿದೆ. ಹೀಗಾಗಿ ಎಲ್ಲರೂ ಹೊಂದಿಕೊಂಡು ಹೋಗಬೇಕಾಗಿದೆ. ಇಂದು ಏನಾದರೂ ತಪ್ಪಾಗಿದೆ ಎಂದರೆ, ಮುಂದೆ ಒಳ್ಳೆಯದು ಆಗಬಹುದು. ಈಗ ನಮಗೆ ತೊಂದರೆ ಆಗಿದ್ದರೆ, ಮುಂದಿನ ದಿನಗಳಲ್ಲಿ ಒಳ್ಳೆಯ ಅವಕಾಶ ಕಾದಿರಬಹುದು. ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಈ ವಿಚಾರವನ್ನು ತೀರ್ಮಾನ ಮಾಡುತ್ತಾರೆ ಎಂದರು.

## ಆರ್‌ಎಸ್‌ಎಸ್ ವಿರುದ್ಧ ಕಾನೂನು ಕ್ರಮ

ಅಧ್ಯಯನ ಮಾಡುತ್ತಿರುವುದಾಗಿ ತಿಳಿಸಿದರು. ಆರ್‌ಎಸ್‌ಎಸ್ ಅನ್ನು ಕಾನೂನು ಚೌಕಟ್ಟಿನೊಳಗೆ ತರುವುದಾಗಿ ಪ್ರತಿಪಾದಿಸಿದರು. ಸಂಘಟನೆಯ ನೋಂದಣಿ ಸೇರಿದಂತೆ ಹಲವು ವಿಷಯಗಳ ಕುರಿತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಬರೆದ ಪತ್ರಕ್ಕೆ ಉತ್ತರ ಬಂದಿದೆಯೇ ಎಂದು ಪ್ರಿಯಾಂಕ್ ಖರ್ಗೆ ಅವರನ್ನು ಕೇಳಿದಾಗ, ಅವರಿಂದ ಪ್ರತಿಕ್ರಿಯೆ ನಿರೀಕ್ಷಿಸಿರಲಿಲ್ಲ. ಅದು ಬರುವುದಿಲ್ಲ ಎಂದು ನಾನು ನಿಮಗೆ ಹೇಳಿದ್ದೇನೆ ಅಲ್ಲವೇ? ನಾವು ಅದನ್ನು ಸರಿಯಾಗಿ ನಿಭಾಯಿಸುತ್ತೇವೆ. ನಾವು ಏನೇ ಮಾಡಿದರೂ ಅದು ಕಾನೂನು ಚೌಕಟ್ಟಿನೊಳಗೆ ಇರಬೇಕು. ಆರ್‌ಎಸ್‌ಎಸ್ ಅವರು ಕಾನೂನು ಚೌಕಟ್ಟಿನ ಹೊರಗಿದ್ದಾರೆ. ನಾನು ಅವರನ್ನು ಅದರೊಳಗೆ ತರುತ್ತೇನೆ ಎಂದು ಸಚಿವರು ಹೇಳಿದರು..

## ಕೆಪಿಎಸ್‌ಸಿ ಸಿಬ್ಬಂದಿ ಬಂಧನ

ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆಯುತ್ತಿದೆ ಎಂದು ಆರೋಪಿಸಿ ಕೆಲವು ಅಭ್ಯರ್ಥಿಗಳು ಆಯೋಗಕ್ಕೆ ದೂರು ನೀಡಿದ್ದರು. ಮಧ್ಯವರ್ತಿಗಳು ಕರೆ ಮಾಡಿ, ನಾವು ಆಯೋಗದವರೇ, ಹಣ ನೀಡಿದರೆ ಉದ್ಯೋಗ ಖಚಿತ ಎಂದು ಹೇಳಿರುವ ಆಡಿಯೋ ಹಾಗೂ ವಾಟ್ಸ್ ದಾಖಲೆಗಳನ್ನು ಅವರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಆಯೋಗದ ಸಹಾಯಕ ಕಾರ್ಯದರ್ಶಿ ಬಿ.ಎನ್. ಶೋಭಾ ಅವರು ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ಆರಂಭಿಸಿದ ಪೊಲೀಸರು ಮೂವರು ಮಧ್ಯವರ್ತಿಗಳನ್ನು ಬಂಧಿಸಿದ್ದರು. ಅವರ ವಿಚಾರಣೆ ವೇಳೆ ಮತ್ತೊಬ್ಬ ಆರೋಪಿ ಹೆಸರು ಬಹಿರಂಗವಾಗಿತ್ತು. ಬಳಿಕ ಅವರನ್ನೂ ವಶಕ್ಕೆ ಪಡೆಯಲಾಗಿದೆ. ಬಂಧಿತರ ಮಾಹಿತಿ ಆಧರಿಸಿ ಆಯೋಗದ ಒಳಗಿನಿಂದಲೇ ಮಾಹಿತಿ ಸೋರಿಕೆಯಾಗಿರುವುದು ಸ್ಪಷ್ಟವಾದ ಹಿನ್ನೆಲೆಯಲ್ಲಿ ಇಬ್ಬರು ಸಿಬ್ಬಂದಿಯನ್ನು ಬಂಧಿಸಿದ್ದಾರೆ.

## ಕೇಂದ್ರ ಸರ್ಕಾರದ ನಿರ್ಲಕ್ಷ್ಯ

ಮೂಲಕ ಬರುತ್ತಿದ್ದಾರೆಯೇ? ಗಡಿ ಭದ್ರತೆ ಕೇಂದ್ರ ಸರ್ಕಾರದ ಜವಾಬ್ದಾರಿ. ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಜನರು ಇಷ್ಟು ದೂರ ಬರುತ್ತಿದ್ದಾರೆ ಎಂದರೆ ಅಂತರರಾಷ್ಟ್ರೀಯ ಗಡಿಗಳು ಮಾತ್ರವಲ್ಲ, ರಾಜ್ಯಗಳ ನಡುವಿನ ಗಡಿಗಳೂ ದುರ್ಬಲವಾಗಿವೆ ಎಂದರ್ಥ ಎಂದು ಖರ್ಗೆ ಹೇಳಿದರು.

## ಸಾವಿರ ಅಕ್ರಮ ವಲಸಿಗರ ಪತ್ತೆ

ಎಂದು ಸ್ಪಷ್ಟಪಡಿಸಿದರು. ಬಾಂಗ್ಲಾದೇಶದಿಂದ ಬಂದಿರುವ ಅಕ್ರಮ ವಲಸಿಗರ ಕುರಿತು ಶೋಧ ನಡೆಸಲಾಗು ತ್ತಿದೆ. ನಾವು ಕಟ್ಟುನಿಟ್ಟಾಗಿ ಹಾಗೂ ಗಂಭೀರವಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದೇವೆ. ಅವರೆಲ್ಲರೂ ಮೊದಲಿಗೆ ಉತ್ತರ ಭಾರತಕ್ಕೆ ಆಗಮಿಸಿ, ನಂತರ ಅಲ್ಲಿಂದ ಬರುತ್ತಿದ್ದಾರೆ ಎಂದರು..

## ಕೆರೆಗಳಿಗೆ ನೀರು ತುಂಬಿಸಲು ಕ್ರಮ

ಸಾರ್ವಜನಿಕರಿಗೆ ಪೂರೈಸುವ ನೀರನ್ನು ಕಡ್ಡಾಯವಾಗಿ ಪ್ರಯೋಗಾಲಯದಲ್ಲಿ ಪರೀಕ್ಷಿಸಬೇಕು ಹಾಗೂ ನೀರಿನ ಟ್ಯಾಂಕ್‌ಗಳನ್ನು ನಿರಂತರವಾಗಿ ಶುಚಿಗೊಳಿಸಿ, ಶುದ್ಧ ನೀರನ್ನು ಪೂರೈಸುವಂತೆಯೂ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಯುಕೇಶ್‌ಕುಮಾರ್ ಇದ್ದರು.

## ಮಹಿಳೆ ಆತ್ಮಹತ್ಯೆ

ಕಿತ್ತು ಹಾಕಿದರು. ನೋಟಿಸ್ ಪಿರಿಯಡ್ ಕೂಡ ನೀಡಲಿಲ್ಲ. ಡಾಲಿ ಮೇಡಂ ಕಿರುಕುಳಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ನ್ಯಾಯ ಕೊಡಿಸಿ ಎಂದು ಡೆತ್ ನೋಟ್ ನಲ್ಲಿ ನಾಗೇಶ್ವರಿ ಉಲ್ಲೇಖ ಮಾಡಿದ್ದಾರೆ. ವಿಜಯನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

## ಮಹಿಳೆಯರಿಗೆ ಸ್ಥಾನ: ಡಿಕೆಶಿ

ವಿಸ್ತರಣೆ ವಿಚಾರ ಬಗೆಹರಿಯಲಿದೆ. ರಿಜಿಜು ಅವರು ಕಾಂಗ್ರೆಸ್ ಪಕ್ಷದ ಬಗ್ಗೆ ಚಿಂತಿಸುವುದು ಬೇಡ, ಅವರು ತಮ್ಮ ಪಕ್ಷ ಹಾಗೂ ಸರ್ಕಾರದ ಬಗ್ಗೆ ಆಲೋಚಿಸಲಿ ಎಂದರು. ರಾಹುಲ್ ಗಾಂಧಿ ಅವರು ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಚರ್ಚೆ ಮಾಡಿದ್ದಕ್ಕೆ ಕಿರಣ್ ರಿಜಿಜು ಅವರು ಕರ್ನಾಟಕ ಸಚಿವ ಸಂಪುಟದಲ್ಲಿ ಮಹಿಳೆಯರಿಲ್ಲ ಎಂಬ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು ಈ ಮಸೂದೆಯನ್ನು ರೂಪಿಸಿ, ಲೋಕಸಭೆಯಲ್ಲಿ ಪಾಸ್ ಮಾಡಿದ್ದವರು ಕಾಂಗ್ರೆಸ್ ನವರು. ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ನಾವು ಮಹಿಳೆರಿಗೆ ಹೆಚ್ಚು ಸ್ಥಾನ ನೀಡಿದ್ದೆವು ಎಂದರು.

## ಮುಗಿಯದ 'ಖಾತೆ ಕಗ್ಗಂಟು'

ಕುರಿತು ಸ್ಪಷ್ಟತೆ ಇಲ್ಲದೆ, ಯಾರು ಉತ್ತರಿಸಲು ಎದ್ದು ನಿಲ್ಲುತ್ತಾರೆ ಎಂಬ ಬಗ್ಗೆ ಆತಂಕ ಹೆಚ್ಚುತ್ತಿದೆ. ಹೊಸದಾಗಿ ನೇಮಕಗೊಂಡ ಸಚಿವರಿಗೆ ತಮ್ಮ ಖಾತೆಯ ಬಗ್ಗೆ ಸಂಕ್ಷಿಪ್ತ ವಿವರಣೆಗಳನ್ನು ಕರಗತ ಮಾಡಿಕೊಳ್ಳಲು ಸಮಯ ಸಿಗದಿರುವ ಬಗ್ಗೆ ಸಚಿವರು ಆತಂಕಕ್ಕೆ ಒಳಗಾಗಿದ್ದಾರೆ. ಅಧಿವೇಶನ ಪ್ರಾರಂಭವಾಗುವ ಸ್ವಲ್ಪ ಮೊದಲು ಖಾತೆ ಘೋಷಿಸಿದರೆ, ವಿರೋಧ ಪಕ್ಷಗಳಿಂದ ಮುಜುಗರ ಅನುಭವಿಸುವ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ನಕ್ಷತ್ರ ಗುರುತಿನ ಪ್ರಶ್ನೆಗೆ ಯಾರೂ ಉತ್ತರಿಸಲಾಗುವುದಿಲ್ಲ ಎನ್ನಲಾಗಿದೆ.

## ಸರ್ಕಾರದ ನಡೆಗೆ ನಿರಾಸೆ

ನಡೆದಿರುವ ಅಕ್ರಮ, ಗೃಹಲಕ್ಷ್ಮಿ ಯೋಜನೆ ಹಣ ದುರ್ಬಳಕೆ ಮುಂತಾದ ವಿಷಯಗಳ ಬಗ್ಗೆ ಎರಡು ಪಕ್ಷಗಳು ದನಿಯ ಎತ್ತುತ್ತೇವೆ ಎಂದರು.

## ಹೋರಾಟಕ್ಕೆ ಬಿಜೆಪಿ ಬೆಂಬಲ

ಒಮ್ಮತದಿಂದ ಹೋರಾಟ ನಡೆಸಲಿದೆ. ಎರಡೂ ಪಕ್ಷಗಳ ನಡುವೆ ಸಮನ್ವಯ ಕೊರತೆ ಆಗಬಾರದು ಎಂಬ ನಿಟ್ಟಿನಲ್ಲಿ ಚರ್ಚೆ ಮಾಡಿದ್ದೇವೆ. ನಾನೇ ಪಾದಯಾತ್ರೆಗೆ ಚಾಲನೆ ನೀಡುತ್ತೇನೆ ಎಂದರು. ಬಿಡದಿ ವಿಚಾರದಲ್ಲಿ ಸದನದಲ್ಲೂ ಚರ್ಚೆ ಆಗಲೇಬೇಕು. ರೈತರ ಮಹಿಳೆಯರ ಹೋರಾಟವನ್ನು ಇಡೀ ರಾಜ್ಯ ನೋಡುತ್ತಿದೆ. ರೈತರು ಭೂಮಿ ಕೊಡಲು ತಯಾರಿಲ್ಲ. ಕೇವಲ ರೈತರ ಭೂಮಿಯನ್ನು ಲೂಟಿ ಒಡೆಯಲು ಯೋಜನೆಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಬಿಜೆಪಿ ನಾಯಕರು ಜೊತೆ ವಿಸ್ತೃತವಾಗಿ ಚರ್ಚೆ ನಡೆಸಿದ್ದೇನೆ ಎಂದು ಹೇಳಿದರು. ಸಭೆಯಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ನಾಯಕ ಸುರೇಶ್ ಬಾಬು ಇತರರು ಭಾಗಿಯಾಗಿದ್ದರು.

## ಲಾರಿಗೆ ಕಾರು ಡಿಕ್ಕಿ: ಮೂವರು ಸಾವು

ಗಾಯಾಳುಗಳನ್ನು ಹೊರತೆಗೆದು ಆಸ್ಪತ್ರೆಗೆ ರವಾನಿಸಿದ್ದಾರೆ. ಸ್ಥಳಕ್ಕೆ ಬಣಕಲ್ ಠಾಣಾ ಪೊಲೀಸರು ಭೇಟಿ ನೀಡಿ ಪರಿಶಿಲನೆ ನಡೆಸಿದರು. ಕಾರು ಚಾಲಕನ ಅತೀ ವೇಗ ಹಾಗೂ ನಿದ್ರೆ ಮಂಪರಿನಲ್ಲಿದ್ದ ಕಾರಣ ಅಪಘಾತ ನಡೆದಿರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

# ಸೂಕ್ತ ಪರಿಹಾರಕ್ಕೆ ಸಿಎಂಗೆ ವರದಿ: ಡಾ.ಯತೀಂದ್ರ

ಎಚ್.ಡಿ.ಕೋಟೆ: ತಾಲೂಕಿನ 38 ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೂರಿದೆ. ಇದರ ನಿವಾರಣೆ ಪರಿಹಾರವಾಗಿ ತಾಲೂಕು ಆಡಳಿತದ ವತಿಯಿಂದ 32 ಕೊಳವೆ ಬಾವಿಗಳನ್ನು ಕೊರೆಸಲಾಗಿದ್ದು, ಶೀಘ್ರದಲ್ಲಿ ಕುಡಿಯು ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಸಮೀಪದ ಚಿಕ್ಕೆರೆಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಾಮನಹಳ್ಳಿಹುಂಡಿಗೆ ಭೇಟಿ ನೀಡಿ ಕುಡಿಯುವ ನೀರಿನ ಲಭ್ಯತೆ ಕುರಿತು ಪರಿಶೀಲನೆ ನಡೆಸಿ ಮಾತನಾಡಿ, 38 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇದ್ದರೂ ಸಹ ಕೇವಲ 32 ಕೊಳವೆ ಬಾವಿಗಳನ್ನು ಕೊರೆಸಲಾಗಿದ್ದು, ಅದರಲ್ಲಿ 6 ಕೊಳವೆಬಾವಿಗಳಲ್ಲಿ ನೀರು ಬಂದಿಲ್ಲ. ಒಟ್ಟಾರೆ ಇನ್ನೂ ಸಹ 12 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ತಾಲೂಕು ಆಡಳಿತ ವಿಫಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸಕ್ತ ಸಾಲಿನಲ್ಲಿ ಮಳೆಗಾಲದಲ್ಲೇ ನೀರಿನ



ಸಮಸ್ಯೆ ತಲೆದೂರಿದ್ದು, ಮುಂಬರುವ ಬೇಸಿಗೆ ದಿನಗಳನ್ನು ಅಧಿಕಾರಿಗಳು ಹೇಗೆ ಎದುರಿಸುತ್ತೀರಿ ಎಂದು ಅಧಿಕಾರಿಗಳಿಗೆ ಪ್ರಶ್ನಿಸಿದರು.

ರೈತರು ಬೆಳೆಗಳ ಬಗ್ಗೆ ಮಾತನಾಡಿ, ತಾಲೂಕಿನಲ್ಲಿ ಮಳೆ ಅಭಾವದಿಂದ ನಿಗಧಿತ ಪ್ರಮಾಣದಲ್ಲಿ ಬಿತ್ತನೆಗಳನ್ನು ಮಾಡಿಲ್ಲ. ಅಲ್ಪಾವಧಿ ಬೆಳೆಗಳನ್ನು ಮಾತ್ರ ಬೆಳೆದಿದ್ದು, ಆ ಬೆಳೆಗಳು ಸಹ ಮಳೆಯ ಅಭಾವದಿಂದ ಮತ್ತು ರೋಗದಿಂದ ಅಪಾರ ಪ್ರಮಾಣದಲ್ಲಿ ಹಾನಿಯುಂಟಾಗಿದೆ. ಇದು ಇಡೀ ಜಿಲ್ಲೆಯಲ್ಲೇ ಕಂಡು ಬಂದ ದೃಶ್ಯವಾಗಿದೆ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಿ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಲಾಗುವುದು ಎಂದರು. ಹಂಪಾಪುರ ಹೋಬಳಿಯಲ್ಲಿ ಇಬ್ಬಾಲ ಕೆರೆ ತುಂಬಿಸುವ ಯೋಜನೆಯಿಂದಾಗಿ 27 ಕೆರೆಗಳನ್ನು ತುಂಬಿಸಲಾಗಿದೆ, ಇನ್ನೂ 11 ಕೆರೆಗಳು ತುಂಬಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ನೀರಾವರಿ ಸಚಿವರು ಸಹ ಸೂಚನೆಯನ್ನು ನೀಡಿದ್ದು ಹಾರಂಗಿಯಿಂದಲೂ ಸಹ ನಾಲೆಗಳ ಮೂಲಕ ನೀರನ್ನು ಹರಿಸಿ ಕೆರೆಗಳನ್ನು ತುಂಬಿಸಲಾಗುವುದು, ಇದರಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯನ್ನು ನೀಗಿಸಬಹುದು, ಜೊತೆಗೆ ಅಂತರ್ಜಲ ಮಟ್ಟ ಚೇತರಿಸಿಕೊಳ್ಳಲಿದ್ದು ತೋಟಗಾರಿಕ ಬೆಳೆಗಳಿಗೆ ಅನುವಾಗಲಿದೆ ಎಂದರು.

### ಗ್ರಾಮಗಳ ಬೇಟಿ ಕಡ್ಡಾಯ

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೂ ನಿಯಮಿತವಾಗಿ ತೆರಳಿ ನೀರಿನ ಕೊರತೆಯ ಬಗ್ಗೆ ಮಾಹಿತಿ ಕಲೆ ಹಾಕಬೇಕು. ಕುಡಿಯುವ ನೀರಿನ ತೊಂದರೆ ಕಂಡುಬಂದಲ್ಲಿ ಖುದ್ದು ತಾವೇ ನೀರು ಒದಗಿಸುವ ಮೂಲವನ್ನು ಕಂಡುಕೊಳ್ಳಬೇಕು. ಈ ಬಗ್ಗೆ ತಾಲೂಕು ಆಡಳಿತ ಆಗಾಗ್ಗೆ ಪಿಡಿಒಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು. ಪಿಡಿಒಗಳು ತೆರಳಿಲ್ಲ ಎಂದು ತಿಳಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಎಲ್ಲ ಇಲಾಖೆಗಳ ಅಧಿಕಾರಿಗಳು ಇದ್ದರು.**

# ನಾಲ್ವರು ಆರೋಪಿಗಳ ಬಂಧನ

## ಗುತ್ತಿಗೆದಾರನ ಅಪಹರಣ ಪ್ರಕರಣ: ಉಳಿದವರಿಗಾಗಿ ಶೋಧ

ಮೈಸೂರು ಜಿಲ್ಲೆಯ ವರುಣ ಪೊಲೀಸ್ ಠಾಣಾ ವ್ಯಾಪ್ತಿಯ ಮುದ್ದೇಗೌಡನಹುಂಡಿ ಗ್ರಾಮದ ಗುತ್ತಿಗೆದಾರ ರಾಮು ಎಂಬುವರನ್ನು ತೋಟದ ಮನೆಯ ಬಳಿ ಅಪಹರಿಸಿ ಹಣ ವಸೂಲಿ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ಮೈಸೂರು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಕುರಿತು ನಡೆಸಿದ ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು. ಜುಲೈ 15ರಂದು ತೋಟದ ಮನೆಯ ಬಳಿ ಕಾರಿನಲ್ಲಿ ಬಂದ ದರೋಡೆಕೋರರ ತಂಡವು ಗುತ್ತಿಗೆದಾರ ರಾಮು ಅವರನ್ನು ಅಪಹರಿಸಿತ್ತು. ಅವರ ಬಳಿಯಿದ್ದ 30 ಗ್ರಾಂ ಚಿನ್ನದ ಸರ, ಉಂಗುರ ಹಾಗೂ 40 ಸಾವಿರ ರೂಪಾಯಿ ನಗದನ್ನು ಕಿತ್ತುಕೊಂಡಿದ್ದಲ್ಲದೆ, ಬಿಡುಗಡೆ ಮಾಡಲು 40 ಲಕ್ಷ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಕೊನೆಗೆ 16 ಲಕ್ಷ ರೂಪಾಯಿಗಳನ್ನು ಪಡೆದುಕೊಂಡು ರಾಮು ಅವರನ್ನು ಬಿಟ್ಟು ಕಳುಹಿಸಿದ್ದರು. ಈ ಸಂಬಂಧ ರಾಮು ಅವರು ವರುಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

### ಇಬ್ಬರು ಬೈಕ್ ಕಳ್ಳರ ಸೆರೆ ಹಾಗೂ 9 ದ್ವಿಚಕ್ರ ವಾಹನಗಳ ಜಪ್ತಿ

ಮತ್ತೊಂದು ಪ್ರಕರಣದಲ್ಲಿ, ಕೆ.ಆರ್. ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸರಣಿ ಬೈಕ್ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಅವರಿಂದ ಕಳವು ಮಾಡಲಾಗಿದ್ದ 9 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರು ಇತರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಬೈಕ್ ಕಳ್ಳತನ ಕೃತ್ಯಗಳಲ್ಲಿ ಭಾಗಿಯಾಗಿರುವುದು ವಿಚಾರಣೆಯಿಂದ ತಿಳಿದುಬಂದಿದೆ.

### ಮಣಿಪಾಲ್ ಸಿಗ್ನಲ್ ಬಳಿ ಕಾರು ಚಾಲಕನಿಗೆ ದರೋಡೆ

**ಓರ್ವ ಮಹಿಳೆ ಸೇರಿ ನಾಲ್ವರ ಬಂಧನ**



ನಾಲ್ಕು ದಿನಗಳ ಹಿಂದೆ ಮೈಸೂರು ನಗರದ ಹೊರಭಾಗದ ಮಣಿಪಾಲ್ ಸಿಗ್ನಲ್ ಬಳಿ ಲಿಫ್ಟ್ ಪಡೆದು ದರೋಡೆ ನಡೆಸಿದ್ದ ಜಾಲವನ್ನು ಪೊಲೀಸರು ಭೇದಿಸಿದ್ದಾರೆ. ಮಹಿಳೆ ಹಾಗೂ ಪುರುಷರೊಬ್ಬರು ಕಾರು ಹತ್ತಿದ ಸ್ವಲ್ಪ ದೂರದಲ್ಲೇ, ಬೈಕಿನಲ್ಲಿ ಹಿಂಬಾಲಿಸಿ ಬಂದ ಇಬ್ಬರು ಸಹಚರರು ಕಾರು ತಡೆದು ಚಾಲಕನ ಚಿನ್ನ, ಮೊಬೈಲ್ ಹಾಗೂ ಹಣವನ್ನು ದೋಚಿ ಪರಾರಿಯಾಗಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಸಯ್ಯದ್ ಶರೀಫ್, ಮುಸ್ಕಾನ್ (ಮಹಿಳೆ), ಸುಹೇಲ್ ಪಾಷ ಮತ್ತು ಸಯ್ಯದ್ ಶರ್ಮಾ ಎಂಬ ನಾಲ್ವರು ದರೋಡೆಕೋರರನ್ನು ಬಂಧಿಸಲಾಗಿದೆ. ಈ ಕೃತ್ಯದಲ್ಲಿದ್ದ ಐದನೇ ಆರೋಪಿ ಅಪ್ರಾಪ್ತನಾಗಿದ್ದಾನೆ ಎಂದು ಎಸ್ಪಿ ವಿವರಿಸಿದರು.

### ಪೊಲೀಸ್ ತಂಡಕ್ಕೆ ಅಭಿನಂದನೆ

ವಿವಿಧ ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿದ ಅಪರ ಪೊಲೀಸ್ ಅಧೀಕ್ಷಕರಾದ ಸಿ. ಮಲ್ಲಿಕ್, ನಾಗೇಶ್, ಗ್ರಾಮಾಂತರ ಉಪವಿಭಾಗದ ಡಿವೈಎಸ್ಪಿ ರಾಜಣ್ಣ ಅವರ ಮಾರ್ಗದರ್ಶನದಲ್ಲಿ ಶ್ರಮಿಸಿದ ಸಿಪಿಐ ಡಿ.ಬಿ. ಜಯಪ್ರಕಾಶ್, ವರುಣ ಪಿಎಸ್ಐ ಸದಾಶಿವ ತಿಪರಡ್ಡಿ, ಎಸ್.ಎಚ್. ಲೋಕೇಶ್, ಪ್ರೊಬೇಷನರಿ ಪಿಎಸ್ಐ ಡಿ.ಜೆ. ಕುಮಾರ್, ಜಯಪುರ ಪಿಎಸ್ಐ ಪ್ರಕಾಶ್ ಯತ್ತಿನಮನಿ, ಪ್ರೊಬೇಷನರಿ ಪಿಎಸ್ಐ ಸಂತೋಷ್ ಬೇದ್ರೆ ಹಾಗೂ ಸಿಬ್ಬಂದಿಗಳಾದ ಶ್ರೀನಿವಾಸ, ಜವರಯ್ಯ, ಹರೀಶ, ಜಯಕುಮಾರ, ಲೋಕೇಶ್, ದಸ್ತಗೀರಸಾಬ ದುಮ್ಮದ್ರಿ, ಪಚ್ಚೇಗೌಡ, ಮಲ್ಲಿಕಾರ್ಜುನ, ಜಹೂರ್ ಅಹಮದ್, ವಸಂತ ಮತ್ತು ನೀತಾ ಅವರನ್ನೊಳಗೊಂಡ ತಂಡವನ್ನು ಎಸ್ಪಿ ಅಭಿನಂದಿಸಿದರು.

### ವಿಶೇಷ ಪಡೆ ರಚನೆ ಮತ್ತು ನಾಲ್ವರ ಬಂಧನ

**ದೂರು ದಾಖಲಾದ ತಕ್ಷಣವೇ ಆರೋಪಿಗಳ ಬಂಧನಕ್ಕಾಗಿ ಗ್ರಾಮಾಂತರ ವೃತ್ತದ ಸಿಪಿಐ ಡಿ.ಬಿ. ಜಯಪ್ರಕಾಶ್ ಹಾಗೂ ವರುಣ ಪೊಲೀಸ್ ಠಾಣೆಯ ಪಿಎಸ್ಐ ಸದಾಶಿವ ತಿಪರಡ್ಡಿ ಅವರ ನೇತೃತ್ವದಲ್ಲಿ ವಿಶೇಷ ತಂಡಗಳನ್ನು ರಚಿಸಲಾಯಿತು. ಖಚಿತ ಸುಳಿವಿನ ಮೇರೆಗೆ ಕುಂಬಾರಗೇರಿ ನಿವಾಸಿ ಸಿದ್ದರಾಜು (47), ಶ್ರೀನಗರ ನಿವಾಸಿ ಕೆ.ಎಂ. ಕಾರ್ತಿಕ್ (30), ಬೆಂಗಳೂರಿನ ಕಸ್ತೂರಬಾ ನಗರ ನಿವಾಸಿ ಎ.ಎಸ್. ಪುರುಷೋತ್ತಮ (28) ಮತ್ತು ನಾಗಮಂಗಲ ತಾಲೂಕಿನ ಭೂಸಮುದ್ರ ಗ್ರಾಮದ ಎನ್. ಆನಂದ (30) ಎಂಬುವರನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಇನ್ನೂ ನಾಲ್ವರು ಭಾಗಿಯಾಗಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿದಿದೆ. ಬಂಧಿತರಿಂದ 4.30 ಲಕ್ಷ ರೂಪಾಯಿ ನಗದು, 1 ಕಾರು, 2 ದ್ವಿಚಕ್ರ ವಾಹನಗಳು ಹಾಗೂ 5 ಮೊಬೈಲ್ಗಳನ್ನು ವಶಪಡಿಸಿಕೊಳ್ಳಲಾಗಿದೆ.**

### ಡ್ರಾಪ್ ನೀಡುವಾಗ ಎಚ್ಚರದಿಂದಿರಿ

"ಯಾರೇ ಅಪರಿಚಿತರಾಗಲಿ ಅವರಿಗೆ ಕಾರು ಅಥವಾ ವಾಹನಗಳಲ್ಲಿ ಡ್ರಾಪ್ (ಲಿಫ್ಟ್) ನೀಡುವುದು ಅಪಾಯಕಾರಿ. ಪ್ರಮುಖವಾಗಿ ರಾತ್ರಿ ವೇಳೆಯಲ್ಲಿ ಹಾಗೂ ಜನಸಂಚಾರವಿಲ್ಲದ ನಿರ್ಜನ ಪ್ರದೇಶಗಳಲ್ಲಿ ಡ್ರಾಪ್ ನೀಡುವುದನ್ನು ಸಂಪೂರ್ಣವಾಗಿ ಕಡೆಗಣಿಸಬೇಕು. ಸಾರ್ವಜನಿಕರು ಈ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಬೇಕು."

**ಮಲ್ಲಿಕಾರ್ಜುನ ಬಾಲದಂಡಿ**
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ)

**ಹೆಚ್.ಮಹದೇವ್ ಹೇಳಿಕೆ**

# ಚಿತ್ರಕಲೆ ಎಂದರೆ ಮಕ್ಕಳಿಗೆ ಬಹಳ ಇಷ್ಟವಾಗುತ್ತದೆ

ಚಾಮರಾಜನಗರ, ಚಿತ್ರಕಲೆ ಎಂದರೆ ಮಕ್ಕಳಿಗೆ ಬಹಳ ಇಷ್ಟವಾಗುತ್ತದೆ. ಚಿಕ್ಕ ಮಕ್ಕಳಿದ್ದಾಗನಿಂದ ಚಿತ್ರಗಳನ್ನು ಬಿಡಿಸುವ ಪ್ರವೃತಿಯನ್ನು ಬೆಳೆಸಿಕೊಂಡರೆ. ಮಕ್ಕಳಲ್ಲಿ ಜ್ಞಾನದ ಜೊತೆಗೆ ಪ್ರಕೃತಿಯ ಬಗ್ಗೆ ಅರಿವು ಮೂಡುತ್ತದೆ ಎಂದು ವರ್ಣಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಜಿಲ್ಲಾ ಚಿತ್ರಕಲಾವಿದರ ಸಂಘದ ಗೌರವ ಅಧ್ಯಕ್ಷರಾದ ಹೆಚ್.ಮಹದೇವ್ ತಿಳಿಸಿದರು.

ನಗರದ ಸೋಮವಾರ ಪೇಟೆಯಲ್ಲಿ ಇರುವ ಎಂ.ಸಿ.ಎಸ್ ಶಾಲೆಯಲ್ಲಿ ವರ್ಣ ಸ್ಕೂಲ್ ಆಫ್ ಆರ್ಟ್ ಹಾಗೂ ಎಂ.ಸಿ.ಎಸ್ ಪಬ್ಲಿಕ್ ಶಾಲೆಯ ಸಹಯೋಗದಲ್ಲಿ ಶನಿವಾರ ನಡೆದ ವರ್ಣೋತ್ಸವ 2026 ರಾಜ್ಯ ಮಟ್ಟದ ಚಿತ್ರಕಲೆ ಮತ್ತು ಬಣ್ಣ ತುಂಬುವ ಸ್ಪರ್ಧೆಯನ್ನು ಚಿತ್ರಕ್ಕೆ ಬಣ್ಣ ತುಂಬುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಚಿತ್ರಕಲೆ ಎನ್ನುವುದು ಮಕ್ಕಳಲ್ಲಿ ಸೃಜನಶೀಲತೆ ಮತ್ತು ಆಲೋಚನಾ ಶಕ್ತಿಯನ್ನು ಬೆಳೆಸುವ ಅತ್ಯುತ್ತಮ ಮಾದ್ಯಮವಾಗಿದೆ.ಮಕ್ಕಳಿಗೆ



ಚಿತ್ರಕಲೆಯ ಬಗ್ಗೆ ತಿಳಿವಳಿಕೆ ಮೂಡಿಸಲು ಮತ್ತು ಅವರಲ್ಲಿ ಆಸಕ್ತಿ ಬೆಳೆಸಲು ಪೋಷಕರು ಮತ್ತು ಶಾಲೆಯ ಶಿಕ್ಷಕರು ಸಹಕರಿಸಬೇಕು ಎಂದರು.

ಚಿತ್ರಕಲೆಯು ಮಕ್ಕಳ ಕಲ್ಪನಾ ಶಕ್ತಿಯನ್ನು ಹೆಚ್ಚಿಸುತ್ತದೆ. ಚಿತ್ರ ಬಿಡಿಸುವುದರಿಂದ ತಾಳ್ಮೆ ಮತ್ತು ಗಮನ ಕೇಂದ್ರಿಕರಿಸುವಿಕೆ ಬೆಳೆಯುತ್ತದೆ. ಮತ್ತು ಪೆನ್ಸಿಲ್ ಮತ್ತು ಬ್ರಷ್ ಹಿಡಿಯುವುದರಿಂದ ಕೈ ಬೆರಳುಗಳ ಸ್ನಾಯುಗಳು ಬಲಗೊಳ್ಳುತ್ತದೆ ಮಕ್ಕಳಿಗೆ ಶಾಲೆಗಳಲ್ಲಿ ಚಿತ್ರಕಲೆ ತರಗತಿಗಳನ್ನು ನಡೆಸುವುದರಿಂದ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು. ಜಿಲ್ಲಾ ಚಿತ್ರಕಲಾವಿದರ ಸಂಘ ಅಧ್ಯಕ್ಷ ರವಿತೇಜ ಅವರು ಮಾತನಾಡಿ ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯ ಚಟುವಟಿಕೆಯ ಜೊತೆಗೆ ಚಿತ್ರಕಲೆಯನ್ನು ಕಲಿಸುವುದರಿಂದ ವಿದ್ಯಾರ್ಥಿಗಳು ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಶಾಲೆ ಮುಖ್ಯೋಪಾಧ್ಯಾಯರಾದ ಮಹದೇವಸ್ವಾಮಿ ಮಾತನಾಡಿ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಜ್ಞಾನದ ಜೊತೆಗೆ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಸಿಕೊಡಲಾಗುತ್ತಿದೆ. ನಮ್ಮ ಶಾಲೆಯ ವಿದ್ಯಾರ್ಥಿಗಳು ಬೇರೆ ಜಿಲ್ಲೆಗಳಿಗೆ ತೆರಳಿ ಕೀರ್ತಿ ತಂದಿದ್ದಾರೆ ಎಂದರು. ಈಸಂಧರ್ಭದಲ್ಲಿ ಜಿಲ್ಲಾ ಜಿತ್ರಕಲಾವಿದರ ಸಂಘ ಕಾರ್ಯದರ್ಶಿ ಆರ್ಟಿಸ್ಟ್ ಅನಿಲ್, ಜಯರಾಂ, ಪ್ರಾಂಶುಪಾಲ ಶಶಿಧರ್ಮೂರ್ತಿ, ಚಿತ್ರಕಲಾ ಶಿಕ್ಷಕರಾದ ಸಿ.ಎನ್.ಸಂಪತ್ ಕುಮಾರ್, ರಾಮಸಮುದ್ರ ಸುರೇಶ್, ಕಾರ್ಯಕ್ರಮದ ಸಂಯೋಜಕರು. ಶಿಕ್ಷಕರಾದ ಗೀತಾ, ನಾಗಲಕ್ಷ್ಮಿ, ಉಮಾ, ನಂದಿನಿ, ಮಧುರ, ಮಣಿ, ಪ್ರಕಾಶ್ ಇತರರಿದ್ದರು.

**ಮೊದಲ ಪುಟದಿಂದ**

## ಉದಯ್‌ಕುಮಾರ್‌ಗೆ ಖಾದ್ರಿ ಶಾಮಣ್ಣ ಪ್ರಶಸ್ತಿ

ಸಮಾಜವನ್ನು ಒಡೆಯುವ, ಸುಳ್ಳು ಸುದ್ದಿಗಳಿಗೆ ಪ್ರಚಾರವನ್ನು ನೀಡುವ ಕೆಲಸವನ್ನು ಮಾಧ್ಯಮಗಳು ಮಾಡಬಾರದು. ಮೌಢ್ಯಗಳಿಂದಲೇ ಜಾತಿ ವ್ಯವಸ್ಥೆ ಹೆಚ್ಚಾಗಿದೆ ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಗಾಂಧೀಜಿ, ಜಯಪ್ರಕಾಶ್ ನಾರಾಯಣ, ರಾಮಮನೋಹರ ಲೋಹಿಯಾರಿಂದ ಪ್ರಭಾವಿತರಾಗಿದ್ದ ಖಾದ್ರಿ ಶಾಮಣ್ಣ ಅವರು ಹೋರಾಟಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಎರಡು ಬಾರಿ, ಸ್ವಾತಂತ್ರ್ಯ ಬಂದ ಬಳಿಕ ಮೂರು ಬಾರಿ ಜೈಲು ಸೇರಿದ್ದರು. ವ್ಯಕ್ತಿಗೆ ಮಾತ್ರವಲ್ಲ, ಚಳವಳಿಗಳಿಗೂ ಚಾರಿತ್ರ್ಯ ಇರಬೇಕು ಎಂಬುದು ಅವರ ನಂಬಿಕೆಯಾಗಿತ್ತು' ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಉದಯಕುಮಾರ್ ಮಾತನಾಡಿ, 'ಕನ್ನಡವೇ ಅರ್ಥವಾಗದ ಊರಿನಿಂದ ಬಂದ ನನ್ನಲ್ಲಿ ಕನ್ನಡದ ಪ್ರೀತಿ ಹೇಗೆ ಹುಟ್ಟಿಕೊಂಡಿತು ಎಂಬುದು ಗೊತ್ತಿಲ್ಲ. ನಾನು ಬೆಂಗಳೂರಿಗೆ ಬರುವವರೆಗೆ ರಾಜಕುಮಾರ್ ಎಂಬ ಮೇರುನಟ ಇದ್ದಾರೆ ಎಂಬುದೂ ಗೊತ್ತಿರಲಿಲ್ಲ. ಬೆಂಗಳೂರಿಗೆ ಬಂದ ಮೇಲೆ ಇಲ್ಲಿನ ವಸತಿ ನಿಲಯಗಳಲ್ಲಿ ಇದ್ದುಕೊಂಡು ಎಲ್ಲವನ್ನು ಕಲಿತೆ' ಎಂದು ನೆನಪು ಮಾಡಿಕೊಂಡರು.

ಅಸ್ಸಾಂ ಕೇಂದ್ರೀಯ ವಿದ್ಯಾಲಯದ ವಿಶ್ರಾಂತ ಸಮ ಕುಲಪತಿ ಕೆ.ವಿ. ನಾಗರಾಜ್ ಮಾತನಾಡಿ, 'ಕರ್ನಾಟಕ ಮಾಧ್ಯಮ ಅಕಾಡೆಮಿಯ ಮೊದಲ ಅಧ್ಯಕ್ಷ ನಾಡಿಗ್ ಕೃಷ್ಣಮೂರ್ತಿ, ಎರಡನೇ ಅಧ್ಯಕ್ಷ ಖಾದ್ರಿ ಶಾಮಣ್ಣ ಅವರ ಜನ್ಮದಿನದ ಶತಮಾನೋತ್ಸವವನ್ನು ಮಾಧ್ಯಮ ಅಕಾಡೆಮಿಯೇ ಮರೆತಿರುವುದು ವಿಪರ್ಯಾಸ. ಕನಿಷ್ಠ ಅರ್ಧದಿನದ ಕಾರ್ಯಕ್ರಮವನ್ನಾದರೂ ಮಾಡಬಹುದಿತ್ತು. ನಮ್ಮ ಇತಿಹಾಸವನ್ನು ನಾವು ಮರೆಯಬಾರದು' ಎಂದು ಬೇಸರ ವ್ಯಕ್ತಪಡಿಸಿದರು. 'ಸಾಮಾಜಿಕ ಜಾವಬ್ದಾರಿ ಇಲ್ಲದ ಯೂಟ್ಯೂಬ್ ಜರ್ನಲಿಸಂ, ಸಿಟಿಜನ್ ಜರ್ನಲಿಸಂ ಅನ್ನು ನಿಷೇಧಿಸಬೇಕು. ಬದ್ಧತೆ ಇಲ್ಲದ ಸಾಮಾಜಿಕ ಜಾಲತಾಣದ ಮಾಧ್ಯಮಗಳಿಗೆ ಪ್ರೋತ್ಸಾಹ ನೀಡಬಾರದು' ಎಂದು ಆಗ್ರಹಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಎಚ್.ಆರ್. ಶ್ರೀಶ ಉಪಸ್ಥಿತರಿದ್ದರು.

## ಸಾರ್ವಜನಿಕರ ಹಕ್ಕುಗಳನ್ನು ಸಂರಕ್ಷಿಸಿ

ಚಾಮರಾಜನಗರ ಕರ್ನಾಟಕ ಹೋರಾಟ ಅಭಿವೃದ್ಧಿ ಸಮಿತಿ ವತಿಯಿಂದ ಕಾವೇರಿ ನದಿ ನೀರಿನ ಹಿತಾಶಕ್ತಿ ಹಾಗೂ ರಾಜ್ಯದ ರೈತರಹಾಗೂ ಸಾರ್ವಜನಿಕರ ಹಕ್ಕುಗಳನ್ನು ಸಂರಕ್ಷಿಸುವ ಪ್ರಮುಖ ಬೇಡಿಕೆಗಳನ್ನು ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಮಂತ್ರಿಗಳಿಗೆ ಸಮಿತಿ ಅಧ್ಯಕ್ಷರಾದ ಕೆ.ವೀರಭದ್ರಸ್ವಾಮಿ ಸಮ್ಮುಖದಲ್ಲಿ ಮನವಿ ಸಲ್ಲಿಸಲಾಯಿತು.

ಪ್ರಮುಖ ಬೇಡಿಕೆಗಳಾದ ಕರ್ನಾಟಕ ರಾಜ್ಯಕ್ಕೆ ಕುಡಿಯುವ ನೀರಿಗೆ ಮೊದಲು ಆದ್ಯತೆ ನೀಡಬೇಕು, ರಾಜ್ಯದ ರೈತರ ಹಿತಾಶಕ್ತಿಯನ್ನು ಕಾಪಾಡುವಂತೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು, ಮಳೆಯ ಕೊರತೆಯ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಅದರ ಆಧಾರದ ಮೇಲೆ ನೀರಿನ ಹಂಚಿಕೆ ಮಾಡಬೇಕು, ಕಾವೇರಿ ನೀರಿನ ಹಂಚಿಕೆ ಕುರಿತು ರಾಜ್ಯದ ಪರವಾಗಿ ದೃಡವಾದ ಕಾನೂನು ಕ್ರಮ ಕೈಗೊಂಳ್ಳಬೇಕು, ಕೇಂದ್ರ ಸರ್ಕಾರ ಮತ್ತು ಕಾವೇರಿ ನೀರಿನ ನಿರ್ವಹಣೆ ಪ್ರಾಧಿಕಾರದ ಮುಂದೆ ಕರ್ನಾಟಕದ ವಾಸ್ತವ ಪರಿಸ್ಥಿತಿಯನ್ನು ಸಮರ್ಪಕವಾಗಿ ಮಂಡಿಸಬೇಕು. ರಾಜ್ಯದಲ್ಲಿ ನೀರಿನ ಸಂರಕ್ಷಣೆ ಮಳೆನೀರು ಸಂಗ್ರಹಣೆ ಹಾಗೂ ನೀರಿನ ಸಮರ್ಪಕ ಬಳಕೆಗೆ ವಿಶೇಷ




ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಮಲ್ಲೇಶ್.ಯು.ಬಿ ಉಡಿಗಾಲ, ಕಾನೂನು ಸಲಹೆಗಾರರಾದ ಗಟ್ಟವಾಡಿ ಮಹದೇವಸ್ವಾಮಿ, ಉಪಾಧ್ಯಕ್ಷರುಗಳಾದ ಗೌಡರು ಸೋಮವಾರಪೇಟೆ ರಾಜಪ್ಪ, ಜೋತಿಗೌಡನಪುರ ಬಸವಣ್ಣ, ಮರಿಯಾಲದ ಲಿಂಗಪ್ಪ, ಪ್ರಮೋದ್, ಚಂದ್ರು, ಪುಟ್ಟಸ್ವಾಮಿ, ಚಂದಕವಾಡಿ ರಾಜಶೇಖರ್, ಕರಿನಂಜನಪುರದ ನಂಜುಂಡಸ್ವಾಮಿ. ಎಂ, ಉಡಿಗಾಲ ದೇವಣ್ಣ, ಮಹೇಶ್, ಮುಡಲಪುರದ ಬಸವಣ್ಣ, ಬೂದಂಬಳ್ಳಿ ವೀರಭದ್ರಸ್ವಾಮಿ, ಬಾಬಣ್ಣ, ಮಂಗಲ ರಾಜಶೇಖರ್, ಮಾದಪುರ ಶಿವಕುಮಾರ್, ಮೂಕಳ್ಳಿ ಮಹೇಶ್, ಬಿ ಮಲ್ಲಯ್ಯನಪುರ ರಾಜು,ಚಾಮರಾಜನಗರ ಕಲೀಂ, ಅಮ್ಮನಪುರ ನಂಜುಂಡಸ್ವಾಮಿ ಇನ್ನು ಮುಂತಾದವರು ಇದ್ದರು.

# ನಾಡಿನ ಜನರಿಗೆ ಸಕಲ ಸೌಕರ್ಯ ದೊರಕಲಿ: ಜಿಟಿಡಿ



**ಮೈಸೂರು:** ತಾಯಿ ಚಾಮುಂಡೇಶ್ವರಿ ಕೃಪೆಯಿಂದ ನಾಡಿನ ಜನರಿಗೆ ಸಕಲ ಸೌಕರ್ಯಗಳು ದೊರಕಲಿ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ವಿಜಯನಗರದ 4ನೇ ಹಂತದದಲ್ಲಿನ ರಾಧಾ ಸಂದೀಲ್ ಜೇನುಗೂಡು ಸೇವಾ ಸಮಿತಿವತಿಯಿಂದ ಏರ್ಪಡಿಸಿದ್ದ ಶ್ರೀ ಚಾಮುಂಡೇಶ್ವರಿಯ 18ನೇ ವರ್ಷದ ಪೂಜಾ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. ಮಹಿಳಾ ಕಾಂಗ್ರೆಸ್ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಲಾ ಮಹೇಂದ್ರ ಹಾಗೂ ಜೇನುಗೂಡು ಸೇವಾ ಸಮಿತಿ ಸಂಸ್ಥಾಪಕ ರಾಧಾ ಸಂದೀಲ್‌ರವರ ನೇತೃತ್ವದಲ್ಲಿ ನಾಡಿನ ಜನರಿಗೆ ಆಯುಷ್ಯ, ಆರೋಗ್ಯ, ಸುಖ ಸಂತೋಷ ನೀಡಲೆಂದು ಕಳೆದ 18 ವರ್ಷಗಳಿಂದ ಆಷಾಢ ಮಾಸದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದಾರೆ. 18ನೇ ವರ್ಷದ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ನಡೆಯುತ್ತಿರುವುದು ಬಹಳ ಸಂತೋಷದ ವಿಷಯ. ನಾಡಿನಲ್ಲಿ ಮಳೆಯ ಕೊರತೆಯಿಂದ ಕುಡಿಯುವ ನೀರಿಗೂ ಅಭಾವ ಉಂಟಾಗಿತ್ತು. ಆದರೆ, ಈ ಆಷಾಢ ಮಾಸದಲ್ಲಿ ನಡೆಯುವ ಪೂಜಾ ಪುರಸ್ಕಾರಗಳಿಂದ ಶ್ರೀ ಚಾಮುಂಡೇಶ್ವರಿ ಕೃಪೆಯಿಂದ ಹಲವೆಡೆ ಮಳೆಯಾಗಿ ಕಬಿನಿ ಹಾಗೂ ಕೆಆರ್‌ಎಸ್ ತುಂಬುತ್ತಿರುವುದು ಸಂತಸದ ವಿಷಯವಾಗಿದೆ ಎಂದರು.

ಬಸವಮಾರ್ಗ ಫೌಂಡೇಷನ್‌ನ ಸಂಸ್ಥಾಪಕ ಬಸವರಾಜು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಮಾಲಾ ಮಹೇಂದ್ರ ಹಾಗೂ ರಾಧಕ್ಕ ಅವರು ಜೇನುಗೂಡು ಸೇವಾ ಸಮಿತಿಯಿಂದ ಕಳೆದ 18 ವರ್ಷಗಳಿಂದ ಆಷಾಢ ಮಾಸದಲ್ಲಿ ತಾಯಿ ಚಾಮುಂಡೇಶ್ವರಿ ಪೂಜಾ ಮಹೋತ್ಸವವನ್ನು ಬಹಳ ವಿಶೇಷವಾಗಿ ಆಚರಿಸುತ್ತಾರೆ. ನಾನು ಮೈಸೂರಿನ ಹಲವಾರು ಕಡೆ ಇಂತಹ ಪೂಜಾ ಕಾರ್ಯಕ್ರಮ ನೋಡಿದ್ದೇನೆ. ಆದರೆ, ಇವರಷ್ಟು ಅದ್ದೂರಿಯಾಗಿ ವಿಶೇಷವಾಗಿ ಯಾರೂ ನಡೆಸುವುದಿಲ್ಲ. ಇವರ ಕಾರ್ಯಕ್ರಮ ನಿಜಕ್ಕೂ ಮಿನಿ ದಸರಾ ನೋಡಿದಂತೆ ಆಗುತ್ತದೆ ಎಂದರು.ಶನಿವಾರ ಸಂಜೆ7 ಗಂಟೆಯಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ಭಾನುವಾರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಮಹಿಳಾ ಕಾಂಗ್ರೆಸ್ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಮಾಲಮಹೆಂದ್ರ, ಸಂಸ್ಥಾಪಕರು ಜೇನುಗೂಡು ಸೇವಾ ಸಮಿತಿ ಶ್ರೀಮತಿ ರಾಧಾ ಸಂದೀಲ್, ಹರಿಹರನ್ ಕನ್‌ಸ್ಟ್ರಕ್ಷನ್ ಮಾಲೀಕರಾದ ಮುತ್ತುರಾಜು, ಫ್ರೆಂಡ್ಲಿ ಜಿಮ್ ಮಾಲೀಕರಾದ ನತೀಶ್‌ಗೌಡ ಮತ್ತು ನವೀಶ್‌ಗೌಡ ಹಾಗೂ ಕೃತಿಕ್‌ಗೌಡ, ಯಾತ್ರೇಶ್‌ಗೌಡ, ನಾಗೇಶ್‌ಗೌಡ ಮತ್ತು ರಾಕೇಶ್‌ಗೌಡ ಮತ್ತಿತರರು ಹಾಜರಿದ್ದರು.

# ತನ್ವೀರ್ ಸೇಠ್ ಪರ ಮೌನ ಪ್ರತಿಭಟನೆ

ಮೈಸೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಮೈಸೂರಿನ ಎನ್‌ಆರ್ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ರನ್ನು ಕೈ ಬಿಟ್ಟಿರುವ ಕಾರಣ, ಸಿಡಿದೆದ್ದಿರುವ ಕಾಂಗ್ರೆಸ್ ಮುಖಂಡರು ಕೈಗೊಂಡಿರುವ ಪ್ರತಿಭಟನಾ ಧರಣಿ ಶನಿವಾರ ಮೂರನೇ ದಿನಕ್ಕೆ ಕಾಲಿಟ್ಟಿದೆ.

ನಗರದ ಎಫ್‌ಟಿಎಸ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆ ಎದುರು ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್ ನೇತೃತ್ವದಲ್ಲಿ ಶನಿವಾರ ಬೆಳಗ್ಗೆಯಿಂದಲೇ ಜಮಾಯಿಸಿದ ನೂರಾರು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ಮೌನ ಪ್ರತಿಭಟನೆ ನಡೆಸಿ, ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ಸಿಗುವ ತನಕ ಜಾಗ ಬಿಟ್ಟು ಕದಲಲ್ಲ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್ ಮಾತನಾಡಿ, ನಮ್ಮ ಮೌನ ಪ್ರತಿಭಟನೆ ಇಂದು ಮೂರನೇ ದಿನಕ್ಕೆ ಕಾಲಿಟ್ಟಿದೆ, ನಾವು ಯಾವ ರಸ್ತೆ ತಡೆಯನ್ನೂ ಮಾಡಲ್ಲ, ಯಾರ ವಿರುದ್ಧವೂ ಘೋಷಣೆ ಕೂಗಲ್ಲ, ನಮ್ಮ ಬೇಡಿಕೆ ಕಾಂಗ್ರೆಸ್ ಪಕ್ಷ ನಮ್ಮ ಭಾವನೆಗಳಿಗೆ ಬೆಲೆ ಕೊಟ್ಟು ತನ್ವೀರ್ ಸೇಠ್ ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಬೇಕು ಎಂದರು.




ತನ್ವೀರ್ ಸೇಠ್ ಸಜ್ಜನ ರಾಜಕಾರಣಿ, ಮಂತ್ರಿಗಿರಿಗಾಗಿ ಯಾವುದೇ ಲಾಬಿ ಮಾಡಿಲ್ಲ, ಯಾರ ಮನೆ ಬಾಗಿಲಿಗೂ ಹೋಗಿಲ್ಲ ತಮ್ಮ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ಹೈಕಮಾಂಡ್ ಮೇಲೆ ನಂಬಿಕೆ ಇಟ್ಟು ಸುಮ್ಮನಿದ್ದರು. ಸತತ 6 ಬಾರಿ ಜಯಗಳಿಸಿದ್ದಾರೆ. ಮುಂದೆಯೂ ಅವರು ಜಯ ಗಳಿಸುತ್ತಾರೆ. 2ಬಾರಿ ಸಚಿವರಾಗಿ ಸಮರ್ಥವಾಗಿ ಕೆಲಸ ಮಾಡಿದ್ದಾರೆ. ಯಾವ ಕಾರಣಕ್ಕಾಗಿ ಅವರನ್ನು ಸಂಪುಟದಿಂದ ದೂರ ಇಡಲಾಗಿದೆ ಎನ್ನುವುದೇ ಯಕ್ಷ ಪ್ರಶ್ನೆಯಾಗಿದೆ. ಈ ಹಿಂದೆ ಮೈಸೂರು ಜಿಲ್ಲೆಗೆ ಮುಖ್ಯಮಂತ್ರಿ ಸೇರಿ 3 ಸಚಿವ ಸ್ಥಾನ ನೀಡಲಾಗಿತ್ತು. ಆದರೇ ಈ ಬಾರಿ ಒಂದು ಸ್ಥಾನ ನೀಡಲಾಗಿದೆ. ಇನ್ನೂ ಕೂಡ ನಾವು ಆಶಾಭಾವನೆ ಹೊಂದಿದ್ದೇವೆ ಎಂದರು.

# ಟೌನ್‌ಶಿಪ್: ಇಂದಿನಿಂದ ಜೆಡಿಎಸ್ ಪಾದಯಾತ್ರೆ

## ಪಾದಯಾತ್ರೆಗೆ ಎಚ್.ಡಿ.ಕುಮಾರಸ್ವಾಮಿ ಚಾಲನೆ, ಆರ್.ಅಶೋಕ್ ಭಾಗಿ । ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಮುಕ್ತಾಯ

ರಾಮನಗರ: ಬಿಡದಿ ಸಮಗ್ರ ನಗರ ಯೋಜನೆ ಭೂಸ್ವಾಧೀನವನ್ನು ವಿರೋಧಿಸಿ 500ಕ್ಕೂ ಹೆಚ್ಚು ದಿನದಿಂದ ನಡೆಯುತ್ತಿರುವ ರೈತರ ಪ್ರತಿಭಟನೆಗೆ ಬೆಂಬಲವಾಗಿ, ಜೆಡಿಎಸ್ ಆ.9 ರಿಂದ ಆ.11ರವರೆಗೆ ಮೂರು ದಿನಗಳ ಕಾಲ ಬೈರಮಂಗಲದಿಂದ ಬೆಂಗಳೂರಿಗೆ ಪಾದಯಾತ್ರೆಯನ್ನು ಆಯೋಜಿಸಿದೆ. ಸದರಿ ಪಾದಯಾತ್ರೆಗೆ ಬಿಜೆಪಿ ಸಹಕಾರ ನೀಡಿದೆ ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಕೋರ್ ಕಮಿಟಿ ಸದಸ್ಯ ಎ.ಮಂಜುನಾಥ್ ತಿಳಿಸಿದರು.

ಬಿಡದಿ ಹೋಬಳಿಯ ಖಾಸಗಿ ರೆಸಾರ್ಟ್‌ವೊಂದರಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

### ಕೇಂದ್ರ ಸಚಿವ ಎಚ್.ಡಿ.ಕೆ ಚಾಲನೆ, ಆರ್. ಅಶೋಕ್ ಉಪಸ್ಥಿತಿ

ಆಗಸ್ಟ್ 9,10 ಹಾಗೂ 11ರಂದು ಬೈರಮಂಗಲದಿಂದ ಬೆಂಗಳೂರಿನ ಫ್ರೀಡಂ ಪಾರ್ಕಿನವರೆಗೆ ಬೃಹತ್ ಪಾದಯಾತ್ರೆ ನಡೆಯಲಿದೆ. ಆಗಸ್ಟ್ 9ರಂದು ಮೊದಲ ದಿನ ಬೈರಮಂಗಲ ವೃತ್ತದಿಂದ ಪಾದಯಾತ್ರೆ ಆರಂಭವಾಗಲಿದ್ದು, ಕೇಂದ್ರ ಸಚಿವ ಕುಮಾರಸ್ವಾಮಿರವರು ಚಾಲನೆ ನೀಡುವರು. ಈ ವೇಳೆ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ಬಿಜೆಪಿ ನಾಯಕರು ಉಪಸ್ಥಿತರಿರಲಿದ್ದಾರೆ. ಈ ವೇಳೆ ವಾಹನವನ್ನೇ ವೇದಿಕೆಯನ್ನಾಗಿಸಿ, ಪ್ರಮುಖ ನಾಯಕರು ಪ್ರತಿಭಟನಾಕಾರರನ್ನ ಉದ್ದೇಶಿಸಿ ಮಾತನಾಡುತ್ತಾರೆ. ನಂತರ 8–9 ಕಿಮೀ ಪಾದಯಾತ್ರೆಯಲ್ಲಿ ಬಿಡದಿಗೆ ಆಗಮಿಸಿ ಅಲ್ಲಿ ನೆಲ್ಲಿಗುಡ್ಡೆ ರಸ್ತೆಯಲ್ಲಿರುವ ಎಸ್.ಬಿ. ಕಲ್ಯಾಣ ಮಂಟಪದಲ್ಲಿ ವಿಶ್ರಾಂತಿ ಪಡೆಯಲಾಗುವುದು ಎಂದು ತಿಳಿಸಿದರು.

### ಎರಡನೇ ದಿನದ ಪಾದಯಾತ್ರೆಗೆ ಎಚ್.ಡಿ.ದೇವೇಗೌಡರಿಂದ ಚಾಲನೆ

ಆಗಸ್ಟ್ 10ರಂದು ಬಿಡದಿಯ ಬಿಜಿಎಸ್ ವೃತ್ತದಿಂದ ಪಾದಯಾತ್ರೆ ಪುನಃ ಆರಂಭವಾಗಲಿದೆ. ಎರಡನೇ ದಿನದ ಪಾದಯಾತ್ರೆಗೆ ಮಾಜಿ ಪ್ರಧಾನಿ ದೇವೇಗೌಡರು ಚಾಲನೆ ನೀಡುವರು. ಎರಡನೇ ದಿನ ಸುಮಾರು 14–15 ಕಿಮೀ ಪಾದಯಾತ್ರೆ ನಡೆಯಲಿದೆ. ಶೇಷಗಿರಿ ಹಳ್ಳಿ ಟೋಲ್ ಬಳಿ ಊಟ ಮತ್ತು ವಿಶ್ರಾಂತಿ ನಂತರ ನೈಸ್



ಜಂಕ್ಷನ್ ತಲುಪುತ್ತೇವೆ. ಇದೇ ಸ್ಥಳದಲ್ಲಿ ರಾತ್ರಿ ವಾಸ್ತವ್ಯ ಮಾಡುತ್ತೇವೆ ಎಂದು ಅವರು ವಿವರಿಸಿದರು.

### ಮೂರನೇ ದಿನ ಫ್ರೀಡಂ ಪಾರ್ಕ್‌ಗೆ

ಮೂರನೇ ದಿನ ಆಗಸ್ಟ್ 11ರಂದು ನೈಸ್ ರಸ್ತೆ ಜಂಕ್ಷನ್ ಬಲಿ ಇರುವ ಜೆಕೆ ಗ್ರಾಂಡ್ ಹೋಟೆಲ್ ಬಳಿಯಿಂದ ಪಾದಯಾತ್ರೆ ಆರಂಭವಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪುತ್ತೇವೆ. ಪಾದಯಾತ್ರೆಯಲ್ಲಿ ಬೈರಮಂಗಲ, ಕಂಚುಗಾರನಹಳ್ಳಿ ವ್ಯಾಪ್ತಿಯ ರೈತರು ಪಾದಯಾತ್ರೆಯಲ್ಲಿ ಭಾಗವಹಿಸುತ್ತಾರೆ. ಫ್ರೀಡಂ ಪಾರ್ಕಿನಲ್ಲಿ ವೇದಿಕೆಯಲ್ಲಿ ನಾಯಕರು ಮಾತನಾಡಲಿದ್ದಾರೆ ಎಂದರು. ಫ್ರೀಡಂ ಪಾರ್ಕಿನಿಂದ ವಿಧಾನಸೌಧ ಅಥವಾ ರಾಜಭವನ್‌ಗೆ ತೆರಳುವುದರ ಬಗ್ಗೆ ಇನ್ನು ನಿರ್ಧಾರ ಮಾಡಿಲ್ಲ ಎಂದು ಅವರು ತಿಳಿಸಿದರು.

### ರಾಜ್ಯ, ದೇಶವನ್ನು ವ್ಯಾಪಿಸಿದ ವಿರೋಧ

ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು ಪಾದಯಾತ್ರೆಯಲ್ಲಿ ಭಾಗವಹಿಸುತ್ತಾರೆ ಎಂದರು. ಸಮಗ್ರ ನಗರ ಯೋಜನೆ ಭೂಸ್ವಾಧೀನಕ್ಕೆ ವ್ಯಕ್ತವಾಗುತ್ತಿರುವ ವಿರೋಧ ಬಿಡದಿ ಹೋಬಳಿ ಮತ್ತು ಜಿಲ್ಲೆಗೆ ಸೀಮಿತವಾಗಿಲ್ಲ. ರಾಜ್ಯ ಮತ್ತು ದೇಶ ಮಟ್ಟದಲ್ಲಿಯೂ ವಿರೋಧ ವ್ಯಾಪಿಸಿದೆ. ಆ.9 ರಿಂದ ಮೂರು ದಿನಗಳ ಕಾಲ ನಡೆಯುವ ಪಾದಯಾತ್ರೆಯಲ್ಲಿ ರಾಜ್ಯದ ಎಲ್ಲಡೆಯಿಂದ ರೈತರು, ಪಕ್ಷದ ಕಾರ್ಯಕರ್ತರು ಸಹ ಪಾದಯಾತ್ರೆಯಲ್ಲಿ ತೊಡಗಿಸಿಕೊಂಡು ಭೂಸ್ವಾಧೀನ ವಿರೋಧಿಸುತ್ತಿರುವ ರೈತರ ಪರ ನಿಲ್ಲುತ್ತಾರೆ ಎಂದರು.

### 2028ರಲ್ಲಿ ತಟ್ಟಲಿದೆ ಜನರ ಶಾಪ

ಭೂಸ್ವಾಧೀನ ಪಡಿಸಿ ರೈತರ ಬದುಕು ಕಸಿಯುತ್ತಿರುವ, ಅಮಾಯಕರ ಬಲಿಪಡೆಯುತ್ತಿರುವ ಈ ಸರ್ಕಾರಕ್ಕೆ 2028ರ ಚುನಾವಣೆಯಲ್ಲಿ ಶಾಪ ತಟ್ಟದೆ ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆ.9ರಿಂದ ಮೂರು ದಿನಗಳ ಕಾಲ ನಡಯುತ್ತಿರುವ ಪಾದಯಾತ್ರೆ ಯಾವ ಪಕ್ಷಕ್ಕೂ ಅನುಕೂಲ, ಅನಾನುಕೂಲ ಕಲ್ಪಿಸುವ ಉದ್ದೇಶದಿಂದ ನಡೆಯುತ್ತಿಲ್ಲ. ಇಲ್ಲಿ ರಾಜಕೀಯ ಬೆರೆಸುತ್ತಿಲ್ಲ. ಭೂಸ್ವಾಧೀನ ವಿರೋಧಿಸುತ್ತಿರುವ ರೈತರ ಪರ ಹೋರಾಟವಷ್ಟೇ ಎಂದರು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ 2013ರ ಕಾಯ್ದೆಯ ಅಂಶಗಳನ್ನು ಪಾಲಿಸುತ್ತಿಲ್ಲ. 10ಎ ಅಂಶವನ್ನು ಉಲ್ಲಂಘಿಸಲಾಗಿದೆ ಎಂಬಿತ್ಯಾದಿ ವಿಷಯಗಳನ್ನು ನ್ಯಾಯಾಲಯ ಗಮನಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಬಿಡದಿಯಲ್ಲಿ ಪುನಃ ಆರಂಭವಾಗಿರುವ ಪೋಸ್ಟರ್ ವಾರ್ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರದಲ್ಲಿ ತಾವು ಪೊಲೀಸರಿಗೆ ದೂರು ನೀಡಿದ್ದೆವು. ಆದರೆ ಯಾವ ಕ್ರಮವನ್ನು ವಹಿಸಿಲ್ಲ. ಹೀಗಾಗಿ ನ್ಯಾಯಾಲಯದ ಮೊರೆ ಹೋಗಿದ್ದೇವೆ. ಕ್ರಮ ಮುಂದುವರೆಯುವ ನಿರೀಕ್ಷೆ ಇದೆ ಎಂದರು.

### ಲಾಭ ಗಳಿಸಲು ಸಮಗ್ರ ನಗರ ಯೋಜನೆ

ಬಿಡದಿ ಸಮಗ್ರ ನಗರ ಯೋಜನೆಯಿಂದ ಸರ್ಕಾರಕ್ಕೆ 33 ಸಾವಿರಕೋಟಿ ರೂ ಲಾಭ ಆಗುತ್ತೆ ಅಂತ ಸರ್ಕಾರವೇ ಹೇಳಿಕೊಂಡಿದೆ. ಭೂಸ್ವಾಧೀನಕ್ಕೆ 10–15 ಕೋಟಿ ವೆಚ್ಚಮಾಡುತ್ತಾರೆ. ಸರ್ಕಾರ ಲಾಭಕ್ಕಾಗಿ ಈ ಯೋಜನೆ ಮಾಡುತ್ತಿದೆ. ಇನ್ನೊಂದೆಡೆ ಭೂಮಿ ಕಳೆದುಕೊಂಡ ಕುಟುಂಬಗಳ ನೆಮ್ಮದಿ ಹಾಳಾಗುತ್ತದೆ. ಈ ಯೋಜನೆ ರೈತರಿಗೆ ಮರಣ ಶಾಸನವಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ 10 ಸಾವಿರ ಎಕರೆ ಭೂಮಿಯಲ್ಲಿ ಸಮಗ್ರ ನಗರ ಯೋಜನೆ, 2ನೇ ವಿಮಾನ ನಿಲ್ದಾಣಕ್ಕೆ 4–5 ಸಾವಿರ ಎಕರೆ ಸಾಲದು ಎಂಬಂತೆ, ಬಿಡಿಎ ವತಿಯಿಂದ ಲೇಔಟ್ ನಿರ್ಮಾಣಕ್ಕೆ 6–7 ಸಾವಿರ ಎಕರೆ ಭೂಮಿ ವಶಪಡಿಸಿಕೊಳ್ಳಲು ಈ ಸರ್ಕಾರ ಮುಂದಾಗಿದೆ. ರೈತರು ಬದುಕುವುದು ಬೇಡವೇ ಎಂದು ಎ.ಮಂಜುನಾಥ್ ಪ್ರಶ್ನಿಸಿದರು.

### ಜಿಬಿಡಿಎ ಬಳಿ 10 ಕೋಟಿ ಇದೆ ಎಂದು ಸಾಭೀತಿಗೆ ಸವಾಲು

**ಭೂಸ್ವಾಧೀನಕ್ಕೆ ಮುಂದಾಗಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿ.ಬಿ.ಡಿ.ಎ) ಬಳಿ ಹಣ ಇಲ್ಲ ಎಂದು ಎ.ಮಂಜುನಾಥ್ ದೂರಿದರು. ಹೊಸೂರಿನ ರೈತ ಮಹಿಳೆಯೊಬ್ಬರಿಗೆ ಜಿ.ಬಿ.ಡಿ.ಎ ಅಧಿಕಾರಿಗಳು ನಮ್ಮ ಬಳಿ ಹಣ ಇಲ್ಲ, ಪರಿಹಾರವಾಗಿ ಲ್ಯಾಂಡ್ ಶೇರ್ ಪಡೆದುಕೊಳ್ಳಿ ಎಂದು ಒತ್ತಾಯ ಮಾಡಿದ್ದಾರಂತೆ. ಅಂದರೆ ಅವರ ಬಳಿ ಹಣ ಇಲ್ಲವೆಂದಾಯಿತು. ಆದರೂ ಚೆಕ್‌ಗಳನ್ನು ನೀಡುವ ಫೋಟೋಗಳ ಪ್ರಚಾರ ನಿಂತಿಲ್ಲ. ಬೆಂಗಳೂರು ಮೈಸೂರು ಹೆದ್ದಾರಿಗೆ ಭೂಮಿ ಕೊಟ್ಟು ಪರಿಹಾರ ಪಡೆದುಕೊಂಡವರ ಫೋಟೋಗಳು ಪ್ರಚಾರವಾಗಲಿಲ್ಲ. ಜಿ.ಬಿ.ಡಿ.ಎ ಬಳಿ 10 ಸಾವಿರ ಕೋಟಿ ಇದೆ ಎಂದು ಸಾಭೀತು ಪಡಿಸಲಿ ಎಂದು ಅವರು ಸವಾಲು ಹಾಕಿದರು. ನಬಾರ್ಡ್ 17 ಸಾವಿರ ಕೋಟಿ ಸಾಲ ನೀಡುತ್ತಿದೆ ಎಂದು ಈ ಸರ್ಕಾರ ಹೇಳುತ್ತಿದೆ. ಆದರೆ ನಬಾರ್ಡ್ 2013ರ ಕಾಯ್ದೆಯ ಅಂಶಗಳನ್ನು ಪಾಲಿಸಿದರೆ ಮಾತ್ರ ಸಾಲ ನೀಡುತ್ತದೆ ಎಂದರು.**

### ಪ್ರಾಯಶ್ಚಿತ್ತ ಪಡಬೇಕಾದದ್ದು ಯಾರು?: ಎ.ಮಂಜುನಾಥ್

**ಜೆಡಿಎಸ್ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾ ತ್ರೆಯ ಬಗ್ಗೆ ಸಚಿವ ಎಚ್.ಸಿ.ಬಾಲಕೃಷ್ಣ ಪ್ರಾಯಶ್ಚಿತ್ತ ಪಾದಯಾತ್ರೆ ಎಂದು ಹೇಳಿಕೆ ನೀಡಿರುವುದನ್ನು ಮಾಧ್ಯಮ ಪ್ರತಿನಿಧಿಗಳು ಮಾಜಿ ಶಾಸಕ ಎ.ಮಂಜು ನಾಥ್ ಅವರ ಗಮನ ಸೆಳೆದಾಗ, ಪ್ರತಿಕ್ರಿಯಿಸಿದ ಅವರು ಯಾಕೆ ಪ್ರಾಯಶ್ಚಿತ್ತ ಅಂತ ಅವರೇ ಹೇಳ ಬೇಕು. ಈ ಭಾಗದ ಶಾಸಕರಾಗಿ ಮಿನಿಸ್ಟರ್ ಬಾಲ ಕೃಷ್ಣ ಅವರು ಬೈರಮಂಗಲಕ್ಕೆ ಬಂದು 500 ದಿನಗ ಳಾಯಿತು. ಯಾರು ಪ್ರಾಯಶ್ಚಿತ್ತ ಪಡಬೇಕು ಎಂದರು.**

### ಯೋಜನೆ ಕೈಬಿಡುವವರೆವಿಗೂ ಹೋರಾಟ

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಜಯಮುತ್ತು ಮಾತನಾಡಿ, ಆ.9 ರಿಂದ ಮೂರು ದಿನಗಳ ಕಾಲ ನಡೆಯುತ್ತಿರುವ ಪಾದಯಾತ್ರೆ ಮಾಜಿ ಪ್ರಧಾನಿ ದೇವೇಗೌಡರ ಆಶೀರ್ವಾದ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾರ್ಗದರ್ಶನ ಮತ್ತು ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆಯುತ್ತಿದೆ. ಈ ಹಿಂದೆ ನಮ್ಮ ಭೂಮಿ–ನಮ್ಮ ಹಕ್ಕು ಎಂಬ ಘೋಷವಾಕ್ಯದೊಂದಿಗೆ ಬಿಡದಿ ಹೋಬಳಿಯಲ್ಲಿ ಪಾದಯಾತ್ರೆ ಮಾಡಿದ್ದೆವು. ಆದರೆ ಇದು ಭಂಡ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಹೀಗಾಗಿ ಬೆಂಗಳೂರಿಗೆ ಪಾದಯಾತ್ರೆ ನಡೆಯುತ್ತಿದ್ದೇವೆ, ಯೋಜನೆ ಕೈಬಿಡುವವರೆಗೂ ಹೋರಾಟ ಮುಂದುವರೆಯುತ್ತದೆ ಎಂದರು. ನಿಖಿಲ್ ಕುಮಾರಸ್ವಾಮಿ ಅವರು ನಮ್ಮ ಪಕ್ಷದ ಆಸ್ತಿ, ಅವರ ಕೈ ಬಲಪಡಿಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಮನಗರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ದಿಶಾ ಸಮಿತಿ ಸದಸ್ಯ ರಾಜೇಶ್, ಪ್ರಮುಖರಾದ ನರಸಿಂಹ ಮೂರ್ತಿ, ಸ್ಟುಡಿಯೋ ಚಂದ್ರು, ಬೋರೇಗೌಡ, ಗೋವಿಂದರಾಜು, ಪ್ರಶಾಂತಿ ಮುಂತಾದವರು ಉಪಸ್ಥಿತರಿದ್ದರು.

# ಶ್ರೀಗಳ ಆಶೀರ್ವಾದ ಪಡೆದ ಶ್ರೀವತ್ಸ



ಮೈಸೂರು: ನಗರದ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣ ಧಾಮದಲ್ಲಿ ಏರ್ಪಡಿಸಲಾಗಿದ್ದ ಉಡುಪಿ ಶ್ರೀ ಕಾಣಿಯೂರು ಮಠದ ಪೀಠಾಧಿಪತಿ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರವರ 35ನೇ ಚಾತುರ್ಮಾಸ್ಯ ವ್ರತ ಸಮಾರಂಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮಾಜಿ ಸಂಸದ ಪ್ರತಾಪ್ ಸಿಂಹ ಶ್ರೀಗಳ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮುಖಂಡರಾದ ವಾಸುದೇವ್ ಭಟ್, ಶ್ರೀಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಶ್ರೀವತ್ಸ, ಕಾರ್ಯದರ್ಶಿ ರಾಘವೇಂದ್ರ ರಾವ್, ಖಜಾಂಜಿ ಸುರೇಶ್ ರಾವ್, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ, ಪಿ.ಎಸ್. ಶೇಖರ್, ಕಾರ್ಯದರ್ಶಿ ಕೆ.ವಿ.ಶ್ರೀಧರ್,ಕೃಷ್ಣ ದಾಸ್ ಪುರಾಣಿ, ಸುಬ್ರಹ್ಮಣ್ಯ ತಂತ್ರಿ, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಚೇತನ್, ಕಿಶೋರ್, ಸತೀಶ್ ಹಾಜರಿದ್ದರು.

# ಕೆರೆಗಳಿಗೆ ನೀರು ತುಂಬಿಸಿ ರೈತರ ಬದುಕು ಉಳಿಸಿ: ಬಿಜೆಪಿ ಪ್ರತಿಭಟನೆ

ಗುಂಡ್ಲುಪೇಟೆ: ತಾಲೂಕಿನ ಕೆರೆಗಳಿಗೆ ಕೂಡಲೇ ನೀರು ತುಂಬಿಸಿ ರೈತರ ಬದುಕು ಉಳಿಸಬೇಕು ಎಂದು ಆಗ್ರಹಿಸಿ ಬಿಜೆಪಿ ವತಿಯಿಂದ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್ಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ ಪಟ್ಟಣದ ಸಿಎಂಎಸ್ ಕಲಾಮಂದಿರದಿಂದ ಆರಂಭವಾಗಿ ರಾಷ್ಟ್ರೀಯ ಹೆದ್ದಾರಿ ಮೂಲಕ ಎಂಸಿಡಿಸಿಸಿ ಬ್ಯಾಂಕ್ ಸರ್ಕಲ್‌ವರೆಗೆ ಸಾಗಿತು. ಬಳಿಕ ಹೆದ್ದಾರಿಯಲ್ಲಿ ಮಾನವ ಸರಪಳಿ ನಿರ್ಮಿಸಿ ಶಾಸಕ ಎಚ್.ಎಂ. ಗಣೇಶ್ಪ್ರಸಾದ್, ರಾಜ್ಯ ಸರ್ಕಾರ ಹಾಗೂ ಕಾವೇರಿ ನೀರಾವರಿ ನಿಗಮದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿ.ಎಸ್. ನಿರಂಜನ್ಕುಮಾರ್, "ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಗುದ್ದಲಿ ಪೂಜೆ ನಡೆದು ಮೂರು ತಿಂಗಳಾದರೂ ಕಾಮಗಾರಿ ಆರಂಭವಾಗಿಲ್ಲ. ರೈತರು ಬೆಳೆ ಉಳಿಸಿಕೊಳ್ಳಲು ಕೊಳವೆಬಾವಿ ಕೊರೆಯಿಸಿ, ಟ್ಯಾಂಕರ್‌ಗಳ ಮೂಲಕ ನೀರು ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ" ಎಂದು ಆರೋಪಿಸಿದರು. ಅರಿಶಿಣ, ಬೆಳ್ಳುಳ್ಳಿ, ಬಾಳೆ ಸೇರಿದಂತೆ ವಿವಿಧ ಬೆಳೆಗಳಿಗೆ ಲಕ್ಷಾಂತರ ರೂಪಾಯಿ




ಬಂಡವಾಳ ಹೂಡಿರುವ ರೈತರು ಬರದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಖುಷ್ಕಿ ಬೆಳೆಗಳು ನಾಶವಾಗಿರುವುದರಿಂದ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಉಂಟಾಗಿದ್ದು, ಪಂಪ್‌ಸೆಟ್ಟಗಳಿಗೆ ಸಮರ್ಪಕ ವಿದ್ಯುತ್ ಹಾಗೂ ಟಿಸಿ ಸೌಲಭ್ಯ ದೊರೆಯುತ್ತಿಲ್ಲ ಎಂದು ದೂರಿದರು.

ತಾಲೂಕಿನ ಅಭಿವೃದ್ಧಿ ಕುಂಠಿತವಾಗಿದ್ದು, ಖನಿಜ ಸಂಪತ್ತು ಅಕ್ರಮ ಸಾಗಣೆ, ಪಡಿತರ ಅಕ್ಕಿ ಹಾಗೂ ಗಾಂಜಾ ಸಾಗಣೆ ಸೇರಿದಂತೆ ಹಲವು ಅಕ್ರಮ ಚಟುವಟಿಕೆಗಳ ಬಗ್ಗೆ ಆರೋಪಗಳು ಕೇಳಿಬರುತ್ತಿವೆ. ಈ ಸಮಸ್ಯೆಗಳತ್ತ ಜನಪ್ರತಿನಿಧಿಗಳು ಗಮನಹರಿಸಬೇಕು ಎಂದು ಒತ್ತಾಯಿಸಿದರು.

"ತಮಿಳುನಾಡಿಗೆ ನೀರು ಹರಿಯುತ್ತಿದ್ದರೂ ಗುಂಡ್ಲುಪೇಟೆ ತಾಲೂಕಿನ ಕೆರೆಗಳಿಗೆ ನೀರು ತುಂಬಿಸಲು ವಿಳಂಬ ಮಾಡಲಾಗುತ್ತಿದೆ. ನೀರಿನ ವಿಚಾರದಲ್ಲಿ ರಾಜಕೀಯ ಮಾಡದೆ ರೈತರ ಹಿತಕ್ಕೆ ಆದ್ಯತೆ ನೀಡಬೇಕು. ಕೂಡಲೇ ಕೆರೆಗಳಿಗೆ ನೀರು ಹರಿಸುವ ಕ್ರಮ ಕೈಗೊಳ್ಳಬೇಕು" ಎಂದು ಆಗ್ರಹಿಸಿದರು. ಸಮಸ್ಯೆ ಪರಿಹಾರಕ್ಕಾಗಿ ಕಾವೇರಿ ನೀರಾವರಿ ನಿಗಮದ ಇಇ ಹಾಗೂ ಎಇಇ ಅವರನ್ನು ಕರೆಸಿ ಸೋಮವಾರ ಸಭೆ ನಡೆಸುವಂತೆ ತಹಸೀಲ್ದಾರ್ ಅವರನ್ನು ನಿರಂಜನ್ಕುಮಾರ್ ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಪ್ರತಿಭಟನಾಕಾರರ ಮನವಿ ಆಲಿಸಿ, ವಿಷಯವನ್ನು ಮೇಲಧಿಕಾರಿಗಳು ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಗಮನಕ್ಕೆ ತಂದು ವರದಿ ಸಲ್ಲಿಸುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಸಿ. ಮಹದೇವಪ್ರಸಾದ್, ಮುಖಂಡರಾದ ಎಲ್. ಸುರೇಶ್, ಕುರುಬರಹುಂಡಿ ಲೋಕೇಶ್, ನವೀನ್ಮೌರ್ಯ, ಸಿ.ಎಂ. ನಾಗರಾಜು, ಸುಬ್ಬಪ್ಪ, ಪ್ರಣಯ್, ದೇವರಹಳ್ಳಿ ಮಹೇಶ್, ಕಾರ್ತಿಕ್,. ಸುನೀಲ್ ಮೂಡ್ಲ್ ನಮೋ ಮಂಜು ವಿಜಯ್ ಬೊಮ್ಮನಹಳ್ಳಿ, ಗುರುಪ್ರಸಾದ್ ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.

## ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಹೇಳಿಕೆ

# ರಾತ್ರಿ ವ್ಯಾಪಾರಕ್ಕೆ ಕ್ರಮವಹಿಸಲು ಸಿಎಂ ಡಿಕೆಶಿ ಸೂಚನೆ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ವ್ಯಾಪಾರಕ್ಕೆ ಅವಕಾಶ ಕಲ್ಪಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೃಹ, ಪ್ರವಾಸೋದ್ಯಮ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ತಿಳಿಸಿದ್ದಾರೆ.

ಬೆಂಗಳೂರಿನ ಗೃಹ ಕಚೇರಿಯಲ್ಲಿ ಶನಿವಾರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ನಿಯೋಗ, ಮೈಸೂರಿನಲ್ಲಿ ರಾತ್ರಿ ವ್ಯಾಪಾರಕ್ಕೆ ಅವಕಾಶ ನೀಡುವುದರಿಂದ ಆಗುವ ಅನುಕೂಲಗಳ ಕುರಿತು ವಿವರಿಸಿತು. ಮನವಿಯನ್ನು ಆಲಿಸಿದ ಸಿಎಂ, ಸಂಬಂಸಿದ ಅಧಿ ಕಾರಿಗಳಿಗೆ ಕೂಡಲೇ ಪತ್ರ ಬರೆದು, ಸರಕಾರದ ಆದೇಶದನ್ವಯ ಮೈಸೂರಿನಲ್ಲಿ ರಾತ್ರಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ರಾಜ್ಯ ಸರಕಾರದ ಆದೇಶದ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಮಧ್ಯರಾತ್ರಿ 1ರವರೆಗೆ




ವ್ಯಾಪಾರ ನಡೆಸಲು ಕಾರ್ಮಿಕ ಇಲಾಖೆ ಅವಕಾಶ ನೀಡಿದೆ. 10 ಅಥವಾ ಅದಕ್ಕಿಂತ ಹೆಚ್ಚಿನ ನೌಕರರನ್ನು ಹೊಂದಿರುವ ಅಂಗಡಿಗಳು ಹಾಗೂ ವಾಣಿಜ್ಯ ಸಂಸ್ಥೆಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು ಅವಕಾಶವಿದೆ. ಬೆಂಗಳೂರು ನಗರದಲ್ಲಿ ಈಗಾಗಲೇ ಈ ಆದೇಶದನ್ವಯ ರಾತ್ರಿ 1ರವರೆಗೆ ವ್ಯಾಪಾರ ವಹಿವಾಟು ನಡೆಯುತ್ತಿದೆ. ಆದರೆ, ಮೈಸೂರಿನಲ್ಲಿ ಈವರೆಗೆ ಆದೇಶ ಜಾರಿಗೆ ಸಂಬಂಸಿದಂತೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ ಎಂದು ಇದೇ ವೇಳೆ ಸಿಎಂ ಅವರಿಗೆ ಮನವರಿಕೆ ಮಾಡಿಕೊಡಲಾಯಿತು.

ಮೈಸೂರಿನಲ್ಲಿ ರಾತ್ರಿವ್ಯಾಪಾರಕ್ಕೆ ಅವಕಾಶ ಕಲ್ಪಿಸಿದರೆ ನಾಗರಿಕರು, ವ್ಯಾಪಾರಸ್ಥರು ಹಾಗೂ ಉದ್ಯಮಿಗಳಿಗೆ ಅನುಕೂಲವಾಗಲಿದೆ. ದೇಶದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಾರೆ. ರಾತ್ರಿ ವೇಳೆ ವ್ಯಾಪಾರ ವಹಿವಾಟು ನಡೆಯುವುದರಿಂದ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ದೊರೆಯಲಿದ್ದು, ವ್ಯಾಪಾರ ವಹಿವಾಟು ಹೆಚ್ಚಳದ ಜತೆಗೆ ಉದ್ಯೋಗಾವಕಾಶಗಳೂ ಸೃಷ್ಟಿಯಾಗಲಿವೆ. ಪ್ರವಾಸೋದ್ಯಮದ ಮೂಲಕ ರಾಜ್ಯದ ಆದಾಯವೂ ಹೆಚ್ಚಲಿದೆ ಎಂದು ನಿಯೋಗ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿತು. ಮೈಸೂರು–ಬೆಂಗಳೂರು ದಶಪಥ ರಸ್ತೆ ನಿರ್ಮಾಣಗೊಂಡ ಬಳಿಕ ಎರಡೂ ನಗರಗಳ ನಡುವಿನ ಸಂಚಾರ ಹೆಚ್ಚಾಗಿದೆ. ಮೈಸೂರು ರಾಜಧಾನಿಗೆ ಪರ್ಯಾಯವಾಗಿ ಬೆಳೆಯುತ್ತಿರುವ ನಗರವಾಗಿದ್ದು, ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರದಲ್ಲೂ ಅಭಿವೃದ್ಧಿ ಕಾಣುತ್ತಿದೆ. ಹೀಗಾಗಿ ರಾತ್ರಿ ವೇಳೆಯಲ್ಲೂ ನಗರಕ್ಕೆ ಸಾಕಷ್ಟು ಪ್ರಯಾಣಿಕರು ಆಗಮಿಸುತ್ತಿದ್ದು, ರಾತ್ರಿ ವ್ಯಾಪಾರಕ್ಕೆ ಅವಕಾಶ ನೀಡುವ ಸರಕಾರದ ಆದೇಶ ಜಾರಿಗೊಳಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು. ದೇವರಾಜ ಮಾರುಕಟ್ಟೆ ಸಂಘದ ಅಧ್ಯಕ್ಷ ಎಸ್.ಮಹದೇವು, ರಾಜ್ಯ ಪೆಟ್ರೋಲಿಯಂ ಉತ್ಪನ್ನಗಳ ಸಂಘದ ಕೆ.ಎಂ.ಬಸವೇಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಉಪಾಧ್ಯಕ್ಷ ಆರ್.ಆನಂದ್, ಕಾರ್ಯದರ್ಶಿ ಶಿವಾಜಿರಾವ್, ಖಜಾಂಚಿ ಎಸ್.ಜೆ.ಅಶೋಕ್, ನಿರ್ದೇಶಕರಾದ ಎಂ.ಸಿ.ಬನ್ಸಾಲಿ, ಪಿ.ಕುಮಾರ್ ಸೇರಿ ಇತರರು ಉಪಸ್ಥಿತರಿದ್ದರು.

# ರಾಮನಗರದಲ್ಲಿ ಪುರಿ ಜಗನ್ನಾಥ ರಥ ದರ್ಶನ

ರಾಮನಗರ: ಪುರಿ ಜಗನ್ನಾಥ ರಥವನ್ನು ದರ್ಶಿಸದವರಿಗೆ ರಾಮನಗರದ ವಾಸವಿ ಯೂತ್ಸ್ ಫೋರಂ ಪುರಿ ಜಗನ್ನಾಥ



ರಥದ ಪ್ರತಿರೂಪವನ್ನು ತಯಾರಿಸಿದ್ದು, ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ.

ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ನಿಕಾಮಹಲ್‌ನಲ್ಲಿ ಆಗಸ್ಟ್ 09ರ ಭಾನುವಾರ ಸಂಜೆಯವರೆವಿಗು ಈ ರಥ ದೇವಾಲಯದಲ್ಲಿದ್ದು, ಪುರಿ ಜಗನ್ನಾಥ ದೇವರ ದರ್ಶನ ಪಡೆಯಬಹುದಾಗಿದೆ ಎಂದು ವಾಸವಿ ಯೂತ್ಸ್ ಫೋರಂ ಪದಾಧಿಕಾರಿಗಳು ತಿಳಿಸಿದ್ದಾರೆ. ನಾಗರೀಕರಲ್ಲಿನ ಆಧ್ಯಾತ್ಮಿಕತೆಯನ್ನು ಗಟ್ಟಿ ಮಾಡುವ ಸಲುವಾಗಿ ಪ್ರತಿ ವರ್ಷ ಆಷಾಢ ಮಾಸದ ಕೊನೆಯ ಶುಕ್ರವಾರದ ಪ್ರಯುಕ್ತ ವಿಶೇಷತೆಯನ್ನು ಕೊಡುತ್ತಿದ್ದೇವೆ. ಈ ಬಾರಿ ಪುರಿ ಜಗನ್ನಾಥನ ರಥದ ವೈಭವದ ದರ್ಶನ ಕಲ್ಪಿಸುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ.

# ವ್ಯಸನ, ಖಿನ್ನತೆ ಸಾಧನೆಗೆ ದಾರಿಯಲ್ಲ: ಮಧುಕರ್ ದೇಶಪಾಂಡೆ

ಮೈಸೂರು: ವ್ಯಸನಕ್ಕೆ ಒಳಗಾಗುವುದು, ಕಿನ್ನತೆಗೆ ಒಳಗಾಗುವುದು ಸಾಧನೆಗೆ ದಾರಿಯಲ್ಲ. ನಿಮ್ಮ ವೈಯಕ್ತಿಕ ಸಾಧನೆ ಮತ್ತು ಯಶಸ್ಸು ಮುಖ್ಯವೇ ಹೊರತು ಯಾರು ದಾರಿ ತಪ್ಪಬಾರದು. ಸೋಲು ಸಹಜ, ಅದರಿಂದ ಕುಗ್ಗದೆ ಅದನ್ನು ಮೆಟ್ಟಿ ನಿಲ್ಲುವುದನ್ನು ಕಲಿಯಬೇಕು. ಕಾಲೇಜು ಹಂತದಲ್ಲಿ ಎಲ್ಲಾ ಚಟುವಟಿಕೆಗಳು, ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಅನುಭವ ಹೆಚ್ಚುತ್ತದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಮಧುಕರ್ ದೇಶಪಾಂಡೆ ಹೇಳಿದರು

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ, ವಕೀಲರ ಸಂಘ, ಮಹಾರಾಣಿ ಮಹಿಳಾ ಕಲಾ ಕಾಲೇಜನ ಮನೋವಿಜ್ಞಾನ ವಿಭಾಗ, ವಿದ್ಯಾರ್ಥಿ ಆಪ್ತ ಸಲಹಾ ಸಮಿತಿ, ಮಾದಕ ವಸ್ತು ವಿರೋಧಿ ಜಾಗೃತಿ ಸಮಿತಿ, ಹಾರ್ಟ್ಫುಲ್ನೆಸ್ ಇನ್ಸ್ಟಿಟ್ಯೂಟ್ ಮತ್ತು ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ಕಾನೂನು ಅರಿವು ಕಾರ್ಯಕ್ರಮವನ್ನು ಮಹಾರಾಣಿ ಮಹಿಳಾ ಕಲಾ ಕಾಲೇಜು ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಮಾದಕ ದ್ರವ್ಯಗಳು ಮತ್ತು ರಾಸಾಯನಿಕ ಪದಾರ್ಥಗಳು ಸುಲಭವಾಗಿ ಸಿಗುತ್ತಿದ್ದು, ಇವುಗಳ ಬಗ್ಗೆ ಅತ್ಯಂತ ಎಚ್ಚರಿಕೆ ವಹಿಸಬೇಕು. ಎಷ್ಟೇ ಆರೋಗ್ಯವಂತರಾಗಿದ್ದರೂ, ಯಾವುದೇ ಸಂದರ್ಭದಲ್ಲಿ




ಅಪರಿಚಿತರು ನೀಡುವ ವಸ್ತುಗಳನ್ನು ಅಥವಾ ಪಾನೀಯ 'ಳನ್ನು ಸೇವಿಸದೆ ಸದಾ ಜಾಗರೂಕರಾ ಗಿರಬೇಕು. ಡಿಜಿಟಲ್ ಯುಗದಲ್ಲಿ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಅತಿ ಬಳಕೆಯಿಂದ ಉಂಟಾ ಗುವ ವ್ಯಸನ, ಅದರಿಂದ ಹೊರಬರಲು ಇರುವ ಮಾರ್ಗ ಗಳು ಹಾಗೂ ವ್ಯಸನಿಗಳ ಬಗ್ಗೆ ಸಮಾಜದಲ್ಲಿ ಇರಬೇಕಾದ ಸಕಾರಾತ್ಮಕ ಮನೋಭಾವದ ವಿಚಾರಗಳನ್ನು ತಿಳಿಸಿದರು.

ಫಾಸ್ಟ್ ಟ್ರ್ಯಾಕ್ ವಿಶೇಷ ನ್ಯಾಯಾಲಯ –1 ಜಿಲ್ಲಾ ನ್ಯಾಯಾಧೀಶ ಆನಂದ್ ಪಿ ಹೊಗಡೆ ಮಾತನಾಡಿ, ಮೈಸೂರು ನ್ಯಾಯಾಲಯದಲ್ಲಿ ಪ್ರಸ್ತುತ ಬರೋಬ್ಬರಿ 600 ಕ್ಕೂ ಅಧಿಕ ಪೋಕ್ಸೊ ಪ್ರಕರಣಗಳು ವಿಚಾರಣೆಗಾಗಿ ಬಾಕಿ ಉಳಿದಿದ್ದು, ಪೋಕ್ಸೊ ಕಾಯ್ದೆಯಡಿ ಬರುವ ಪ್ರಕರಣಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವರ್ಗೀಕರಿಸಬಹುದು ಬಾಲ್ಯವಿವಾಹಗಳು, ಲೈಂಗಿಕ ಒಡನಾಟ, ಅಪರಾಧ ಪ್ರಕರಣಗಳು. ಕೆಲವು ಪ್ರಕರಣಗಳಲ್ಲಿ ಅತ್ಯಂತ ಆಘಾತಕಾರಿ ಸಂಗತಿಗಳೆಂದರೆ, ಸ್ವತಃ ತಂದೆಯೇ ತನ್ನ ಸ್ವಂತ ಮಗಳ ಮೇಲೆ ಲೈಂಗಿಕ ದೌರ್ಜನ್ಯವೆಸಗಿ, ಮಗು ಜನ್ಮ ಪಡೆದಿರುವ ಅಮಾನವೀಯ ಘಟನೆಗಳು ವರದಿಯಾಗಿವೆ ಎಂದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎಂ.ಎಸ್.ಅನಿತಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜು ಸಿದ್ದಪ್ಪ ಅಂಕಸದೊಡ್ಡಿ, ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಸಂತೋಷ್ ನಾಗರಾಳೆ, ಮೈಸೂರು ವಕೀಲ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಪ್ರಾದೇಶಿಕ ಫೆಲಿಸಿಟೇಟರ್, ಹಾರ್ಟ್‌ಫುಲ್‌ನೆಸ್ ಸಂಸ್ಥೆಯ ಕೆ. ಮಧುಸೂದನ್, ಮಾದಕ ವಸ್ತು ವಿರೋಧ ಜಾಗೃತ ಸಮಿತಿಯ ಪ್ರೊ.ಸರಿತಾ, ಮನೋವಿಭಾಗದ ಮುಖ್ಯಸ್ಥ ಮತ್ತು ರಾಗಿಂಗ್ ವಿರೋಧಿ ಸಮಿತಿಯ ಡಾ.ವಾಣಿ ಆರ್ ಬಲ್ಲಾಳ್ ಮತ್ತಿತರರು ಉಪಸ್ಥಿತರಿದ್ದರು.

# ತಕ್ಷಣ ಮಹಿಳಾ ಮೀಸಲು ಜಾರಿಗೊಳಿಸಿ




ಮೈಸೂರು: ಜನಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಹೆಸರಿನಲ್ಲಿ ಮಹಿಳಾ ಮೀಸಲಾತಿಯನ್ನು ವಂಚಿಸುವ ಕ್ರಮ ನಿಲ್ಲಿಸಿ, ತಕ್ಷಣ ಮೀಸಲಾತಿಯನ್ನು ಜಾರಿಗೊಳಿಸಲು ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಪ್ರತಿಭಟನೆ ನಡೆಸಿತು.

ನಗರದ ಗಾಂಧಿವೃತ್ತದಲ್ಲಿ ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ದೇವಿ ಮಾತನಾಡಿ ಜನಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಹೆಸರಿನಲ್ಲಿ ಮಹಿಳೆಯರಿಗೆ ಸಿಗಬೇಕಾದ ಶೇಕಡಾ 33 ರಷ್ಟು ಮೀಸಲಾತಿಯನ್ನು ವಂಚಿಸಲು ಯತ್ನಿಸುತ್ತಿರುವ ಕ್ರಮವನ್ನು ಕೈ ಬಿಟ್ಟು ಶೀಘ್ರವಾಗಿ ಈ ಅಧಿವೇಶನದಲ್ಲೇ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲು ಮುಂದಾಗಬೇಕು. ದೇಶದ ಮಹಿಳೆಯರಿಗೆ ಭಾರತೀಯ ಸಂವಿಧಾನ ನೀಡಿರುವ ರಾಜಕೀಯ ಪ್ರಾತಿನಿಧ್ಯದ ಹಕ್ಕನ್ನು ವಾಸ್ತವದಲ್ಲಿ ಅನುಷ್ಠಾನಗೊಳಿಸುವ ಅತ್ಯಂತ ಮಹತ್ವದ ವಿಷಯವಾಗಿದೆ. ಆದರೆ, ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದಿದ್ದರೂ, ದೇಶದ ರಾಜಕೀಯ ಆಡಳಿತದಲ್ಲಿ ಮಹಿಳೆಯರಿಗೆ ಸಮರ್ಪಕ ಸ್ಥಾನಮಾನ ದೊರೆತಿಲ್ಲ. ಮಹಿಳಾ ಮೀಸಲಾತಿ ಯನ್ನು ತಕ್ಷಣ ಮತ್ತು ಷರತ್ತುಗಳಿಲ್ಲದೆ ಜಾರಿಗೊಳಿಸಲು ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದರು. ಈ ಪ್ರತಿಭಟನೆಯಲ್ಲಿ ರಾಜ್ಯ ಸಹಕಾರ್ಯದರ್ಶಿ ಸುಶೀಲಾ, ಜಿಲ್ಲಾ ಸಂಚಾಲಕಿ ಶಕುಂತಲಾ, ಜಿಲ್ಲಾ ಮುಖಂಡರಾದ ಖೈರುನ್ನಿಸ, ರೂಪ, ಮಮತ, ಲಕ್ಷ್ಮಿ, ಮಾನಸ, ಚಂದ್ರಮ್ಮ, ಮಹಾದೇವಮ್ಮ ಮುಂತಾದವರಿದ್ದರು.

# ನಾಳೆ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ

ಚಾಮರಾಜನಗರ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾಮಟ್ಟದ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆಯನ್ನು ಆಗಸ್ಟ್ 10ರಂದು ಬೆಳಿಗ್ಗೆ 11 ಗಂಟೆಗೆ ನಗರದ ಬಿ.ಇ.ಓ ಕಚೇರಿ ಹಿಂಭಾಗದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು (ಪ್ರೌಢಶಾಲೆ ವಿಭಾಗ) ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆಯನ್ನು ಜಿಲ್ಲೆಯಾದ್ಯಂತ ಆಗಸ್ಟ್ 10ರಂದು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ಎಲ್ಲಾ ಶಾಲೆ, ಕಾಲೇಜು ಹಾಗೂ ಅಂಗನವಾಡಿ ಕೇಂದ್ರಗಳ ಮೂಲಕ 1 ರಿಂದ 19 ವರ್ಷದೊಳಗಿನ ಮಕ್ಕಳಿಗೆ ಅಲ್ಬೆಂಡರ್ಝೋಲ್–400ಎಂ.ಜಿ ಮಾತ್ರೆಗಳನ್ನು ಉಚಿತವಾಗಿ ನೀಡಿ ಮಕ್ಕಳನ್ನು ಜಂತುಹುಳು ಮುಕ್ತರನ್ನಾಗಿಸಲಾಗುತ್ತಿದೆ. ಜಂತುಹುಳು ನಿವಾರಣಾ ಕಾರ್ಯಕ್ರಮವು ಆಗಸ್ಟ್ 10 ರಿಂದ 17 ರವರೆಗೆ ಹಮ್ಮಿಕೊಳ್ಳಲಾಗಿದ್ದು, ಆಗಸ್ಟ್ 17ರ ಮಾಪ್–ಅಪ್ ದಿನದಂದು ಬಿಟ್ಟುಹೋದ ಮಕ್ಕಳಿಗೆ ಅಲ್ಬೆಂಡರ್ಝೋಲ್–400ಎಂ.ಜಿ ಮಾತ್ರೆಗಳನ್ನು ನೀಡಲಾಗುವುದು. ಈ ಬಾರಿ ಚಾಮರಾಜನಗರ ತಾಲ್ಲೂಕಿನಲ್ಲಿ 68,556 ಮಕ್ಕಳಿಗೆ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 40,485, ಕೊಳ್ಳೇಗಾಲ ತಾಲ್ಲೂಕಿನಲ್ಲಿ 31,849, ಹನೂರು ತಾಲ್ಲೂಕಿನಲ್ಲಿ 34,428 ಹಾಗೂ ಯಳಂದೂರು ತಾಲ್ಲೂಕಿನಲ್ಲಿ 14,819 ಮಕ್ಕಳು ಸೇರಿದಂತೆ ಜಿಲ್ಲಾದ್ಯಂತ ಒಟ್ಟು 1,90,137 ಮಕ್ಕಳಿಗೆ ಜಂತು ನಿವಾರಣಾ ಮಾತ್ರೆಗಳನ್ನು ನೀಡುವ ಗುರಿ ಹೊಂದಲಾಗಿದೆ. ಉದ್ದೇಶಿತ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಸಹಭಾಗಿತ್ವದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಹಾಯಕರು ಎಲ್ಲಾ ಶಾಲಾ, ಕಾಲೇಜು, ಅಂಗನವಾಡಿ ಹಾಗೂ ಮನೆ–ಮನೆಗಳಿಗೆ ಭೇಟಿ ನೀಡಿ 1 ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆಗಳನ್ನು ನೀಡಲಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಪರಿಷ್ಕೃತ ವೇಳಾಪಟ್ಟಿ**

## ಆ.17ರವರೆಗೂ ಬಿಎಲ್‌ಒಗಳಿಂದ ಮನೆಮನೆಗೆ ಭೇಟಿ

ಚಾಮರಾಜನಗರ, ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಕುರಿತು ಈ ಹಿಂದೆ ಹೊರಡಿಸಲಾಗಿದ್ದ ವೇಳಾಪಟ್ಟಿಯನ್ನು ಪರಿಷ್ಕರಿಸಿದ್ದು, ಈ ಪ್ರಕಾರ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆಮನೆಗೆ ಭೇಟಿ ನೀಡುವ ಕಾರ್ಯವು ಆಗಸ್ಟ್ 17 ರವರೆಗೆ ವಿಸ್ತರಣೆಯಾಗಿದೆ.

ಈ ಹಿಂದಿನ ವೇಳಾಪಟ್ಟಿ ಪ್ರಕಾರ ಬಿಎಲ್‌ಒಗಳು ಜೂನ್ 30 ರಿಂದ ಆಗಸ್ಟ್ 8ರವರೆಗೆ ಮನೆಮನೆಗೆ ಭೇಟಿ ನೀಡಬೇಕಿತ್ತು. ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಗಸ್ಟ್ 17ರವರೆಗೂ ಮನೆಮನೆಗೆ ಬಿಎಲ್‌ಒಗಳು ಭೇಟಿ ನೀಡಲಿದ್ದಾರೆ. ಮತಗಟ್ಟೆಗಳ ಮರು ಸಂಯೋಜನೆಗೆ ಈ ಹಿಂದಿನ ವೇಳಾಪಟ್ಟಿ ಪ್ರಕಾರ ಆಗಸ್ಟ್ 8ಕ್ಕೆ ಅವಧಿ ನಿಗದಿಯಾಗಿದ್ದು, ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಗಸ್ಟ್ 17ರವರೆಗೆ ವಿಸ್ತರಿಸಲಾಗಿದೆ. ಕರಡು ಮತದಾರರ ಪಟ್ಟಿ ಈ ಹಿಂದಿನ ವೇಳಾಪಟ್ಟಿ ಪ್ರಕಾರ ಆಗಸ್ಟ್ 17ರಂದು ಪ್ರಕಟವಾಗಬೇಕಿತ್ತು. ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಗಸ್ಟ್ 24 ರಂದು ಪ್ರಕಟವಾಗಲಿದೆ. ಹಕ್ಕು ಮತ್ತು ಆಕ್ಷೇಪಣೆಗಳ ಸಲ್ಲಿಕೆಗೆ ಈ ಹಿಂದಿನ ವೇಳಾಪಟ್ಟಿ ಪ್ರಕಾರ ಆಗಸ್ಟ್ 17ರಿಂದ ಸೆಪ್ಟೆಂಬರ್ 16ರವರೆಗೆ ನಿಗದಿಯಾಗಿದ್ದ ದಿನಾಂಕವನ್ನು ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ನಿಗದಿ ಮಾಡಲಾಗಿದೆ. ನೋಟಿಸ್ ಅವಧಿ/ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿಗಾಗಿ ಈ ಹಿಂದಿನ ವೇಳಾಪಟ್ಟಿ ಪ್ರಕಾರ ಆಗಸ್ಟ್ 17 ರಿಂದ ಅಕ್ಟೋಬರ್ 15ರವರೆಗೆ ಅವಧಿ ನಿಗದಿಯಾಗಿತ್ತು. ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಗಸ್ಟ್ 24ರಿಂದ ಅಕ್ಟೋಬರ್ 22ರವರೆಗೆ ನಿಗದಿ ಮಾಡಲಾಗಿದೆ. ಅಂತಿಮ ಮತದಾರರ ಪಟ್ಟಿಯನ್ನು ಈ ಹಿಂದಿನ ವೇಳಾಪಟ್ಟಿ ಪ್ರಕಾರ ಅಕ್ಟೋಬರ್ 19ಕ್ಕೆ ಪ್ರಕಟಿಸಬೇಕಿತ್ತು. ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆಯಾಗಲಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಾಸಿಂಹ ವಿರುದ್ಧ ಸುಬ್ರಹ್ಮಣ್ಯ ಕಿಡಿ

ಮೈಸೂರು: ಪ್ರತಾಪ್ ಸಿಂಹ 2014ರ ಚುನಾವಣೆಯಲ್ಲಿ ನೀವು ಸಂಸದರಾಗಿದ್ದು ಒಬ್ಬ ಹಿಂದುಳಿದ ನಾಯಕನನ್ನ ತುಳಿದೇ ಅನ್ನೋದನ್ನ ಮರೀಬೇಡಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿರುಗೇಟು ನೀಡಿದರು.



?ಯತೀಂದ್ರರ ಕುರಿತು ಮಾತನಾಡಿದ ಪ್ರತಾಪಸಿಂಹ ಹೇಳಿಕೆಗೆ ಮೇಲಿನಂತೆ ಪ್ರತಿಕ್ರಿಯಿಸಿ, ಯತೀಂದ್ರ ಸಿದ್ದರಾಮಯ್ಯ ಮಂತ್ರಿಯಾಗಿರೋದು ಮೆರಿಟ್ ಕೋಟಾದಲ್ಲೇ ವಿನಃ ಅಪ್ಪನ ಕೋಟಾದಲ್ಲಿ ಅಲ್ಲ. 2018ರಲ್ಲಿ ರಾಜಕೀಯ ಪ್ರವೇಶ ಮಾಡಿದ ಯತೀಂದ್ರ ಮೊದಲ ಬಾರಿಗೆ ವರುಣ ಕ್ಷೇತ್ರದಿಂದ ಗೆದ್ದು ವಿಧಾನಸಭೆ ಪ್ರವೇಶಿಸಿದರು. 2023ರಲ್ಲಿ ಹೈಕಮಾಂಡ್ ಸೂಚನೆಯಂತೆ ಕ್ಷೇತ್ರವನ್ನ ತ್ಯಾಗ ಮಾಡಿದರು. ಆದಾಗ್ಯೂ 2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯಾದ್ಯಂತ ಪ್ರಚಾರ ಮಾಡಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶ್ರಮಿಸಿದರು. ಕಾಂಗ್ರೆಸ್ ಸರ್ಕಾರ ಕೊಟ್ಟ ಗ್ಯಾರಂಟಿ ಯೋಜನೆಗಳು, ಇತರ ಕೊಡುಗೆಗಳನ್ನು ಜನರ ಮನಮುಟ್ಟುವಂತೆ ಮಾಡಿ, ದಾವಣಗೆರೆ ಬಾಗಲಕೋಟೆ ಚುನಾವಣೆಗಳಲ್ಲೂ ಗೆಲುವು ಸಿಗುವಂತೆ ಮಾಡಿದರು. ಯತೀಂದ್ರ ಅವರ ಕಾರ್ಯವೈಖರಿಯನ್ನು ಕಂಡು ಕಾಂಗ್ರೆಸ್‌ನ ಹೈಕಮಾಂಡ್, ವರಿಷ್ಠರಾದ ರಾಹುಲ್ ಗಾಂಧಿ ಮಂತ್ರಿ ಮಾಡಿದ್ದಾರೆ. ಇದ್ಯಾವುದು ಕೋಟಾದಲ್ಲಿ ಇಲ್ಲ ಎಂದರು. ಸಿದ್ದರಾಮಯ್ಯ ಅವರು ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಹೇಳಿದ್ದರೂ, ಕರ್ನಾಟಕ ಕಾಂಗ್ರೆಸ್ ಪಕ್ಷದ 136 ಶಾಸಕರಿಗೂ ನಾಯಕರಾಗಿದ್ದಾರೆ. ಸಮ ಸಮಾಜಕ್ಕಾಗಿ ಶ್ರಮಿಸುವ ನಾಯಕನಾಗಿ ಉಳಿದಿದ್ದಾರೆ. ನೀವು ಸಹ ಓರ್ವ ಹಿಂದುಳಿದ ನಾಯಕನ ಟಿಕೇಟ್ ತಪ್ಪಿಸಿ ಸಂಸದರಾದಿರಿ ಎಂಬುದನ್ನು ಮರೆಯಬೇಡಿ ಎಂದರು.

# ಪಿಎಲ್ಡಿ ಫಲಿತಾಂಶ ಚುನಾವಣೆ ದಿಕ್ಸೂಚಿ

## ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಗೆಲುವು ರೈತರ ತೀರ್ಪು: ಎನ್.ಮಹೇಶ್

ಗುಂಡ್ಲುಪೇಟೆ: ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಎಲ್ಡಿ) ಬ್ಯಾಂಕ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿರುವುದು ಕ್ಷೇತ್ರದ ರೈತರ ತೀರ್ಪಿನ ಪ್ರತೀಕವಾಗಿದೆ ಎಂದು ಮಾಜಿ ಶಾಸಕ ಎನ್.ಮಹೇಶ್ ಹೇಳಿದರು.

ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ಬಿಜೆಪಿ ಮಂಡಲ ವತಿಯಿಂದ ಆಯೋಜಿಸಿದ್ದ ಪಿಎಲ್ಡಿ ಬ್ಯಾಂಕ್ ಚುನಾವಣೆಯಲ್ಲಿ ಜಯಗಳಿಸಿದ ಅಭ್ಯರ್ಥಿಗಳ ಕೃತಜ್ಞತಾ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಮಾಜಿ ಶಾಸಕರಾದ ಸಿ.ಎಸ್.ನಿರಂಜನಕುಮಾರ್ ಹಾಗೂ ಎನ್.ಮಹೇಶ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಎನ್. ಮಹೇಶ್, ಪಿಎಲ್ಡಿ ಬ್ಯಾಂಕ್ ಚುನಾವಣೆಯ ಫಲಿತಾಂಶವು 2028ರ ವಿಧಾನಸಭಾ ಚುನಾವಣೆಯ ಮುನ್ನೋಟವಾಗಿದೆ. ರೈತರ ಸಮಸ್ಯೆಗಳಿಗೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಸಮರ್ಪಕವಾಗಿ ಸ್ಪಂದಿಸದಿರುವುದಕ್ಕೆ ರೈತರು ಚುನಾವಣೆಯ ಮೂಲಕ ತಕ್ಕ ಉತ್ತರ ನೀಡಿದ್ದಾರೆ ಎಂದು ಆರೋಪಿಸಿದರು.

ಗುಂಡ್ಲುಪೇಟೆ ತಾಲೂಕಿನ ಬಹುತೇಕ ಕುಟುಂಬಗಳು ಕೃಷಿಯನ್ನೇ ಅವಲಂಬಿಸಿವೆ. ಆದರೆ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಸದ ಪರಿಣಾಮ ಅಂತರ್ಜಲ ಮಟ್ಟ ಕುಸಿದಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆರೆಗಳಿಗೆ ನೀರು ತುಂಬಿಸುವಂತೆ ವಿರೋಧ ಪಕ್ಷದ ಮುಖಂಡರು ಹಾಗೂ ರೈತ ಸಂಘಟನೆಗಳೊಂದಿಗೆ ಪಾದಯಾತ್ರೆ, ಪ್ರತಿಭಟನೆ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

"ಪಿಎಲ್ಡಿ ಬ್ಯಾಂಕ್ ಚುನಾವಣೆಯ ಫಲಿತಾಂಶವೇ ಜನರ ಮನಸ್ಥಿತಿಯನ್ನು ತೋರಿಸಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಗೆ ಕ್ಷೇತ್ರದ ಜನರು ತಕ್ಕ ಪಾಠ ಕಲಿಸಲಿದ್ದಾರೆ" ಎಂದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು



ಹಾಗೂ ಆಡಳಿತ ವ್ಯವಸ್ಥೆಯನ್ನೂ ಟೀಕಿಸಿದ ಅವರು, ವಿವಿಧ ಇಲಾಖೆಗಳ ಅನುದಾನ ಹಾಗೂ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಆಸ್ಪತ್ರೆ ಸೇವೆಗಳಿಂದ ಹಿಡಿದು ಭೂಮಿ ನೋಂದಣಿ ಶುಲ್ಕದವರೆಗೆ ಜನರ ಮೇಲಿನ ವಿವಿಧ ರೀತಿಯ ಶುಲ್ಕ ಮತ್ತು ದರಗಳು ಹೆಚ್ಚಾಗಿವೆ ಎಂದು ದೂರಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಿ.ಎಸ್.ನಿರಂಜನಕುಮಾರ್ ಅವರನ್ನು ಬೆಂಬಲಿಸುವಂತೆ ಮತದಾರರಿಗೆ ಕರೆ ನೀಡಿದ ಅವರು, ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರೊ.ಮಲ್ಲಿಕಾರ್ಜುನಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಜಿಡಿಎಲ್ ಸುರೇಶ್, ಕೊಡಸೋಗೆ ಶಿವಬಸಪ್ಪ, ನಿಟ್ರೆ ಮಹದೇವಪ್ಪ, ಅಕರಲವಾಡಿ ನಾಗೇಂದ್ರ, ಜಗದೀಶ್, ಕುರುಬರಹುಂಡಿ ಲೋಕೇಶ್, ಮೂಡ್ನಕೂಡ ಪ್ರಕಾಶ್, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ನವೀನ್ ಮೌರ್ಯ, ವೀರಶೈವ ತಾಲೂಕು ಅಧ್ಯಕ್ಷ ರಾಜಣ್ಣ, ಮಲ್ಲಿಕಾರ್ಜುನಸ್ವಾಮಿ, ಸುನೀಲ್ ಮೂಡ್ಲು, ನಮೋ ಮಂಜು, ಹಂಗಳ ಪ್ರಣಯ್, ಮಲ್ಲೇಶ್ ಸುಬ್ಬು, ಶಿಂಡನಪುರ ಮಂಜುನಾಥ್, ಪುರಸಭೆ ಸದಸ್ಯ ನಾಗೇಶ್, ಹಸಗೂಲಿ ಸಿದ್ದಯ್ಯ, ಗೋವಿಂದ ನಾಯಕ್ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

### ಸತತ ನಾಲ್ಕನೇ ಬಾರಿಗೆ ಬಿಜೆಪಿ ಗೆಲುವು

ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್ ಮಾತನಾಡಿ, ಪಿಎಲ್ಡಿ ಬ್ಯಾಂಕ್ ಚುನಾವಣೆಯಲ್ಲಿ ಸತತ ನಾಲ್ಕನೇ ಬಾರಿಗೆ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ಪಕ್ಷದ ಮೇಲಿನ ರೈತರ ವಿಶ್ವಾಸವನ್ನು ತೋರಿಸುತ್ತದೆ. ಈ ಬಾರಿ ಒಟ್ಟು 14 ಸ್ಥಾನಗಳ ಪೈಕಿ 12 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿರುವುದು ವಿಶೇಷವಾಗಿದೆ ಎಂದರು. ಕ್ಷೇತ್ರದ ಜನರು ಹಾಗೂ ರೈತರು ಶಾಸಕರ ಕಾರ್ಯವೈಖರಿ, ನಡವಳಿಕೆ ಮತ್ತು ಆಡಳಿತದ ಬಗ್ಗೆ ತಮ್ಮ ತೀರ್ಮಾನವನ್ನು ಚುನಾವಣೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಈ ಫಲಿತಾಂಶ ಅದಕ್ಕೆ ಸಾಕ್ಷಿಯಾಗಿದೆ. ವಿರೋಧ ಪಕ್ಷವಾಗಿ ಜನರ ಸಮಸ್ಯೆಗಳ ಪರವಾಗಿ ಹೋರಾಟ ಮುಂದುವರಿಸಲಾಗುವುದು ಎಂದು ಹೇಳಿದರು.

### ನೀರು ತುಂಬಿಸುವ ಘೋಷಣೆ ಏನಾಯಿತು?

ಕೆರೆಗಳಿಗೆ ನೀರು ಹರಿಸುವ ವಿಚಾರದಲ್ಲಿ ರೈತ ಸಂಘಟನೆಗಳು ಹಲವು ಬಾರಿ ಪ್ರತಿಭಟನೆ ನಡೆಸಿವೆ. ವಿರೋಧ ಪಕ್ಷದ ಮುಖಂಡರೂ ಪಾದಯಾತ್ರೆ ನಡೆಸಿದ್ದಾರೆ. ಆದರೂ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ನಿರಂಜನಕುಮಾರ್ ಆರೋಪಿಸಿದರು. "ಮೋಟಾರ್ ದುರಸ್ತಿಗೆ ಮೂರು ವರ್ಷ ಬೇಕೇ? 110 ಕೆರೆಗಳಿಗೆ ನೀರು ತುಂಬಿಸುವುದಾಗಿ ಘೋಷಣೆ ಮಾಡಲಾಗಿತ್ತು. ಆದರೆ ಘೋಷಣೆಗೆ ತಕ್ಕಂತೆ ಪರಿಣಾಮಕಾರಿ ಕ್ರಮಗಳು ಮಾತ್ರ ಕಾಣುತ್ತಿಲ್ಲ" ಎಂದು ಅವರು ಪ್ರಶ್ನಿಸಿದರು. ಕ್ಷೇತ್ರದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದರೂ ಅವುಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಹಾಗೂ ಸ್ಥಳೀಯ ಆಡಳಿತ ವಿಫಲವಾಗಿದೆ ಎಂದು ಆರೋಪಿಸಿದ ಅವರು, ಕಾಂಗ್ರೆಸ್ ಸರ್ಕಾರ ರೈತರ ಹಾಗೂ ಜನಸಾಮಾನ್ಯರ ಪರವಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಟೀಕಿಸಿದರು.

## ಚಿಂತಾಮಣಿ ನಿಧನ

ಚಾಮರಾಜನಗರ ಜೆಎಸ್‌ಎಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರು, ಆರ್ಥಿಕ ಚಿಂತಕರು ಅಂಕಣಕಾರರು ಆದ ಪ್ರೋ. ಆರ್. ಎಂ .ಚಿಂತಾಮಣಿ (82) ಶುಕ್ರವಾರ ನಿಧನ ಹೊಂದಿದರು. ಅವರು ಕೆಲ ದಿನಗಳಿಂದ ಅಸ್ವಸ್ಥರಾಗಿದ್ದು, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಂಜೆ 4–30 ರಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಇದ್ದಾರೆ



## ಸಚಿವ ಸಿ.ಪುಟ್ಟರಂಗಶೆಟ್ಟಿ ಅವರ ಇಚ್ಛಾಶಕ್ತಿ ಏನಾಯ್ತು?

ಚಾಮರಾಜನಗರ: ಜಿಲ್ಲಾ ಕೇಂದ್ರದ ಅಭಿವೃದ್ಧಿಯಲ್ಲಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರ ಇಚ್ಛಾಶಕ್ತಿ ಮತ್ತು ಕಾಳಜಿ ಏನಾಯ್ತು? ಎಂದು ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಎನ್.ನಾಗಯ್ಯ ಅವರು ಟೀಕಿಸಿದ್ದಾರೆ.



ಹನೂರು ತಾಲೂಕು ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ ನೂತನ ಬಸ್ ಘಟಕ ನಿರ್ಮಾಣಕ್ಕೆ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರು ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದ್ದರು. ಈ ಸಂಬಂಧ ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಬಿಎಸ್ಪಿ ನಾಗಯ್ಯ ಅವರು, ಸಚಿವರ ಇಚ್ಛಾಶಕ್ತಿ ಮತ್ತು ಕಾಳಜಿಯನ್ನು ಪ್ರಶ್ನೆ ಮಾಡಿದ್ದಾರೆ. ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ ನೂತನ ಬಸ್ ನಿಲ್ದಾಣ ಹಾಗೂ ಹನೂರು ತಾಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ ನೂತನ ಬಸ್ ಘಟಕ ನಿರ್ಮಾಣಕ್ಕೆ ಅಂದೇ ಬಾರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಅವರ ಇಚ್ಛಾಶಕ್ತಿ ಮತ್ತು ಕಾಳಜಿಯಿಂದ ಹನೂರಿನಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಘಟಕ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿತು. ಆದರೆ ಸಚಿವ ಪುಟ್ಟರಂಗಶೆಟ್ಟಿ ಅವರಿಗೆ ಈ ಇಚ್ಛಾಶಕ್ತಿ ಮತ್ತು ಕಾಳಜಿ ಇಲ್ಲವಾಯಿತೇ ಎಂದು ಟೀಕಿಸಿದ್ದಾರೆ.

## ನಾರಾಯಣ ಅಭಿನಂದಿಸಿದ ಪೌರಕಾರ್ಮಿಕರು

**ಮೈಸೂರು:** ಪೌರಕಾರ್ಮಿಕರ ವಿಶೇಷ ನೇಮಕಾತಿಯಡಿ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 477 ಒಳಚರಂಡಿ ಸಹಾಯಕರನ್ನು ಸರ್ಕಾರ ಕಾಯಂ ಮಾಡಿದ್ದು, ಈ ನೇಮಕಾತಿಗೆ ಹೋರಾಟ ನಡೆಸಿದ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷ ಮಾಜಿ ಮೇಯರ್ ನಾರಾಯಣರನ್ನು ಸನ್ಮಾನಿಸಿ ಅಭಿನಂದಿಸಿದರು.

ಶನಿವಾರ ಬೆಳಗ್ಗೆ ಪುರಭವನದಲ್ಲಿ ಜಮಾಯಿಸಿದ ನೂರಾರು ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಸಹಾಯಕರು ನಾರಾಯಣ ಅವರಿಗೆ ಬೃಹತ್ ಹಾರ ಹಾಕಿ, ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ನಾರಾಯಣ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಹೋರಾಟ ನಡೆಸಿ ಒಳಚರಂಡಿ ಸಹಾಯಕರನ್ನು ನೇರ ನೇಮಕಾತಿ ಮೂಲಕ ಕಾಯಂ ಮಾಡಲು ಹೋರಾಟ ನಡೆಸಿದ್ದೇನೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವರಾದ ಭೈರತಿ ಸುರೇಶ್ ಮತ್ತು ಡಾ.ಯತೀಂದ್ರ



ಸಿದ್ದರಾಮಯ್ಯ ಅವರು ಕಾಯಮಾತಿಗೆ ಪ್ರಮುಖ ಕಾರಣಕರ್ತರು, ಅಂದಿನ ಹಣಕಾಸು ಕಾರ್ಯದರ್ಶಿ ಎಲ್.ಕೆ.ಅತೀಖ್ ಅವರು ಸಹ ನಮಗೆ ಸ್ಪಂದಿಸಿ ಕಾಯಮಾತಿಗೆ ಸಹಕಾರ ನೀಡಿದ್ದಾರೆ. ಅವರನ್ನು ಸೂಕ್ತ ಸಂದರ್ಭದಲ್ಲಿ ಸನ್ಮಾನಿಸಿ ಕೃತಜ್ಞತೆ ಸಲ್ಲಿಸಲಾಗುವುದು ಎಂದರು.

ಸಂಘಟನೆಯ ಪದಾಧಿಕಾರಿಗಳಾದ ಆರ್.ಶಿವ, ಯತಿರಾಜ್, ಪಳನಿ, ಶಂಕರ, ಲೋಕೇಶ್, ರಾಜೀವ, ಲಕ್ಷ್ಮಣ್, ರಾಜು ಆರ್., ಸೋಮ ಕೆ., ಮಾದೇವ ಆರ್.ಎನ್., ಕರ್ಪಸ್ವಾಮಿ, ಹನುಮೇಶ್, ಕಿಶೋರ್, ಕುಮಾರಸ್ವಾಮಿ, ಗಣೇಶ್, ಆರ್ಟಿಸ್ಟ್ ನಾಗರಾಜು ಇತರರು ಇದ್ದರು.

**101 ಜೋಡಿ ದಂಪತಿಗಳು ಪೂಜಾ ವ್ರತದಾರಿಗಳಾಗಿ ಭಾಗಿ**

# ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ

ಮೈಸೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ವತಿಯಿಂದ ಶ್ರೀರಾಂಪುರದ ಟಿ.ಎಸ್.ಕನ್ವೆನ್ಷನ್ ಹಾಲ್‌ನಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಕಾರ್ಯಕ್ರಮ ನಡೆಯಿತು.

ಪೂಜಾ ಕಾರ್ಯಕ್ರಮದಲ್ಲಿ 101 ಜೋಡಿ ದಂಪತಿಗಳು ಪೂಜಾ ವ್ರತದಾರಿಗಳಾಗಿ ಭಾಗವಹಿಸಿದರು. ಧಾರ್ಮಿಕ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟನೆ ಮಾಡಿ ಮಾತನಾಡಿ, ಜನರು ಅರ್ಥಿಕವಾಗಿ ಸಬಲರಾಗುವುದರ ಜೊತೆಗೆ ಧಾರ್ಮಿಕವಾಗಿ ಅಚಾರ, ವಿಚಾರ, ಸಂಸ್ಕೃತಿ ಸಂಸ್ಕಾರ ಜೀವನದಲ್ಲಿ ರೂಢಿಸಿಕೊಳ್ಳಬೇಕು, ಮಕ್ಕಳಿಗೆ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವನ್ನು ಬೆಳೆಸಬೇಕು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಸ್ವ–ಸಹಾಯ ಸಂಘಗಳ ಮೂಲಕ ರಾಜ್ಯದಾದ್ಯಂತ ಜನರನ್ನು ಸಾಮಾಜಿಕವಾಗಿ, ಅರ್ಥಿಕವಾಗಿ, ಧಾರ್ಮಿಕವಾಗಿ ಸಮಜದ



ಮುಖ್ಯ ವಾಹಿನಿಗೆ ತರುವ ಕೆಲಸ ಮಾಡುತ್ತಿದ್ದಾರೆ, ಜನರು ಈ ಸಂಸ್ಥೆಯ ಪ್ರಯೋಜನ ಪಡೆದುಕೊಂಡು ತಮ್ಮ ಅಭಿವೃದ್ಧಿ ಕಾಣಬೇಕು ಹಾಗೂ ಪೂರ್ವಜರು ಮಾಡಿದ ಜಮೀನು ಉಳಿಸಿಕೊಂಡು ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡರೆ ಜನರ ಜೀವನ ಸಮೃದ್ಧವಾಗಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಡಾ.ಡಿ.ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಜನರ ಸ್ವಾವಲಂಬನೆಗಾಗಿ ಅರ್ಥಿಕ ನೆರವು ನೀಡುತ್ತಿದೆ. ಕೆರೆ ಹೊಳೆತ್ತುವ ಕಾರ್ಯ, ಹಾಲು ಉತ್ಪಾದಕರ ಸಹಾಕರ ಸಂಘದ ನಿರ್ಮಾಣಕ್ಕೆ ಅನುದಾನ, ಮದ್ಯವರ್ಜನ ಶಿಬಿರ, ಅಸಹಾಯಕರಿಗೆ ಮಾಶಾಸನ, ವಾತ್ಸಲ್ಯ ಮನೆ ನಿರ್ಮಾಣ ಮುತಾಂದ ಸಮಾಜಮುಖಿ ಕಾರ್ಯಗಳ ಮೂಲಕ ನೇರವಾಗುವ ಕೆಲಸ ಸಂಸ್ಥೆ ಮಾಡುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಬಿ.ವಿ ಇಳೈ ಆಳ್ವರ್ ಶ್ರೀ ವಂಗೀಪುರ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ, ಸಾಮಾಜಿಕ ಕಾರ್ಯಕರ್ತ ವಿಕಾಸ್ ಶಾಸ್ತ್ರಿ, ಗ್ರಾ.ಪಂ. ಮಾಜಿ ಸದಸ್ಯ ಸುಂದರಪ್ಪ, ಟಿ.ಎಸ್.ಕನ್ವೆನ್ಷನ್ ಹಾಲ್ ಮಾಲೀಕ ಸುರೇಶ್, ಅಕ್ವಾಸಿರಿ ಡ್ರಿಂಕಿಂಗ್ ವಾಟರ್ ಮಾಲೀಕ ಮಲ್ಲೇಶ್, ಯೋಜನಾಧಿಕಾರಿ ಪ್ರವೀಣ, ಜಯಂತ್, ವಲಯ ಮೇಲ್ವಿಚಾರಕಿ ಅಮಿತ ಇತರರು ಪಾಲ್ಗೊಂಡಿದ್ದರು.

"ಸಿದ್ದರಾಮಯ್ಯ-ಡಿಕೆಶಿ ಮುಂದೆ ನಿಮ್ಮ ಆಟ ನಡೆಯಲ್ಲ" | ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಸಚಿವರ ವಾಗ್ದಾಳಿ

# ಮಂಡ್ಯಕ್ಕೆ ಕೃಷಿ ವಿವಿ ತರಲು ಕಣ್ಣೀರಲ್ಲ ರಕ್ತ ಸುರಿಸಿದ್ದೇನೆ: ಸಚಿವ ಚಲುವರಾಸ್ವಾಮಿ



**ಮಂಡ್ಯ:** ಮಂಡ್ಯಕ್ಕೆ ಒಂದು ಕೃಷಿ ವಿವಿ ತರಲು 20 ವರ್ಷ ಅಧಿಕಾರದಲ್ಲಿದ್ದರೂ ನಿಮ್ಮಿಂದ ಆಗಲಿಲ್ಲ. "ನನ್ನದು ಮಂಡ್ಯ" ಎಂದು ಹೇಳಿಕೊಳ್ಳಲು ನಾಚಿಕೆ ಆಗಲ್ಲವೇ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಮಂಡ್ಯ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಮಂಡ್ಯ ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್ ನೇತೃತ್ವದಲ್ಲಿ ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ನೂತನ ಸಚಿವರಾದ ಎನ್. ಚಲುವರಾಯಸ್ವಾಮಿ ಮತ್ತು ಪಿ.ಎಂ. ನರೇಂದ್ರಸ್ವಾಮಿ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**"ಕೃಷಿ ವಿವಿಗಾಗಿ ರಕ್ತ ಸುರಿಸಿದ್ದೇವೆ":** ಮಂಡ್ಯಕ್ಕೆ ಕೃಷಿ ವಿಶ್ವವಿದ್ಯಾಲಯ ತರಲು ನಾವು ಕಣ್ಣೀರಲ್ಲ, ರಕ್ತ ಸುರಿಸಿದ್ದೇವೆ. 100 ಕೋಟಿ ರೂ. ಕಾಮಗಾರಿಗೆ ಈಗಾಗಲೇ ಹಣ ಮಂಜೂರಾಗಿದೆ. ಮಂಡ್ಯದ ಅಭಿವೃದ್ಧಿ ನೋಡಿ ವಿರೋಧ ಪಕ್ಷದವರಿಗೆ ಹೊಟ್ಟೆಉರಿಯಾಗುತ್ತಿದೆ ಎಂದು ಹೇಳಿದರು.

**"ಮೈಶುಗರ್ ಉಳಿಸಿದ ಕೀರ್ತಿ ಕಾಂಗ್ರೆಸ್‌ಗೆ":** 1999 ರಲ್ಲಿ ಜೆಡಿಎಸ್ ಸೋತಾಗ ನಾಗಮಂಗಲದಿಂದ ನಾನು ಗೆದ್ದಿದ್ದೆ. ಮೈಶುಗರ್ ಕಾರ್ಖಾನೆಯನ್ನು ನಾನೇ ಪ್ರಾರಂಭ ಮಾಡಿದೆ. 2019 ರಲ್ಲಿ ಕಾರ್ಖಾನೆ ಮುಚ್ಚಿದಾಗ ಹೋರಾಟ ಮಾಡಿ ಉಳಿಸಿದೆವು. 20 ವರ್ಷಗಳ ನಂತರ ಈ ಬಾರಿ ಕಾರ್ಖಾನೆಯಲ್ಲಿ 8.75% ಇಳುವರಿ ಬಂದಿದೆ. ಖಾಸಗೀಕರಣ ಮಾಡದೆ ನಮ್ಮ ಸರ್ಕಾರವೇ ಕಾರ್ಖಾನೆ ಉಳಿಸಿಕೊಂಡಿದೆ. ನಾನು ನಿಮ್ಮ ಜೊತೆಯಲ್ಲಿಲ್ಲದಿದ್ದಾಗ ನೀವು ಏನು ಅಭಿವೃದ್ಧಿ ಮಾಡಿದ್ದೀರಿ ಎಂದು ಪ್ರಶ್ನಿಸಿದರು.

**"ಕಾವೇರಿ ಮತ್ತು ಮೇಕೆದಾಟು ವಿಚಾರ":** ಕಾವೇರಿ ನೀರನ್ನು ತಮಿಳುನಾಡಿಗೆ ಕೊಡುತ್ತಿದ್ದಾರೆ. ನಮ್ಮ ಕರ್ನಾಟಕದ ಸಂಸದರು ಏನು ಮಾಡುತ್ತಿದ್ದಾರೆ? ಮೊದಲು ಕುಡಿಯುವ ನೀರು ಮತ್ತು ರೈತರಿಗೆ, ಆಮೇಲೆ ತಮಿಳುನಾಡಿಗೆ ಎಂದು ನಮ್ಮ ನಿಲುವು ಸ್ಪಷ್ಟವಾಗಿದೆ. "5 ನಿಮಿಷದಲ್ಲಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸ್ತೇನೆ " ಎಂದು ಹೇಳಿದವರು ಈಗ ಎಲ್ಲಿದ್ದಾರೆ? ಪಕ್ಕದ ರಾಜ್ಯದ ಅನುಮತಿ ಅವಶ್ಯಕತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದರೂ ತೀರ್ಮಾನ ತೆಗೆದುಕೊಳ್ಳಲಿಲ್ಲ ಎಂದು ಟೀಕಿಸಿದರು.

**"ಬಿಜೆಪಿ–ಜೆಡಿಎಸ್‌ಗೆ ತಿರುಗೇಟು":** ಬಿಜೆಪಿಯವರೇ ಯತ್ನಾಳ್ ಅವರನ್ನು ಸಮಾಧಾನ ಮಾಡಿಕೊಳ್ಳಿ. ಕುಮಾರ್ ಬಂಗಾರಪ್ಪ ಅವರನ್ನು ಸರಿ ಮಾಡಿಕೊಳ್ಳಿ. ನಿಮ್ಮದನ್ನು ನೀವು ನೋಡಿಕೊಳ್ಳಿ. ನಮ್ಮತ್ರ ಬರಬೇಡಿ. ನಾವು ಗ್ಯಾರಂಟಿ ಯೋಜನೆಗಳ ಮೂಲಕ ಜನರ ಪರ ಇದ್ದೇವೆ. ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಮುಂದೆ ನಿಮ್ಮ ಆಟ ನಡೆಯುವುದಿಲ್ಲ ಎಂದು ತಿರುಗೇಟು ನೀಡಿದರು.

**"ನೀವು ಕೊಟ್ಟ ಭಿಕ್ಷೆಯಿಂದ ಈ ಸ್ಥಾನ":** ಮಂಡ್ಯ ಕಾಂಗ್ರೆಸ್‌ನ ಭದ್ರಕೋಟೆ. ನನಗೆ ಸಿಕ್ಕಿರುವ ಈ ಸಚಿವ ಸ್ಥಾನ ಕಾರ್ಯಕರ್ತರ ಭಿಕ್ಷೆ. ನಿಮ್ಮ ಋಣವನ್ನು ತೀರಿಸಲು ಸಾಧ್ಯವಿಲ್ಲ. 2028ಕ್ಕೆ ಮಂಡ್ಯವನ್ನು ಇನ್ನಷ್ಟು ಬಲಪಡಿಸುತ್ತೇವೆ. ವಿರೋಧಿಗಳು ಎದುರಿಗೆ ಬಂದು ಮಾತನಾಡಲಿ, ಉತ್ತರ ಕೊಡುತ್ತೇನೆ ಎಂದು ಸವಾಲು ಹಾಕಿದರು.

ಕೆಪಿಎಸ್‌ಸಿ ಚೇರ್ಮನ್ ಹುದ್ದೆಯನ್ನು ಯಡಿಯೂರಪ್ಪ ಮಾಡಿದ್ದರು. ಅವರ ಸಂಬಂಧಿಯೇ ಹಗರಣ ಮಾಡಿದ್ದಾರೆ ಎಂದು ತೇಜಸ್ವಿ ಅವರ ಹೆಸರು ಪ್ರಸ್ತಾಪಿಸಿ, ರಾಜ್ಯಕ್ಕೆ ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತು ಅಪಾರ ಸಾರ್ವಜನಿಕರು ಭಾಗವಹಿಸಿದ್ದರು.

## ಬೆಟ್ಟದಲ್ಲಿ ಆಷಾಡ ಸಂಪನ್ನ: ಹರಿದು ಬಂದ ಭಕ್ತಸಾಗರ

### ಕೊನೆ ಆಷಾಡದಲ್ಲೂ ಹಲವು ಗಣ್ಯರ ಭೇಟಿ, ಭಕ್ತ ಸಾಗರ ನಿಯಂತ್ರಿಸಲು ಪೊಲೀಸರ ಹರಸಾಹ



**ಸಿಎಂ ಕುಟುಂಬದ ವಿಶೇಷ ಪೂಜೆ**

**ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪತ್ನಿ, ಪುತ್ರಿ ಹಾಗೂ ಮೊಮ್ಮಗಳು ಕುಟುಂಬ ಸಮೇತರಾಗಿ ಬೆಟ್ಟಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಗುವಿನ ಹೆಸರಿನಲ್ಲಿ ವಿಶೇಷ ಅರ್ಚನೆ ನಡೆಸಿದರು. ಯಾವುದೇ ಪೋಟೊ, ವಿಡಿಯೋ ತೆಗೆಯಲು ನಿರಾಕರಿಸಿದರು.**

**ಮೈಸೂರು:** ಕೊನೆಯ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ನಾಡ ಅಧಿದೇವತೆ ಚಾಮುಂಡಿ ತಾಯಿಗೆ ಮಹಾಲಕ್ಷ್ಮೀ ಅಲಂಕಾರ ಮಾಡಲಾಗಿದ್ದು ಬೆಳಗ್ಗೆಯಿಂದಲೇ ಗಣ್ಯರು ಸೇರಿ ಸಾಗರೋಪಾದಿಯಲ್ಲಿ ಭಕ್ತರು ನಾಡ ಅಧಿದೇವತೆಯ ದರ್ಶನ ಪಡೆಯಲು ಮುಂದಾಗುವ ಮೂಲಕ ಆಷಾಢ ಸಂಪನ್ನವಾಯಿತು.

ನಾಡ ಅಧಿದೇವತೆ ಚಾಮುಂಡಿ ತಾಯಿಯ ದರ್ಶನಕ್ಕೆ ಇಂದು ಕಡೆಯ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದಲೇ ಭಕ್ತ ಸಾಗರವೇ ಹರಿದು ಬರುತ್ತಿದ್ದು, ಇದರ ಜೊತೆಗೆ ಗಣ್ಯರು ಸಹ ತಾಯಿಯ ದರ್ಶನ ಪಡೆದುಕೊಂಡರು. ನಾಡ ಅಧಿದೇವತೆಗೆ ಇಂದು ಮಹಾಲಕ್ಷ್ಮೀ ಅಲಂಕಾರ ಹಾಗೇ, ದೇವಸ್ಥಾನದ ಒಳ ಭಾಗದಲ್ಲಿ ಹಾಗೂ ಗೋಪುರದ ಮುಂಭಾಗದಲ್ಲಿ ವಿವಿಧ ರೀತಿಯ ಹೂವು ಮತ್ತು ಹಣ್ಣುಗಳಿಂದ ವಿಶಿಷ್ಟವಾಗಿ ಅಲಂಕಾರ ಮಾಡಲಾಗಿದ್ದು, ಈ ಅಲಂಕಾರದ ಮಧ್ಯೆ ಸರತಿ ಸಾಲಿನಲ್ಲಿ ನಿಂತು ಜನಸಾಮಾನ್ಯರು ದೇವಿಯ ದರ್ಶನ ಪಡೆದುಕೊಂಡರು.

ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ ಮಾತನಾಡಿ, ಆಷಾಢ ಮಾಸದಲ್ಲಿ ಶಕ್ತಿ ದೇವತೆಯಾದ ಚಾಮುಂಡೇಶ್ವರಿ ದರ್ಶನ ಪಡೆದರೆ ಒಳಿತಾಗುತ್ತದೆ ಹಾಗೂ ಕಷ್ಟಗಳು ದೂರವಾಗುತ್ತವೆ ಎಂಬ ನಂಬಿಕೆಯಿಂದ ಈ ಮಾಸದಲ್ಲಿ ತಾಯಿಯ ದರ್ಶನ ಪಡೆಯಲು ಹೊರ ರಾಜ್ಯ ಹಾಗೂ ರಾಜ್ಯದಿಂದ ಲಕ್ಷಾಂತರ ಭಕ್ತರು ಬರುತ್ತಾರೆ ಎಂದರು.

ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಮಾತನಾಡಿ, ಬೆಳಗಿನ ಜಾವ 3 ಗಂಟೆಗೆ ಮೂಲ ಚಾಮುಂಡಿ ತಾಯಿಯ ಗರ್ಭಗುಡಿಯಲ್ಲಿ ಅರ್ಚನೆ, ಅಭಿಷೇಕ, ವಿಶೇಷ ಮಹಾಲಕ್ಷ್ಮೀ ಅಲಂಕಾರ ಹಾಗೂ ಮಹಾಮಂಗಳಾರತಿ ಮಾಡಿದ ನಂತರ ಉತ್ಸವ ಮೂರ್ತಿಗೆ ವಿಶೇಷ ರೇಷ್ಮೆ ಸೀರೆಯ ಅಲಂಕಾರವನ್ನು ಮಾಡಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗಿನ ಜಾವ 5 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ದರ್ಶನಕ್ಕೆ ವ್ಯವಸ್ಥೆ ಇರುತ್ತದೆ. ಈ ಸಂದರ್ಭದಲ್ಲಿ ಚಾಮುಂಡಿ ಬೆಟ್ಟದ ಮೆಟ್ಟಿಲುಗಳ ಮೂಲಕ ಭಕ್ತರು ಬೆಳಗಿನ ಜಾವವೇ ಆಗಮಿಸಿ ಪೂಜೆ ಸಲ್ಲಿಸುವುದು ವಿಶೇಷವಾಗಿದೆ" ಎಂದರು.

**ಗಣ್ಯರಿಂದ ದೇವಿ ದರ್ಶನ:** ನಾಡ ಅಧಿದೇವತೆ ಚಾಮುಂಡಿ ತಾಯಿಯ ದರ್ಶನಕ್ಕೆ ಕಡೆ ಆಷಾಢ ಶುಕ್ರವಾರ ಕೇಂದ್ರ ಸಚಿವೆಯಾದ ಶೋಭಾ ಕರಂದ್ಲಾಜೆ ಆಗಮಿಸಿ ಪೂಜೆ ಸಲ್ಲಿಸುತ್ತಾರೆ. ಕಳೆದ 15 ವರ್ಷಗಳಿಂದಲೂ ಆಷಾಢ ಮಾಸ ಹಾಗೂ ನವರಾತ್ರಿಯ ಸಂದರ್ಭದಲ್ಲಿ ದೇವಿಯ ದರ್ಶನವನ್ನು ತಪ್ಪದೇ ಪಡೆಯುತ್ತಿರುವುದು ವಿಶೇಷ. ಮತ್ತೊಂದು ಕಡೆ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಶಾಸಕರಾದ ಹೆಚ್.ಡಿ. ರೇವಣ್ಣ ದಂಪತಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರಸ್ವಾಮಿ, ಮಾಜಿ ಸಂಸದ ಪ್ರತಾಪಸಿಂಹ ಸೇರಿ ಅನೇಕರು ಕಡೆಯ ಆಷಾಢ ಶುಕ್ರವಾರ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದರು.

# "2028ಕ್ಕೆ ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಲು ಪಣ : ನರೇಂದ್ರಸ್ವಾಮಿ

### "ನಾವು ನೆಪಮಾತ್ರಕ್ಕೆ ಮಂತ್ರಿಗಳು, ನಾವು ನಿಮ್ಮಂತೆ ಕಾರ್ಯಕರ್ತರು" ಸಚಿವ ಪಿ.ಎಂ. ನರೇಂದ್ರಸ್ವಾಮಿ

**ಮಂಡ್ಯ:** 2028ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಮತ್ತು 2029ರಲ್ಲಿ ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನ ಮಂತ್ರಿ ಮಾಡಲು ಎಲ್ಲರೂ ಪಣ ತೊಡಬೇಕು ಎಂದು ನೂತನ ಸಚಿವ ಪಿ.ಎಂ. ನರೇಂದ್ರಸ್ವಾಮಿ ಕರೆ ನೀಡಿದರು.

ಮಂಡ್ಯ ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್ ನೇತೃತ್ವದಲ್ಲಿ ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ನೂತನ ಸಚಿವರಾದ ಎನ್. ಚಲುವರಾಯಸ್ವಾಮಿ ಮತ್ತು ಪಿ.ಎಂ. ನರೇಂದ್ರಸ್ವಾಮಿ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ನರೇಂದ್ರಸ್ವಾಮಿ ಯವರು ಮಾತನಾಡಿದರು.

**"ಸಂವಿಧಾನದಂತೆ ಬದುಕುವ ನಾವು":** ಕಾವೇರಿ ತಾಯಿಯ ವರದಲ್ಲಿ ಮಂಡ್ಯದ ಜನರು ಬದುಕುತ್ತಿದ್ದೇವೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಪ್ರಕಾರ ನಾವೆಲ್ಲರೂ ಬದುಕುತ್ತಿದ್ದೇವೆ. ನಾವು ಯಾರನ್ನು ಟೀಕೆ ಮಾಡುವುದಿಲ್ಲ. ಜನರ ಸೇವೆ ಮಾಡುವುದೇ ನಮ್ಮ ಕೆಲಸ ಎಂದು ಹೇಳಿದರು.

**"ನೆಪಮಾತ್ರಕ್ಕೆ ಮಂತ್ರಿಗಳು":** "ನಾವು ನೆಪಮಾತ್ರಕ್ಕೆ ಮಂತ್ರಿಗಳು. ನಿಮ್ಮಂತೆ ನಾವೂ ಕಾರ್ಯಕರ್ತರೇ. ಜಿಲ್ಲೆಯ ಅಭಿವೃದ್ಧಿ ಮಾಡುವುದೇ ನಮ್ಮ ಆದ್ಯತೆ. ವೀರವೇಷದ ಮಾತುಗಳ ಅವಶ್ಯಕತೆ ಇಲ್ಲ" ಎಂದು ಸ್ಪಷ್ಟಪಡಿಸಿದರು.

**"2028 ಮತ್ತು 2029ರ ಗುರಿ":** ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಒಳ್ಳೆಯ ಆಡಳಿತ ನಡೆಸಿದ್ದೇವೆ. ಇದೀಗ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿದ್ದೇವೆ. 2028ಕ್ಕೆ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ತರಲು ಮತ್ತು 2029ಕ್ಕೆ ರಾಹುಲ್ ಗಾಂಧಿ ಅವರನ್ನು ಪ್ರಧಾನ ಮಂತ್ರಿ ಮಾಡಲು ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

**"ರಾಜ್ಯದಲ್ಲಿ ಬರದ ಪರಿಸ್ಥಿತಿ":** ರಾಜ್ಯದಲ್ಲಿ ಬರದ ಪರಿಸ್ಥಿತಿ ಇದೆ. ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸರ್ಕಾರ ಬದ್ಧವಾಗಿದೆ. ಮಂಡ್ಯದಲ್ಲಿ ಅದ್ದೂರಿಯಾಗಿ ಸ್ವಾಗತಿಸಿದ್ದಕ್ಕಾಗಿ ಕಾರ್ಯಕರ್ತರ ಪ್ರೀತಿಗೆ ನಾನು ಚಿರಋಣಿಯಾಗಿದ್ದೇನೆ ಎಂದು ಭಾವುಕರಾದರು.

ಕಾರ್ಯಕ್ರಮದಲ್ಲಿ ಶಾಸಕ ರವಿಕುಮಾರ್ ಗಣಿಗ,ಕೆ ಉದಯ್ ಎಂಎಲ್ಸಿ ದಡವನಪುರ ಶಿವಣ್ಣ,ದಿನೇಶ್ ಗೂಳಿಗೌಡ,ಮಧು ಜಿ ಮಾದೇಗೌಡ ರವರು ಹಾಗೂ ಜಿಲ್ಲಾ ಕಾಂಗ್ರೆಸ್ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಅಪಾರ ಸಂಖ್ಯೆಯ ಕಾರ್ಯಕರ್ತರು ಉಪಸ್ಥಿತರಿದ್ದರು.



# ಮಂಡ್ಯ ಕಾಂಗ್ರೆಸ್‌ನ ಭದ್ರಕೋಟೆ, ಜನರ ಪ್ರೀತಿಯಿಂದಲೇ ಸಚಿವ ಸ್ಥಾನ": ಸಚಿವ ಎನ್. ಚಲುವರಾಯಸ್ವಾಮಿ

### "ವಿರೋಧಿಗಳ ಟೀಕೆಗೆ ಅಭಿವೃದ್ಧಿಯೇ ಉತ್ತರ - ಕಣ್ಣೀರಾಕುವ ಅವಶ್ಯಕತೆ ಇಲ್ಲ" -ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ



**ಮಂಡ್ಯ:** ಮಂಡ್ಯ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆ. ನನಗೆ ಮತ್ತೊಮ್ಮೆ ಸಚಿವ ಸ್ಥಾನ ಸಿಕ್ಕಿರುವುದು ಜನರ ಪ್ರೀತಿ ಮತ್ತು ಕಾರ್ಯಕರ್ತರ ಆಶೀರ್ವಾದದ ಫಲ ಎಂದು ನೂತನ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ನಗರದ ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ನೂತನ ಸಚಿವರಿಗೆ ಕಾಂಗ್ರೆಸ್ ಕಾರ್ಯಕರ್ತರು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

**"ನಿಮ್ಮ ಋಣ ತೀರಿಸಲು ಸಾಧ್ಯವಿಲ್ಲ":** "ನೀವು ನನಗೆ ಕೊಟ್ಟ ಭಿಕ್ಷೆಯಿಂದಲೇ ಇಂದು ನಾನು ಈ ಸ್ಥಾನದಲ್ಲಿ ಇದ್ದೇನೆ. ನಿಮ್ಮ ಪ್ರೀತಿ, ಬೆಂಬಲವೇ ನನ್ನ ಬಲ. ಮತ್ತೊಮ್ಮೆ ಸಚಿವರಾಗುವುದು ಅಷ್ಟು ಸುಲಭವಲ್ಲ. ನಿಮ್ಮ ಪ್ರೀತಿ ಇದ್ದರೆ ಮಾತ್ರ ಸಾಧ್ಯ" ಎಂದು ಭಾವುಕರಾಗಿ ಹೇಳಿದರು.

**"ಮಂಡ್ಯ ಅಂದರೆ ಇಂಡಿಯಾ":** ಮಂಡ್ಯವನ್ನು ಗಂಡು ಭೂಮಿ ಎಂದು ಕರೆಯುತ್ತಾರೆ. ಮಾದೇಗೌಡ, ಶಂಕರೇಗೌಡ, ಎಸ್.ಎಂ. ಕೃಷ್ಣ ಅವರಂತಹ ರಾಜಕಾರಣಿಗಳನ್ನು ನೀಡಿದ ಮಂಡ್ಯ ವೈಶಿಷ್ಟ್ಯಪೂರ್ಣ ಜಿಲ್ಲೆ. ಈ ಹಿಂದೆ ನಮ್ಮದೇ ಭದ್ರಕೋಟೆ ಎಂದು ಕೆಲವರು ಅಂದುಕೊಂಡಿದ್ದರು. ಆದರೆ ನಿಮ್ಮ ಪ್ರೀತಿಯಿಂದ ಮತ್ತೆ ಮಂಡ್ಯವನ್ನು ಕಾಂಗ್ರೆಸ್ ಭದ್ರಕೋಟೆಯಾಗಿ ಮಾಡಿದ್ದೀರಿ. ಜಿಲ್ಲೆಯ 6 ಕ್ಷೇತ್ರಗಳಲ್ಲಿ ಗೆದ್ದಿದ್ದೇವೆ. ಕೆ.ಆರ್.ಪೇಟೆಯನ್ನು ಕಳೆದುಕೊಂಡಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

**"2028ಕ್ಕೆ ಕಹಳೆ – ವಿರೋಧಿಗಳಿಗೆ ಟಾಂಗ್":** ಈ ಸ್ವಾಗತ 2028ರ ಚುನಾವಣೆಗೆ ಕಹಳೆ ಊದುವ ಪ್ರೀತಿಯ ಸಂಕೇತವಾಗಿದೆ. ವಿರೋಧ ಪಕ್ಷದವರು ಎದುರಿಗೆ ಬಂದು ಮಾತನಾಡಲಿ, ನಾನು ಉತ್ತರ ಕೊಡುತ್ತೇನೆ. ಟೀಕೆ–ಟಿಪ್ಪಣಿ ಬೇಡ, ಏನಾದರೂ ಕೆಲಸ ಮಾಡಿ. ನಮ್ಮ ಅಭಿವೃದ್ಧಿಯನ್ನು ನೋಡಿ ಅವರಿಗೆ ಹೊಟ್ಟೆಉರಿಯಾಗುತ್ತಿದೆ ಎಂದು ವಿರೋಧ ಪಕ್ಷದವರ ವಿರುದ್ಧ ವಾಗ್ದಾಳಿ ನಡೆಸಿದರು.

**"10,000 ಕೋಟಿ ಲೆಕ್ಕಕ್ಕೆ ಪ್ರಶ್ನೆ"**

"10,000 ಕೋಟಿ ಎಂದು ಪೇಪರ್ ಅಲ್ಲಾಡಿಸುವವರಿಗೆ ನಾನು ಲೆಕ್ಕ ಕೊಡುವ ಅವಶ್ಯಕತೆ ಇಲ್ಲ. ನಾನು ಜನರಿಗೆ ಗುಲಾಮ, ಅವರಿಗೆ ಗುಲಾಮನಲ್ಲ. 10 ಸಾವಿರ ಕೋಟಿ ಲೆಕ್ಕ ಕೊಡಿ ಎಂದು ಪತ್ರ ಬರೆದಿದ್ದಾರೆ. ಏನು ಲೆಕ್ಕ ಕೊಡುವುದು?" ಎಂದು ಪ್ರಶ್ನಿಸಿದರು.

**"ಸಿಎಂ ಡಿಕೆಶಿ ನೇತೃತ್ವದಲ್ಲಿ ಹೊಸ ಇತಿಹಾಸ"**

ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಅವರ ನೇತೃತ್ವದಲ್ಲಿ 2028ಕ್ಕೆ ಕಾಂಗ್ರೆಸ್ ಅನ್ನು ಮತ್ತಷ್ಟು ಬಲಪಡಿಸುತ್ತೇವೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಕಟಿಬದ್ಧನಾಗಿದ್ದೇನೆ. ಕದಲೂರು ಉದಯ್ ಅವರು ಉದ್ಯಮ ಬಿಟ್ಟು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

**"ಕಣ್ಣೀರಾಕುವ ಅವಶ್ಯಕತೆ ಇಲ್ಲ":** ಸೋಷಿಯಲ್ ಮೀಡಿಯಾದಲ್ಲಿ ಕಾಂಗ್ರೆಸ್ ಮುಗಿದುಹೋಯಿತು ಎಂದು ಬರೆಯುತ್ತಿದ್ದಾರೆ. ಅವರ ಟೀಕೆಗೆ ಗೌರವಯುತವಾಗಿ ಉತ್ತರ ಕೊಡಬೇಕು. ನಮ್ಮ ಕೆಲಸವೇ ಅವರ ಟೀಕೆಗೆ ಉತ್ತರವಾಗಲಿದೆ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ನೂತನ ಸಚಿವ ಪಿಎಂ ನರೇಂದ್ರಸ್ವಾಮಿ ಯವರು ಮಾತನಾಡಿದರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಸ್ಥಳೀಯ ಮುಖಂಡರು, ಅಪಾರ ಸಂಖ್ಯೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

## ಅಕ್ಕಮ್ಮ ನಿಧನ



ಕೆ.ಆರ್.ನಗರ: ತಾಲೂಕಿನ ಹರದನಹಳ್ಳಿ ಗ್ರಾಮದ ದಿ.ತಿಮ್ಮದಾಸಿ ಅಣ್ಣಯ್ಯ ಅವರ ಪತ್ನಿ ಅಕ್ಕಮ್ಮ (85) ಅವರು ಶನಿವಾರ ನಿಧನರಾಗಿದ್ದಾರೆ. ಮೃತರು ಐದು ಜನ ಪುತ್ರರು ಹಾಗೂ ನಾಲ್ಕು ಜನ ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಭಾನುವಾರ ಹರದನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

## ಶೈಕ್ಷಣಿಕ ಕುಂದು ಕೊರತೆ: ಮುಖ್ಯ ಶಿಕ್ಷಕರಿಗೆ ಸನ್ಮಾನ



**ಮಂಡ್ಯ:** ನಗರದ ಎಸ್.ಬಿ.ಸಮುದಾಯ ಭವನದಲ್ಲಿ ತಾಲೂಕು ದಕ್ಷಿಣ ವಲಯ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಕುಂದು ಕೊರತೆ ಸಭೆ ಹಾಗೂ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಶಾಸಕ ಗಣಿಗ ರವಿಕುಮಾರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರ ಎಲ್ಲಾ ಸಮಸ್ಯೆಗಳನ್ನು ಕೇಳಿ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂಬುವ ಭರವಸೆ ನೀಡಿದರು.

ನಂತರ ಶಿಕ್ಷಕರುಗಳು ತಮ್ಮ ಶಾಲೆಗಳ ಸಂಬಂಧಪಟ್ಟಂತೆ ಶೌಚಾಲಯಗಳ ವ್ಯವಸ್ಥೆ, ಕಾಂಪೌಂಡ್ ನಿರ್ಮಾಣದ ಬಗ್ಗೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಶಾಸಕರಲ್ಲಿ ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಮುಖ್ಯ ಶಿಕ್ಷಕರುಗಳನ್ನು ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಡಿಡಿಪಿ ಆದ ಯೋಗೇಶ್, ಬಿಇಒ ಮಹದೇವ, ನೌಕರರ ಸಂಘದ ಅಧ್ಯಕ್ಷರಾದ ನಾಗೇಶ್, ಪ್ರಧಾನ ಕಾರ್ಯದರ್ಶಿ ಚಿಕ್ಕೇಗೌಡ, ಪ್ರಾಥಮಿಕ ಶಾಲೆಯ ಸಂಘದ ಅಧ್ಯಕ್ಷರಾದ ನಂದೀಶ್, ಕಾರ್ಯದರ್ಶಿ ಕೆ.ಬಿ.ನಾಗರಾಜ್, ಜಿಲ್ಲಾ ಅಧ್ಯಕ್ಷ ಕೆ.ವೈ.ಮಂಜುನಾಥ್ ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

## ಮಂಡ್ಯದಲ್ಲಿ ಮುಂಗಾರು ಪರಿಸ್ಥಿತಿ, ಬೆಳೆ –ಕೆರೆಗಳ ಸ್ಥಿತಿಗತಿ ಅವಲೋಕನ




**ಮಂಡ್ಯ:** 2026?27ನೇ ಸಾಲಿನ ಮುಂಗಾರು ಹಂಗಾಮಿನ ಪರಿಸ್ಥಿತಿ, ಜಿಲ್ಲೆಯಲ್ಲಿನ ಬೆಳೆಗಳ ಸ್ಥಿತಿಗತಿ ಹಾಗೂ ಕೆರೆಗಳ ನೀರಿನ ಲಭ್ಯತೆ ಕುರಿತು ಮಾನ್ಯ ಸಚಿವರಾದ ಎನ್.ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಹಾಗೂ ಪಿ.ಎಂ. ನರೇಂದ್ರಸ್ವಾಮಿ ಅವರ ಉಪಸ್ಥಿತಿಯಲ್ಲಿ ಶನಿವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎನ್. ಚೆಲುವರಾಯಸ್ವಾಮಿ ಜಿಲ್ಲೆಯಾದ್ಯಂತ ಮುಂಗಾರು ಮಳೆಯ ಪ್ರಮಾಣ, ಮಳೆ ಹಂಚಿಕೆ, ಬಿತ್ತನೆ ಪ್ರದೇಶ ಹಾಗೂ ವಿವಿಧ ಬೆಳೆಗಳ ಪ್ರಸ್ತುತ ಸ್ಥಿತಿಗತಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಮಳೆ ಕೊರತೆ ಸೇರಿದಂತೆ ಹವಾಮಾನ ವೈಪರೀತ್ಯಗಳಿಂದ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ಬೆಳೆಗಳ ಸ್ಥಿತಿಗತಿಯನ್ನು ಗ್ರಾಮ ಮಟ್ಟದಿಂದಲೇ ನಿರಂತರವಾಗಿ ಪರಿಶೀಲಿಸಿ, ಬೆಳೆ ಹಾನಿ ಅಥವಾ ಇತರೆ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣವೇ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಮುಂಗಾರು ಹಂಗಾಮಿನ ಸಂದರ್ಭದಲ್ಲಿ ರೈತರ ಹಿತದೃಷ್ಟಿಯಿಂದ ಕೃಷಿ, ಕಂದಾಯ ಸೇರಿದಂತೆ ಸಂಬಂಧಪಟ್ಟ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಮುಂದಿನ ದಿನಗಳಲ್ಲಿ ಮಳೆ ಕೊರತೆ ಮುಂದುವರಿದಲ್ಲಿ ಯಾವುದೇ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮವಹಿಸಬೇಕು. ಹಾಗೂ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳನ್ನು ಮುಂಚಿತವಾಗಿ ಗುರುತಿಸಿ, ಪರ್ಯಾಯ ನೀರಿನ ಮೂಲಗಳನ್ನು ಸಿದ್ಧಪಡಿಸಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಲಭ್ಯತೆಯನ್ನು ನಿರಂತರವಾಗಿ ಪರಿಶೀಲಿಸಿ, ಯಾವುದೇ ರೀತಿಯ ಸಮಸ್ಯೆ ಎದುರಾದಲ್ಲಿ ತಕ್ಷಣ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಸಚಿವರಾದ ಪಿ. ಎಂ. ನರೇಂದ್ರಸ್ವಾಮಿ ಅವರು ಮಳೆ ಕೊರತೆಯಿಂದಾಗಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಉಂಟಾಗಿರುವ ಹಿನ್ನೆಲೆಯಲ್ಲಿ, ಲಭ್ಯವಿರುವ ನೀರನ್ನು ಸಮರ್ಪಕವಾಗಿ ನಿರ್ವಹಿಸಿ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಸಚಿವರಾದ ಪಿ. ಎಂ. ನರೇಂದ್ರ ಸ್ವಾಮಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ ಕುಮಾರ ಅವರು ಪೂರ್ವ ಮುಂಗಾರು ಮಳೆ ಕೊರತೆಯಿಂದಾಗಿ 6,175 ಹೆಕ್ಟೇರ್ ಪ್ರದೇಶದಲ್ಲಿ ಶೇ.31.83ರಷ್ಟು ಮಾತ್ರ ಬಿತ್ತನೆಯಾಗಿದ್ದು, ಹೆಚ್ಚಿನ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಮುಂಗಾರು ಹಂಗಾಮಿನಲ್ಲಿಯೂ ಮಳೆಯ ಕೊರತೆ ಮುಂದುವರಿದಿದ್ದು, ಅಣೆಕಟ್ಟುಗಳಲ್ಲಿ ಸಾಕಷ್ಟು ನೀರು ಸಂಗ್ರಹವಾಗದ ಕಾರಣ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಉಂಟಾಗಿದೆ.

## ಇಪ್ಪತ್ತು ವಿಶ್ವದಾಖಲೆಗಳ ಪುಟ್ಟ ಸಾಧಕ



| ಡಾ.ಸತ್ಯಮೂರ್ತಿ ಗೂಗಿ, ಬೆಂಗಳೂರು.



ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಲಕ್ಕೂರು ಗ್ರಾಮದ ನಾಗರಾಜ ಎಂ. ಮತ್ತು ಶ್ವೇತ ಎ. ದಂಪತಿಗಳ ಪುತ್ರ ತಾನೀಶ್ ಕೇವಲ ಎಂಟು ವರ್ಷದಲ್ಲೇ ಅಸಾಧಾರಣ ಸಾಧನೆ ಮಾಡಿ ದೇಶದ ಗಮನ ಸೆಳೆದಿದ್ದಾನೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಣ್ಣ, ಕರೆನ್ಸಿ ನೋಟು ಮತ್ತು ವಿವಿಧ ಚಿತ್ರಗಳನ್ನು ಗುರುತಿಸುವ ಅಪೂರ್ವ ಇಂದ್ರಿಯಜ್ಞಾನ ಹಾಗೂ ಸ್ಮರಣಶಕ್ತಿಯಿಂದಾಗಿ ಈತ ಇಲ್ಲಿಯವರೆಗೆ ಇಪ್ಪತ್ತು ಬಾರಿ ವಿಶ್ವದಾಖಲೆಗೆ ಪಾತ್ರನಾಗಿದ್ದಾನೆ. ಗ್ರಾಮೀಣ ಹಿನ್ನೆಲೆಯಿಂದ ಬಂದ ಈ ಬಾಲಕನ ಸಾಧನೆ ಜಿಲ್ಲೆ ಮತ್ತು ರಾಜ್ಯಕ್ಕೆ ಹೆಮ್ಮೆ ತಂದಿದೆ.

ತಾನೀಶ್‌ನ ಪ್ರತಿಭೆ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಕರಾಟೆ, ತಬಲ, ಸಂಗೀತ, ಭರತನಾಟ್ಯ, ಸ್ಕೇಟಿಂಗ್, ಅಬಾಕಸ್, ಈಜು, ಒಲಂಪಿಯಾಡ್, ಕೀಬೋರ್ಡ್, ವಯಾಲಿನ್, ಗಿಟಾರ್, ಕ್ರಿಕೆಟ್ ಮತ್ತು ಭಗವದ್ಗೀತಾ ವಾಚನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅವರು ಪ್ರಾವೀಣ್ಯ ಸಾಧಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಶಿಸ್ತು, ಏಕಾಗ್ರತೆ ಮತ್ತು ಬಹುಮುಖ ಆಸಕ್ತಿಯ ಮೂಲಕ ಅವರು ಸಾಧಿಸಿದ ಈ ಸಾಧನೆಯು ಅಭ್ಯಾಸ ಮತ್ತು ಪೋಷಕರ ಪ್ರೋತ್ಸಾಹದ ಫಲವಾಗಿದೆ.

ಅವರ ಹೆಸರಿನಲ್ಲಿರುವ ದಾಖಲೆಗಳ ಪಟ್ಟಿಯೂ ಗಮನಾರ್ಹವಾಗಿದೆ. ಏಷಿಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ಇಂಡಿಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ಇಂಟರ್ನ್ಯಾಷನಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ಕರಾಟೆ ಮತ್ತು ಬೋಧಿ ವಿಶ್ವದಾಖಲೆಗಳ ಜೊತೆಗೆ ವೀಲ್ ಮೆಡಲ್ ಆಫ್ ಕಿಡ್ಸ್, ಇನ್ಫ್ಲುಯೆನ್ಸ್, ರಬಾ ಮತ್ತು ಕಿಂಗ್ಡಂ ವಿಶ್ವದಾಖಲೆಗಳೂ ಇದರಲ್ಲಿ ಸೇರಿವೆ. ಈ ಎಲ್ಲಾ ಸಾಧನೆಗಳು ತಾನೀಶ್‌ನ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

ಈ ಪುಟ್ಟ ಸಾಧಕನ ಯಶಸ್ಸು ಇಂದಿನ ಮಕ್ಕಳಿಗೆ ಪ್ರೇರಣೆಯಾಗಿದೆ. ವಯಸ್ಸು ಮತ್ತು ಸ್ಥಳ ಸಾಧನೆಗೆ ಅಡ್ಡಿಯಲ್ಲ ಎಂಬುದನ್ನು ತಾನೀಶ್ ತೋರಿಸಿಕೊಟ್ಟಿದ್ದಾನೆ. ಅವರ ಈ ಪ್ರಯತ್ನ ಮುಂದೆಯೂ ಮುಂದುವರೆದು ರಾಷ್ಟ್ರಕ್ಕೆ ಇನ್ನಷ್ಟು ಕೀರ್ತಿ ತರಲಿ ಎಂಬುದು ನಮ್ಮೆಲ್ಲರ ಹಾರೈಕೆ.

# ಬದುಕಿದ್ದಾಗ ಅಳಿಸುವ ಜನ, ಸತ್ತಾಗ ಅಳುತ್ತಿದ್ದರಂತೆ



ಶಿವಬಸಪ್ಪ ಗು ಜಂಗಾಲಿ



ಮನುಷ್ಯನ ಬದುಕಿನಲ್ಲಿ ಅತ್ಯಂತ ಕಹಿಯಾದ ಸತ್ಯವೆಂದರೆ, ಜೀವಂತವಾಗಿರುವಾಗ ಅವನ ಕಣ್ಣೀರಿನ ಬೆಲೆ ಅರಿಯದ ಅನೇಕರು, ಅವನು ಈ ಲೋಕವನ್ನು ತೊರೆದ ನಂತರ ಮಾತ್ರ ಅವನ ಮಹತ್ವವನ್ನು ಹೊಗಳಲು ಆರಂಭಿಸುತ್ತಾರೆ. ಬದುಕಿದ್ದಾಗ ಒಂದು ಸಾಂತ್ವನದ ಮಾತನ್ನೂ ಆಡದವರು, ಒಂದು ನಗು ಕೊಡುವುದಕ್ಕೂ ಹಿಂದೆ ಸರಿದವರು, ಅವನ ಹೃದಯದ ನೋವನ್ನು ಅರಿಯಲು ಸಮಯ ಮಾಡಿಕೊಳ್ಳದವರು, ಕೊನೆಯ ಪ್ರಯಾಣದ ವೇಳೆ ಕಣ್ಣೀರಿನ ಹೊಳೆಯನ್ನೇ ಹರಿಸುತ್ತಾರೆ. ಇದೇ ಬದುಕಿನ ದೊಡ್ಡ ವ್ಯಂಗ್ಯಚಿತ್ರಣ. ಈ ವ್ಯಂಗ್ಯ ಕೇವಲ ಒಂದು ವ್ಯಕ್ತಿಯ ಕಥೆಯಲ್ಲ; ಇದು ನಮ್ಮ ಸಮಾಜದ ಕನ್ನಡಿಯೂ ಹೌದು.

ಜೀವನವೆಂದರೆ ಉಸಿರಾಟ ಮಾತ್ರವಲ್ಲ. ಒಬ್ಬರ ಮನಸ್ಸಿಗೆ ಇನ್ನೊಬ್ಬರು ಆಸರೆಯಾಗುವುದು, ಅವರ ನೋವನ್ನು ಅರ್ಥಮಾಡಿಕೊಳ್ಳುವುದು, ಅವರ ಸಾಧನೆಯನ್ನು ಮೆಚ್ಚುವುದು, ತಪ್ಪುಗಳನ್ನು ಕ್ಷಮಿಸುವುದು, ಸಂಕಷ್ಟದಲ್ಲಿ ಕೈಹಿಡಿಯುವುದು ಇವೆಲ್ಲವೂ ಬದುಕಿನ ನಿಜವಾದ ಅರ್ಥಗಳು. ಆದರೆ ಇಂದಿನ ಯಾಂತ್ರಿಕ ಬದುಕಿನಲ್ಲಿ ಈ ಮೌಲ್ಯಗಳು ನಿಧಾನವಾಗಿ ಮರೆಯಾಗುತ್ತಿವೆ. ಸಮಯ ಇರುವಾಗ ಪ್ರೀತಿಯನ್ನು ವ್ಯಕ್ತಪಡಿಸಲು ಹಿಂಜರಿಯುವ ನಾವು, ಸಮಯ ಕೈಚೆಲ್ಲಿದ ನಂತರ ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತೇವೆ.

ಅನೇಕ ಮನೆಗಳಲ್ಲಿ ವೃದ್ಧ ತಂದೆ ತಾಯಿಗಳು ಏಕಾಂತದಲ್ಲಿ ದಿನಗಳನ್ನು ಕಳೆಯುತ್ತಾರೆ. ಅವರ ಮಾತುಗಳನ್ನು ಕೇಳಲು ಯಾರಿಗೂ ಸಮಯವಿರುವುದಿಲ್ಲ. ಅವರ ಅನುಭವಗಳು ಹಳೆಯ ಕಥೆಗಳಾಗಿ ಕಾಣುತ್ತವೆ. ಆದರೆ ಅವರು ಇಲ್ಲವಾದಾಗ ಮಾತ್ರ, ?ಅವರು ಇದ್ದಾಗ ಇನ್ನಷ್ಟು ಸಮಯ ಕೊಡಬೇಕಿತ್ತು? ಎಂಬ ಮಾತು ಕೇಳಿಬರುತ್ತದೆ. ಬದುಕಿದ್ದಾಗ ಒಂದು ಕ್ಷಣದ ಪ್ರೀತಿಯನ್ನು ನೀಡದವರು, ನಂತರ ಸಾವಿರ ಹೂವುಗಳನ್ನು ಅರ್ಪಿಸಿದರೂ ಆ ಪ್ರೀತಿ ಅವರಿಗೆ ತಲುಪುವುದಿಲ್ಲ.

ಸ್ನೇಹದಲ್ಲಿಯೂ ಇದೇ ಕಥೆ. ಸಂಕಷ್ಟದಲ್ಲಿ ಜೊತೆಗಿರಬೇಕಾದ ಸ್ನೇಹಿತರು ದೂರವಾಗುತ್ತಾರೆ. ಆದರೆ ಒಬ್ಬ ಸ್ನೇಹಿತ ಶಾಶ್ವತವಾಗಿ ದೂರವಾದ ನಂತರ ಅವನ ನೆನಪುಗಳನ್ನು ಹಂಚಿಕೊಳ್ಳಲು ಎಲ್ಲರೂ ಮುಂದೆ ಬರುತ್ತಾರೆ. ನೆನಪುಗಳಿಗಿಂತ, ಬದುಕಿದ್ದಾಗ ನೀಡಿದ ಬೆಂಬಲವೇ ನಿಜವಾದ ಸ್ನೇಹದ ಗುರುತು.

ಕೆಲಸ ಮಾಡುವ ಸ್ಥಳಗಳಲ್ಲಿಯೂ ಇದೇ ವಾಸ್ತವ. ಪ್ರಾಮಾಣಿಕವಾಗಿ ದುಡಿಯುವ ವ್ಯಕ್ತಿಯನ್ನು ಬದುಕಿದ್ದಾಗ ಪ್ರಶಂಸಿಸದೆ, ಅವನ ಪರಿಶ್ರಮವನ್ನು ಸಹಜವೆಂದು ಭಾವಿಸಲಾಗುತ್ತದೆ. ಆದರೆ ಅವನು ಇಲ್ಲದಾಗ ಮಾತ್ರ, ಅವನಂತಹ ವ್ಯಕ್ತಿ ಮತ್ತೊಬ್ಬ ಸಿಗಲಾರ? ಎಂದು ಹೇಳಲಾಗುತ್ತದೆ. ಬದುಕಿದ್ದಾಗ ಹೇಳಬೇಕಿದ್ದ ಮೆಚ್ಚುಗೆಯ ಮಾತು, ನಂತರದ ಹೊಗಳಿಕೆಯಾಗುತ್ತದೆ.

ಸಮಾಜವು ಕೆಲವೊಮ್ಮೆ ಮುಖವಾಡಗಳನ್ನು ಧರಿಸುತ್ತದೆ. ಬದುಕಿದ್ದಾಗ ಟೀಕಿಸಿದವರೇ, ಮರಣದ ನಂತರ ಗುಣಗಾನ ಮಾಡುತ್ತಾರೆ. ಬದುಕಿದ್ದಾಗ ಅವಮಾನಿಸಿದವರೇ, ನಂತರ ಗೌರವ ಭಾಷಣಗಳನ್ನು ಮಾಡುತ್ತಾರೆ. ಬದುಕಿದ್ದಾಗ ಒಂದು ಹನಿ ಕರುಣೆಯನ್ನೂ ತೋರದವರು, ನಂತರ ಕಣ್ಣೀರಿನ ಸಮುದ್ರವನ್ನೇ ತೋರಿಸುತ್ತಾರೆ. ಈ ವಿರೋಧಾಭಾಸವೇ ಮಾನವ ಬದುಕಿನ ಅತ್ಯಂತ ನೋವಿನ ಚಿತ್ರಣ.

ನಾವು ಮರಗಳನ್ನು ನೋಡಿ ಕಲಿಯಬೇಕು. ಮರವು ತನ್ನ ನೆರಳನ್ನು ಬದುಕಿರುವಾಗಲೇ ಕೊಡುತ್ತದೆ; ಹಣ್ಣುಗಳನ್ನು ಬದುಕಿರುವಾಗಲೇ ನೀಡುತ್ತದೆ. ನದಿಯು ತನ್ನ ನೀರನ್ನು ಹರಿಸುತ್ತಲೇ ಇರುತ್ತದೆ. ಸೂರ್ಯನು ಪ್ರತಿದಿನ ಬೆಳಕನ್ನು ನೀಡುತ್ತಾನೆ. ಪ್ರಕೃತಿಯ ಪ್ರತಿಯೊಂದು ಅಂಶವೂ ತನ್ನ ಉಪಯೋಗವನ್ನು ಸಮಯದಲ್ಲೇ ನೀಡುತ್ತದೆ. ಮನುಷ್ಯ ಮಾತ್ರ ತನ್ನ ಪ್ರೀತಿ, ಗೌರವ ಮತ್ತು ಮೆಚ್ಚುಗೆಯನ್ನು ತಡವಾಗಿ ವ್ಯಕ್ತಪಡಿಸುತ್ತಾನೆ.

ಒಂದು ನಗುವಿನ ಬೆಲೆ ದೊಡ್ಡದು. ಒಂದು ಧೈರ್ಯದ ಮಾತು, ಒಂದು ಮೆಚ್ಚುಗೆಯ ವಾಕ್ಯ, ಒಂದು ಕ್ಷಮೆಯ ಮನಸ್ಸು, ಒಂದು ಪ್ರೀತಿಯ ಸ್ಪರ್ಶ?ಇವು ಕೆಲವೊಮ್ಮೆ ಒಬ್ಬರ ಬದುಕನ್ನೇ ಬದಲಾಯಿಸಬಹುದು. ನಾವು ಇಂದು ಹೇಳಬಹುದಾದ ?ನೀನು ಚೆನ್ನಾಗಿದ್ದೀಯ?, ನಿನ್ನ ಮೇಲೆ ನನಗೆ ಹೆಮ್ಮೆ ಇದೆ?, ?ನಾನು ನಿನ್ನ ಜೊತೆ ಇದ್ದೇನೆ? ಎಂಬ ಮಾತುಗಳು ನಾಳೆ ಹೇಳಲಾಗದ ಮಾತುಗಳಾಗಬಹುದು.

ಸಮಯಕ್ಕಿಂತ ಅಮೂಲ್ಯವಾದ ಉಡುಗೊರೆ ಮತ್ತೊಂದಿಲ್ಲ. ಹಣ ಕಳೆದುಹೋದರೆ ಸಂಪಾದಿಸಬಹುದು, ಆಸ್ತಿ ಹೋದರೆ ಮತ್ತೆ ಪಡೆಯಬಹುದು. ಆದರೆ ಕಳೆದುಹೋದ ಸಮಯ ಮತ್ತು ಕಳೆದುಹೋದ ಮನುಷ್ಯರನ್ನು ಹಿಂದಿರುಗಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಪ್ರೀತಿಯನ್ನು ಮುಂದೂಡಬೇಡಿ. ಗೌರವವನ್ನು ಕಾಯಿಸಬೇಡಿ. ಕ್ಷಮೆಯನ್ನು ವಿಳಂಬ ಮಾಡಬೇಡಿ. ಬದುಕು ತುಂಬಾ ಚಿಕ್ಕದು. ಯಾರು ಯಾವಾಗ ನಮ್ಮಿಂದ ದೂರವಾಗುತ್ತಾರೆ ಎಂಬುದನ್ನು ಯಾರೂ ಊಹಿಸಲಾರರು. ಆದ್ದರಿಂದ ಬದುಕಿದ್ದಾಗಲೇ ಅವರನ್ನು ಅರ್ಥಮಾಡಿಕೊಳ್ಳಿ. ಅವರ ಸಂತೋಷದಲ್ಲಿ ಪಾಲ್ಗೊಳ್ಳಿ. ಅವರ ದುಃಖದಲ್ಲಿ ಭುಜವಾಗಿ ನಿಲ್ಲಿ. ಅವರ ಸಾಧನೆಯನ್ನು ಚಪ್ಪಾಳೆ ತಟ್ಟಿ ಅಭಿನಂದಿಸಿ. ಅವರ ತಪ್ಪುಗಳನ್ನು ತಿದ್ದಿ, ಆದರೆ ಅವರನ್ನು ತಿರಸ್ಕರಿಸಬೇಡಿ.

ಮಕ್ಕಳಿಗೆ ಪ್ರೀತಿ ಬೇಕು, ಯುವಕರಿಗೆ ಪ್ರೋತ್ಸಾಹ ಬೇಕು, ಹಿರಿಯರಿಗೆ ಗೌರವ ಬೇಕು. ಈ ಮೂರು ಮೌಲ್ಯಗಳನ್ನು ಬದುಕಿದ್ದಾಗಲೇ ನೀಡಿದರೆ ಸಮಾಜ ಹೆಚ್ಚು ಮಾನವೀಯವಾಗುತ್ತದೆ. ಇಲ್ಲವಾದರೆ ನಮ್ಮ ಕಣ್ಣೀರು ಕೇವಲ ಪಶ್ಚಾತ್ತಾಪದ ಸಾಕ್ಷಿಯಾಗಿಬಿಡುತ್ತದೆ.

ನಾವು ಯಾರನ್ನಾದರೂ ಕಳೆದುಕೊಂಡ ನಂತರ ಅವರ ಚಿತ್ರಕ್ಕೆ ಹೂಮಾಲೆ ಹಾಕುವುದಕ್ಕಿಂತ, ಅವರು ಬದುಕಿದ್ದಾಗ ಅವರ ಮುಖದಲ್ಲಿ ಒಂದು ನಗು ಮೂಡಿಸುವುದು ಸಾವಿರ ಪಟ್ಟು ಶ್ರೇಷ್ಠ. ಮರಣಾನಂತರದ ಗೌರವಕ್ಕಿಂತ, ಜೀವಂತವಾಗಿರುವಾಗ ನೀಡುವ ಪ್ರೀತಿಯೇ ನಿಜವಾದ ಗೌರವ. ಸ್ಮಾರಕಗಳಿಗಿಂತ, ಸ್ಮರಣೀಯ ಕ್ಷಣಗಳನ್ನು ಬದುಕಿದ್ದಾಗಲೇ ನಿರ್ಮಿಸುವುದು ದೊಡ್ಡ ಸಾಧನೆ. ಜೀವನದ ನಿಜವಾದ ಮಾನವೀಯತೆ ಅಂತಿಮ ಯಾತ್ರೆಯಲ್ಲಿ ಕಣ್ಣೀರು ಸುರಿಸುವುದಲ್ಲ; ಬದುಕಿನ ಯಾತ್ರೆಯಲ್ಲಿ ಕೈಹಿಡಿದು ನಡೆಯುವುದಾಗಿದೆ. ನಿಜವಾದ ಪ್ರೀತಿ ಶವಪೆಟ್ಟಿಗೆಯ ಮುಂದೆ ಕಾಣಿಸಿಕೊಳ್ಳುವುದಲ್ಲ; ಕಷ್ಟದ ದಿನಗಳಲ್ಲಿ ಜೊತೆಯಾಗಿರುವುದಾಗಿದೆ. ನಿಜವಾದ ಗೌರವ ಶ್ರದ್ಧಾಂಜಲಿ ಭಾಷಣಗಳಲ್ಲಿ ಅಲ್ಲ; ಬದುಕಿದ್ದಾಗ ವ್ಯಕ್ತಿಯನ್ನು ಗೌರವದಿಂದ ಕಾಣುವುದರಲ್ಲಿ ಇದೆ.

ಆದ್ದರಿಂದ ನಮ್ಮ ಬದುಕಿನ ದಿಕ್ಕನ್ನು ಬದಲಿಸೋಣ. ಯಾರನ್ನಾದರೂ ಮೆಚ್ಚಬೇಕಾದರೆ ಇಂದೇ ಮೆಚ್ಚೋಣ. ಕ್ಷಮೆ ಕೇಳಬೇಕಾದರೆ ಇಂದೇ ಕೇಳೋಣ. ಪ್ರೀತಿಯನ್ನು ಹೇಳಬೇಕಾದರೆ ಇಂದೇ ಹೇಳೋಣ. ಏಕೆಂದರೆ ನಾಳೆ ನಮ್ಮ ಕೈಯಲ್ಲಿಲ್ಲ. ಉಳಿಯುವುದು ನಮ್ಮ ಮಾತುಗಳು, ನಮ್ಮ ಕರುಣೆ ಮತ್ತು ನಮ್ಮ ಮಾನವೀಯತೆ ಮಾತ್ರ.

ಬದುಕಿದ್ದಾಗ ಅಳಿಸುತ್ತಿದ್ದ ಜನ, ಸತ್ತಾಗ ಅಳುತ್ತಿದ್ದರಂತೆ; ಬದುಕಿನ ದೊಡ್ಡ ವ್ಯಂಗ್ಯಚಿತ್ರಣ ಇದೇ. ಆದರೆ ಈ ವ್ಯಂಗ್ಯವನ್ನು ಬದಲಿಸುವ ಶಕ್ತಿ ನಮ್ಮಲ್ಲೇ ಇದೆ. ಬದುಕಿರುವವರನ್ನು ಬದುಕಿರುವಾಗಲೇ ಪ್ರೀತಿಸೋಣ, ಗೌರವಿಸೋಣ, ಕಾಪಾಡೋಣ. ಆಗ ಕಣ್ಣೀರು ಪಶ್ಚಾತ್ತಾಪದದ್ದಾಗದೆ, ಕೃತಜ್ಞತೆಯದ್ದಾಗಿರುತ್ತದೆ. ಅದೇ ಮಾನವೀಯತೆಯ ನಿಜವಾದ ಜಯ, ಅದೇ ಬದುಕಿನ ಸಾರ್ಥಕತೆ.

# ಪುರುಷರಿಗೆ ಹೃದಯಾಘಾತ ಜಾಸ್ತಿ ಏಕೆ ?



ಸ್ನೇಹ ಲೋಕ

ಸ್ನೇಹಾ ಆನಂದ್



ಗಂಡಸರಿಗೆ ತಮ್ಮ ಮನದ ನೋವುಗಳನ್ನು ಹೇಳಿಕೊಳ್ಳಲು ಬರುವುದಿಲ್ಲ, ಹೆಣ್ಣುಮಕ್ಕಳು ಹೇಳುವ ಹಾಗೆ ಮನಸ್ಸಿನ ಭಾವನೆಯನ್ನು ಯಾರ ಮುಂದೆಯೂ ತೋರುವುದಿಲ್ಲ!

ಅವರು ತಮ್ಮ ಮನದ ಭಾವನೆಗಳನ್ನು ಮನದಲ್ಲೇ ಹೆಪ್ಪು ಹಾಕುತ್ತಾರೆ, ಅದರಿಂದಲೇ ಮನದ ವೇದನೆಗಳು ತೀರಾ ಹೆಪ್ಪುಗಟ್ಟಿ ಹೃದಯಾಘಾತ ಸಂಭವಿಸುತ್ತದೆ!

ಈ ವಿಷಯವನ್ನು ಎಷ್ಟೋ ಸಲ ಬರಿಯಲಿಕ್ಕೆ ಹೋಗಿ ವಿಷಯ ಮತ್ತೇ ಬೇರೆಡೆ ತಿರುಗುತಿತ್ತು!

ಗಂಡಸರು ತಮ್ಮ ಆತ್ಮೀಯರ ಜೊತೆಗೆ ತಮಗಾದ ಕಷ್ಟವನ್ನು ಹಂಚಿಕೊಳ್ಳುವುದು ಕಡಿಮೆ! ಸ್ವಂತ ಅಣ್ಣ ತಮ್ಮಂದಿರ ಮುಂದೆಯೂ ಹೇಳುವುದಿಲ್ಲ! ಆದರೆ ಹೆಣ್ಣು ಹಾಗಲ್ಲ ತನ್ನ ಆತ್ಮೀಯರ ಮುಂದೆ ತನ್ನ ನೋವನ್ನು ಹೇಳಿಕೊಳ್ಳುತ್ತಾಳೆ, ಅತ್ತು ಮನಸ್ಸು ಹಗುರ ಮಾಡಿಕೊಳ್ಳುತ್ತಾಳೆ, ಆಕೆಯ ಕಣ್ಣೀರಲ್ಲಿ ಎದೆಯಲ್ಲಿ ಹೆಪ್ಪುಗಟ್ಟಿದ ನೋವು ತನ್ನಿಂತಾನೆ ಕರಗಿ ಹೋಗುತ್ತದೆ, ಅದರಿಂದ ಗಂಡಸರಿಗಿಂತ ಹೆಣ್ಣುಮಕ್ಕಳಲ್ಲಿ ಹೃದಯಾಘಾತದ ಸಂಖ್ಯೆ ಅತ್ಯಂತ ಕಡಿಮೆ!

ಹೀಗಾಗಿ ದೇವರು ಹೆಣ್ಣಿಗೆ ಕಷ್ಟ ತಡೆದು ಕೊಳ್ಳುವ ಶಕ್ತಿ ಜಾಸ್ತಿ ಇದೆಯೆಂದು ತಿಳಿದು ಮಕ್ಕಳಿಗೆ ಜನ್ಮ ಕೊಡುವ ಜವಾಬ್ದಾರಿಯನ್ನು ಅವರಿಗೆ ಹೊರಿಸಿದ್ದಾನೆ, ಆದರೆ ಗಂಡಸರಿಗೆ ಅವರನ್ನು ಕಾಳಜಿ ವಹಿಸುವ ಕಾರ್ಯವನ್ನು ಕೊಟ್ಟಿದ್ದಾನೆ!

ಒಂದು ಪಕ್ಷಿಯನ್ನು ನೋಡಿ ಹೆಣ್ಣು ಪಕ್ಷಿ ಮೊಟ್ಟೆ ಇಟ್ಟು ಕಾವು ಕೊಡುವ ಸಮಯದಲ್ಲಿ ಗಂಡು ಪಕ್ಷಿ ಅದಕ್ಕೆ ಪ್ರೀತಿಯಿಂದ ಕಾಳು ತಿನ್ನಿಸುತ್ತದೆ! ನಂತರ ತುಂಬಾ ಕಾಳಜಿಯಿಂದ ಅವೆರಡೂ ಸೇರಿ ಪುಟ್ಟ ಮರಿಗಳನ್ನು ಕಾಪಾಡುತ್ತವೆ!

ಹೀಗಾಗಿ ಗಂಡು ಹೆಣ್ಣಿಗಿಂತ ಹೆಚ್ಚು ಕುಟುಂಬದ ಕಾಳಜಿ ಮಾಡಬೇಕೆಂದು ಆತನ ಮನಸ್ಸನ್ನು ಗಟ್ಟಿ ಮಾಡಿದ್ದಾನೆ, ಹೀಗಾಗಿ ಪ್ರತಿಯೊಂದಕ್ಕೂ ಹೆಣ್ಣಿನಂತೆ ಭಾವುಕವಾಗುವುದಿಲ್ಲ ಗಂಡಸಿನ ಮನಸ್ಸು!

ಅವರಿಗೆ ಸ್ವಂತ ಕುಟುಂಬದವರಿಂದ ಅಂದರೆ ಹೆಂಡತಿ, ಮಕ್ಕಳು, ಅಣ್ಣ, ತಮ್ಮಂದಿರಿಂದಲೇ ತುಂಬಾ ಪೆಟ್ಟುಗಳು, ನೋವು ಸಿಗುತ್ತದೆ, ಆದರೆ ಆತನಲ್ಲಿರುವ ತಾಳ್ಮೆ ಕುಟುಂಬದ ಕಣ್ಣಾಗಿರುತ್ತದೆ!

ಒಂದೊಂದು ಮನೆಯಲ್ಲಿ ಗಂಡಸರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಹಾಗೆ, ತಾಯಿ ಮತ್ತು ಹೆಂಡತಿಯ ನಡುವೆಯ ಮುನಿಸನ್ನು ಸುಧಾರಿಸುವುದೇ ಆತನ ಜೀವನದ ಒಂದು ದೊಡ್ಡ ಸಾಧನೆಯಾಗಿ ಹೋಗುತ್ತದೆ!

ತಾಯಿಯ ಮಾತನ್ನು ಕೇಳಿದರೆ, ಹೆಂಡತಿ ನೀವೇನು ಇನ್ನೂ ಚಿಕ್ಕಮಗುವೇ, ಹಾಗೆ ತಾಯಿಯ ಸೆರೆಗನ್ನೇ ಹಿಡಿದು ಓಡಾಡಲಿಕ್ಕೆ, ನಿಮ್ಮದೇ ಆದ ನಿರ್ಧಾರ ತೆಗೆದುಕೊಳ್ಳುವುದು ಯಾವಾಗ ಕಲಿಯುವಿರಿ ಎಂದು ತಿವಿಯುತ್ತಾಳೆ!

ಹೆಂಡತಿಯ ಮಾತಿಗೆ ಬೆಲೆ ಕೊಟ್ಟರೆ ತಾಯಿ ಹೆಂಡತಿಯ ಗುಲಾಮ,ಹೇಡಿ ನೀನು, ಬರೀ ಹೆಂಡತಿಯ ಮಾತೇ ಇವನಿಗೆ ವೇದವಾಕ್ಯ ಎಂದು ಮಗನನ್ನು ಮೂದಲಿಸುತ್ತಾಳೆ!

ಆಗ ಗಂಡಸರ ಪರಿಸ್ಥಿತಿ ಅಡಕೊತ್ತದಲ್ಲಿ ಸಿಕ್ಕ ಅಡಕೆಯಂತೆ; ಅವರಿಬ್ಬರಲ್ಲಿ ಯಾರನ್ನು ವಹಿಸಿ ಮಾತನಾಡಿದರೂ ಕತ್ತು"ಖಚಕ್" ಎನ್ನುವುದು ಗ್ಯಾರಂಟಿ!

ಹಾವು ಸಾಯಬಾರದು, ಕೋಲು ಮುರಿಯಬಾರದು ಎನ್ನುವ ರೀತಿಯಲ್ಲಿ ಜಾಣ್ಮೆಯನ್ನು ತೋರಿಸಬೇಕು ಪಾಪ ಗಂಡಸರು!

ಅದೇ ಇನ್ನೊಬ್ಬರ ಮನೆಯ ಸೊಸೆಯಾದ ಮಗಳು, ತಾಯಿ ತಂದೆಯರು ತನ್ನ ಜೊತೆಗಿದ್ದಾಗ ಹೊಂದಾಣಿಕೆ ಇಲ್ಲದಿದ್ದರೂ ಗಂಡನಿಗೆ ತಮ್ಮ ತಾಯಿಯ ಬಗ್ಗೆ ಏನೂ ಹೇಳದೇ ಮೌನ ವಹಿಸುತ್ತಾಳೆ, ಕಾರಣ ಆಕೆ ತನ್ನ ತಾಯಿ ಅಥವಾ ಈಕೆ ನನ್ನ ಮಗಳು ಎನ್ನುವ ಅಭಿಮಾನ ತಾಯಿ, ಮಗಳು ಇಬ್ಬರಲ್ಲೂ ಇರುತ್ತದೆ! ಎಷ್ಟೋ ಸಲ ಜಗಳವಾಡಿದರೂ ಅವರಿಬ್ಬರ ನಡುವಿನ ಅಭಿಮಾನ ಕಡಿಮೆಯಾಗುವುದಿಲ್ಲ! ಅದೇ ರೀತಿ ಅತ್ತೆ ಮನೆಯವರ ಬಗ್ಗೆ ಹೆಣ್ಣಿಗೆ ಇದ್ದರೆ ಗಂಡಸರ ಜೀವನ ಸುಂದರ! ಗಂಡಸರು ಮಾತ್ರ ಕುಟುಂಬದ ಪ್ರತಿಯೊಬ್ಬರ ಸ್ವಭಾವವನ್ನು ಅರಿತು ಅತ್ತ ಹೆಂಡತಿಯ ತವರು ಮನೆಯವರದು ಇತ್ತ ತನ್ನ ಮನೆಯವರದು ಇಬ್ಬರು ಸ್ವಭಾವವನ್ನೂ ಸಹಿಸಿಕೊಂಡು ಯಾರಿಗೂ ಏನೂ ಹೇಳಲಾರದೇ ಮನಸ್ಸಿನಲ್ಲೇ ಇಟ್ಟು ಕೊರಗುತ್ತಾನೆ!

ಇನ್ನು ಗಂಡಸರು ಹೃದಯಾಘಾತಕ್ಕೆ ಮುಖ್ಯ ಕಾರಣ ಅವರ #ಕುಡಿತ, ಸಿಗರೇಟಿನ ಚಟಗಳೂ ಆಗಿರಬಹುದು!

ಕೊರಗೂ ಕೂಡ ಆತನಿಗೆ ಅಜೀರ್ಣತೆ, ಅಸಿಡಿಟಿ, ಎದೆ ನೋವಿಗೆ ಕಾರಣವಾಗುತ್ತದೆ!



ಇದಕ್ಕೆಲ್ಲಾ ಕಾರಣ ಗಂಡಸರು ತಮ್ಮ ಮನಸಿನ ಮಾತನ್ನು ಹೆಂಡತಿ, ಮಕ್ಕಳು ಮುಂದೆ ಹೇಳದೇ ಇರುವುದು! ಮನದಲ್ಲಿರುವ ನೋವಿಗೆ ಔಷಧಿ ಎಂದರೆ ತನ್ನ ಸಂಗಾತಿಗೆ ತನ್ನ ಮನಸಿನ ಭಾವನೆಯನ್ನು ಹೇಳಿಕೊಳ್ಳುವುದು,ಆದರೆ ಇದು ತುಂಬಾ ವಿರಳ, ಗಂಡಸರು ತಮ್ಮ ಭಾವನೆಯನ್ನು ಎದೆಯಲ್ಲಿ ಮುಚ್ಚಿಟ್ಟು ಕೊಳ್ಳುವುದೇ ಅವರ ಹೃದಯಕ್ಕೆ ಅಪಾಯಕಾರಿ!

# ಛಲದ ಚಾಂಪಿಯನ್ : ಮಾರ್ಕ್ ಮಾರ್ಕ್ವೆಜ್



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಬದುಕು ಸುಗಮ ರಸ್ತೆಯಲ್ಲ. ಅದು ಅಡೆತಡೆಗಳಿಂದ ತುಂಬಿದ ರೇಸ್ ಟ್ರ್ಯಾಕ್. ಪ್ರತಿ ತಿರುವಿನಲ್ಲೂ ಬೀಳುವ ಭಯ, ಪ್ರತಿ ನೇರದಲ್ಲಿ ವೇಗದ ಸವಾಲು. ಈ ಮಾತಿಗೆ ಜೀವಂತ ಸಾಕ್ಷಿ ಮಾರ್ಕ್ ಮಾರ್ಕ್ವೆಜ್. ಎಂಟು ಬಾರಿ ವಿಶ್ವ ಚಾಂಪಿಯನ್ ಎಂಬ ಕಿರೀಟಕ್ಕಿಂತ ದೊಡ್ಡದು ಅವರ ಹೋರಾಟದ ಕಥೆ.



20ನೇ ವಯಸ್ಸಿನಲ್ಲೇ ಮೋಟೋ ಜಿಪಿ ವಿಶ್ವ ಚಾಂಪಿಯನ್ ಆದ ಅತ್ಯಂತ ಕಿರಿಯ ರೈಡರ್ ಎಂಬ ದಾಖಲೆ ಅವರದ್ದು. ಅವರ ಆಕ್ರಮಣಕಾರಿ ಶೈಲಿ ಮತ್ತು ಬೈಕ್ ಮೇಲಿನ ಹಿಡಿತ ಅವರನ್ನು ಅಜೇಯನನ್ನಾಗಿ ಮಾಡಿತ್ತು. ಆದರೆ 2020ರಲ್ಲಿ ಸಂಭವಿಸಿದ ಭೀಕರ ಅಪಘಾತ ಎಲ್ಲವನ್ನೂ ಬದಲಿಸಿತು. ಬಲಗೈ ಮೂಳೆ ಚೂರುಚೂರಾಯಿತು. ವೈದ್ಯರು "ಇನ್ನು ರೇಸ್ ಕಷ್ಟ" ಎಂದರು. ಜಗತ್ತು ಅವರ ವೃತ್ತಿಜೀವನ ಮುಗಿಯಿತು ಎಂದು ಭಾವಿಸಿತು.

ಸ್ಫೂರ್ತಿ ಸುಧೆ - 91

ಆದರೆ ನಿಜವಾದ ಚಾಂಪಿಯನ್ ಬೀಳುವವನಲ್ಲ, ಬಿದ್ದು ಎದ್ದೇಳುವವನು. ಮಾರ್ಕ್ವೆಜ್ ನಾಲ್ಕು ಶಸ್ತ್ರಚಿಕಿತ್ಸೆ, ದೃಷ್ಟಿ ದೋಷ ಮತ್ತು ವರ್ಷಗಟ್ಟಲೆ ನೋವನ್ನು ಎದುರಿಸಿದರು. ಆದರೂ ಅವರ ಮನಸ್ಸಿನ ಛಲ ಮಾತ್ರ ಕಡಿಮೆಯಾಗಲಿಲ್ಲ. "ನಾನು ಮುಗಿದಿಲ್ಲ" ಎಂಬ ನಂಬಿಕೆಯೊಂದಿಗೆ ಅವರು ಮತ್ತೆ ಟ್ರ್ಯಾಕ್‌ಗೆ ಮರಳಿದರು. ಅವರ ಈ ಮರಳಿ ಬರುವಿಕೆ ಕ್ರೀಡಾ ಲೋಕಕ್ಕೆ ಹೊಸ ವ್ಯಾಖ್ಯಾನ ನೀಡಿತು.

ಮಾರ್ಕ್ವೆಜ್ ನಮಗೆ ಕಲಿಸುವ ಪಾಠ ಸ್ಪಷ್ಟ. ಜಗತ್ತು ಮುಗಿದ ಅಧ್ಯಾಯ ಎಂದು ಹೇಳಿದಾಗ, ಹೊಸ ಇತಿಹಾಸ ಬರೆಯುವ ಧೈರ್ಯ ನಮ್ಮಲ್ಲಿರಬೇಕು. ಅಪಘಾತ ದೇಹವನ್ನು ಗಾಯಗೊಳಿಸಬಹುದು, ಆದರೆ ಕನಸನ್ನು ಕೊಲ್ಲಲಾರದು. ಬಿದ್ದಲ್ಲೇ ಎದ್ದು ಓಡುವುದೇ ನಿಜವಾದ ಗೆಲುವು.

# ಹಬ್ಬಗಳ ಸಂಭ್ರಮದ ಶ್ರಾವಣಮಾಸ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಶ್ರಾವಣ ಬಂತು ನಾಡಿಗೆ,ಬಂತು ಬೀಡಿಗೆ ಶ್ರಾವಣ ಎನ್ನುವಂತೆ ಶ್ರಾವಣ ಮಾಸದ ಆಗಮನ ನಮಗೆ ಸಂಭ್ರಮ ಸಡಗರ ತರುವ ಮಾಸವಾಗಿದೆ. ಮಾಸಗಳ ರಾಜನೆಂದು ಶ್ರಾವಣ ಮಾಸವನ್ನು ಕರೆಯುತ್ತಾರೆ.ಈ ಮಾಸದಲ್ಲಿ ನಡೆಯುವ ಧರ್ಮಾಚರಣೆಯ ವಿಧಿವಿಧಾನಗಳಾದ ಜಪ,ತಪ,ವೃತ,ನಿಯಮ ಪೂಜಾನುಷ್ಠಾನ ಪಾರಾಯಣ ಶಾಸ್ತ್ರಪ್ರವಚನ,ಭಜನೆ,ಕೀರ್ತನೆ,ಸತ್ಸಂಗ, ಪುಣ್ಯಕ್ಷೇತ್ರಗಳ ದರ್ಶನ ,ಯಜ್ಞ,ಯಾಗ,ಹೋಮಹವನ ಮುಂತಾದವು ಶ್ರಾವಣ ಮಾಸದಲ್ಲೇ ಶ್ರೇಷ್ಟವೆಂದು ಹೇಳಲಾಗುತ್ತದೆ.

ಶ್ರಾವಣದಲ್ಲಿ ಒಂದೇ ರೇಖೆಯಲ್ಲಿ ಬರುವ 17 ನಕ್ಷತ್ರಗಳು ಮಂಗಳಕರವಾದ ಮಳೆಗರೆದು,ಧರೆಯ ಜನರಿಗೆ ಉನ್ನತ ಫಲಗಳನ್ನು ನೀಡುತ್ತಿದೆ.ಸಿರಿಸಂಪತ್ತು ವೃದ್ಧಿಗಾಗಿ ವರಮಹಾಲಕ್ಷ್ಮಿ ವ್ರತ,ಸಂಪತ್ತಶುಕ್ರವಾರ,ಸಕಲ ಸಂಕಷ್ಟಗಳಿಂದ ಮುಕ್ತಗೊಳಿಸಿ ಸಮೃದ್ಧಿ ನೀಡುವ ಸತ್ಯನಾರಾಯಣ ಪೂಜೆ,ಮಂಗಳಗೌರೀ ವೃತ,ನಾಗಪಂಚಮಿ ನಾಗದೇವತೆಗೆ ಹಾಲೆರೆಯುವದು,ಸಹೋದರಿಯರ ರಕ್ಷಾಬಂಧನ,ಉಪಾಕರ್ಮ,ರಾಯರ ಆರಾಧನೆ,ಶ್ರೀಕೃಷ್ಣಜನ್ಮಾಷ್ಟಮಿ,ಶಿರಿಯಾಳ ಶ್ರಷ್ಠಿಯಲ್ಲದೇ ಶ್ರಾವಣದ ಸೋಮವಾರದ ಶಿವನ ಪೂಜೆಗೆ ಅಗ್ರಸ್ಥಾನವಿದೆ.ಈ ಮಾಸದಲ್ಲಿ ಬರುವ ಎಲ್ಲ ಸೋಮವಾರಗಳೂ ಮುಕ್ತಿಯ ಸೋಪಾನಗಳು ಎಂಬುದು ಶಿವ ಭಕ್ತರ ನಂಬಿಕೆಯಾಗಿದೆ.ಶ್ರವಣ ಎಂದರೆ ಆಲಿಸುವದು ,ಕೇಳುವದು,ಸರ್ವ ಶ್ರೋತ್ರಗಳ ಶ್ರವಣೇಂದ್ರಿಯಗಳಿಗೆ ಯೋಗ್ಯವಾದ ಪಾರಮಾರ್ಥ ತತ್ವಧಾರೆಯನ್ನು ಶ್ರವಣಮಾಡಿಸುವ ಮಾಸವೇ ಶ್ರಾವಣಮಾಸ.ತತ್ವಪದ ಲಕ್ಷಣಗಳನ್ನು ಶೋಧಿಸಿದಾಗ ಅಶುದ್ಧ ಬುದ್ಧಿಯು ಶುದ್ಧವಾದ ನಂತರ ಗುರುಮುಖದಿಂದ ಉಪನಿಷದ್ ವಾಕ್ಯಗಳನ್ನು ಶ್ರವಣಮಾಡುವದರಿಂದ ಅಪರೂಪದ ಜ್ಞಾನವಾಗುವದು.ಆಗ ಪರಮಾತ್ಮನೆಂಬ ಭಾವವು ಸುಸ್ಥಿರವಾಗುವದು.ಈ ಮಾಸದಲ್ಲಿ ಬರುವ ಹಬ್ಬವೃತಗಳನ್ನು ಆಚರಿಸುವದರಿಂದ ಜಾತಕದಲ್ಲಿರುವ ಗೃಹದೋಷಗಳನ್ನು ನಿವಾರಣೆ ಮಾಡಿಕೊಳ್ಳಬಹುದು.



ಈ ಮಾಸದ ಆಗಮನಕ್ಕೆ ಮನೆಯಲ್ಲಿರುವ ಸ್ತ್ರೀಯರು ಮನೆ ಬಾಗಿಲು ಸ್ವಚ್ಛಗೊಳಿಸಿ ತಿಂಗಳಿಗಾಗುವಷ್ಟು ಅಡುಗೆಗೆ ಬೇಕಾದ ಪುಡಿಗಳನ್ನು ತಯಾರಿಸಿಟ್ಟುಕೊಳ್ಳುವರು. ಮೆಣಸಿನಕಾಯಿ ಶ್ರಾವಣದಲ್ಲಿ ಹುರಿಯುವದಿಲ್ಲ ಮನೆಯಲ್ಲಿಯ ಲಕ್ಷ್ಮಿ ದೇವಿಗೆ ಖಾರದ ಘಾಟು ಆಗಬಾರದು ತೊಂದರೆಯಾಗುವದು ಎಂಬ ನಂಬಿಕೆಇದೆ.ಪೊರಕೆ,ಬುಟ್ಟಿ,ಮರಗಳ ಖರೀದಿ ಅಲ್ಲದೇ ಹಬ್ಬ ಬರುವ ಮೊದಲು ಸ್ತ್ರೀಯರು ಬಳೆಗಳನ್ನು ಬಂಗಾರದ ಬಳೆಯನ್ನು ತೊಡುವ ಪದ್ಧತಿ ಕೂಡಾ ಕೆಲವರಲ್ಲಿದೆ.ಈ ಮಾಸದಲ್ಲಿ ಮೊದಲು ಬರುವ ಹಬ್ಬವೇ ನಾಗರ ಪಂಚಮಿ. ನಾಗರ ಪಂಚಮಿ ನಾಡಿಗೆ ದೊಡ್ಡದು ಎಂಬ ಹಾಡನ್ನಲ್ಲದೇ ಪಂಚಮಿ ಹಬ್ಬ ಅಣ್ಣ ಯಾಕ ಬರಲಿಲ್ಲ ಕರಿಯಾಕ ಎಂದು ಹಾಡು ಹೇಳುವ ಮನೆಯ ಹೆಣ್ಣುಮಕ್ಕಳಲ್ಲಿ ತೇಲಿಬರುತ್ತದೆ.ಜಾತಕದಲ್ಲಿ ನಾಗ ದೋಷಗಳಿದ್ದರೆ,ರಾಹುದೋಷ,ನಕ್ಷತ್ರ ದೋಷವಿದ್ದರೆ ,ಸಂತಾನದ ನಾಗದೋಷವಿದ್ದರೆ ,ಮಾಂಗಲ್ಯಭಾಗ್ಯ ದೋಷವಿದ್ದರೆ ನಾಗರ ಪಂಚಮಿದಿನ ನಾಗರಕಲ್ಲಿಗೆ ಅಥವಾ ಹುತ್ತಕ್ಕೆ ಹಾಲೆರೆಯುವರು.ಸಿರಿಯಾಳ ಷಷ್ಠಿಯನ್ನು ಗಂಡುಮಕ್ಕಳಿರುವ ತಾಯಂದಿರು ಆಚರಿಸುತ್ತಾರೆ.

ಈ ಮಾಸದಲ್ಲೇ ಗುರು ರಾಘವೇಂದ್ರರ ಆರಾಧನೆ ಬರುತ್ತದೆ.ಕಲಿಯುಗದ ಕಾಮಧೇನು ಕೇಳಿದ್ದನ್ನು ಪ್ರಸಾದಿಸುವ ಕಲ್ಪವೃಕ್ಷವೆಂದೇ ಭಾವಿಸಲಾದ ಮಂತ್ರಾಲಯದ ರಾಯರ ಆರಾಧನೆಯನ್ನು ಎಲ್ಲ ಅವರ ಮಠಗಳಲ್ಲಿ ಮಂತ್ರಾಲಯದಲ್ಲಿ ಮೂರು ದಿನ ಆಚರಿಸಲಾಗುತ್ತದೆ. ರಾಯರೆಂದರೆಸತ್ಯಧರ್ಮದ ರೂವಾರಿ ,ಹರಿವಾಯುಗಳ ಒಡನಾಡಿ,ಮನುಕುಲದ ಜೀವನಾಡಿ,ನಂಬಿದವರನ್ನೆಲ್ಲ ಜಾತಿ,ಮತ,ಕುಲವೆನ್ನದೇ ಬೆಳಸಿದ್ದೇ ಕಾಯಕ.ಹಾಗಾಗಿ ನಂಬಿದವರಿಗೆಲ್ಲ ಅಧ್ಯಾತ್ಮ ಚಿಂತನೆಯೆಡೆಗೆ ಕರೆದೊಯ್ಯುವ ನಾಯಕ. ಸರ್ವ ವಿದ್ಯಾ ಪ್ರದಾಯಕ.ನೂರಾರು ದಾಸರು,ಸಾವಿರಾರು ಭಕ್ತರು,ಕೋಟಿ ಪಾಮರರು,ಸದಾ ಕೊಂಡಾಡುವ ಹೆಸರೇ ಶ್ರೀ ರಾಯರು.ಗುರುರಾಯರ ಸೇವಿಸಿರೋ... ಸೌಖ್ಯದಿ ಜೀವಿಸಿರೋ .... ಎಂಬ ಉಕ್ತಿ ಎಲ್ಲ ಕಾಲಕ್ಕೂ ನಿತ್ಯನೂತನ.

ಶ್ರಾವಣದ ನಾಲ್ಕು ಶುಕ್ರವಾರ ,ಶನಿವಾರ ಗೌರಿಯನ್ನು ಪೂಜಿಸಿದರೆ ಎರಡನೇಯ ಶುಕ್ರವಾರ ವರಮಹಾಲಕ್ಷ್ಮಿ ಪೂಜೆಯನ್ನು ಪೂಜಿಸುವ ಪದ್ಧತಿ ನಮ್ಮಲ್ಲಿದೆ.ಈ ವ್ರತವನ್ನು ಪುರುಷ ಸ್ತ್ರೀಯರು ಒಟ್ಟಿಗೆ ಮಾಡಬಹುದು.ಅದರಲ್ಲಿ ಮಹಿಳೆಯರು ಹೆಚ್ಚಾಗಿ ಈ ವ್ರತ ಮಾಡುತ್ತಾರೆ.ಈ ವೃತಾಚರಣೆಗೆ ನಿಯಮಗಳಿಲ್ಲ.ಲಕ್ಷ್ಮಿ ದೇವಿಯು ಸಮೃದ್ಧಿ ,ಸಂಪತ್ತು,ಅದೃಷ್ಟ,ಬುದ್ಧಿವಂತಿಕೆ,ಬೆಳಕು,ಧೈರ್ಯ,ಮತ್ತು ಸಂತಾನದ ಪ್ರಭಾವೀ ದೇವತೆ,ವಿವಾಹಿತ ಮಹಿಳೆಯರು ಲಕ್ಷ್ಮಿಯನ್ನು ಪೂಜಿಸುವದರಿಂದ ಪತಿಯ ಆಯಸ್ಸು ವೃದ್ಧಿಯಾಗುವದು.ಉತ್ತಮ ಸಂತಾನಕ್ಕಾಗಿಯೂ ಮಹಿಳೆಯರು ವರಮಹಾಲಕ್ಷ್ಮಿ ವ್ರತ ಆಚರಿಸುತ್ತಾರೆ.ಶ್ರಾವಣದ ಹುಣ್ಣಿಮೆಯಂದು ರಕ್ಷಾಬಂಧನ ಆಚರಿಸುತ್ತಾರೆ.ಸಹೋದರ ಸಹೋದರಿಯರ ನಡುವಿನ ಬಾಂಧವ್ಯ ಬಲಪಡಿಸುವ ಹಬ್ಬ ಇದಾಗಿದೆ.ಅಂದಿನ ದಿನ ಸಹೋದರಿ ಸಹೋದರನಿಗೆ ರಾಖಿ ಕಟ್ಟಿ ಆರತಿ ಮಾಡಿ ಸಿಹಿ ತಿನಿಸಿ ಸಹೋದರನ ಆಶೀರ್ವಾದ ಬೇಡುತ್ತಾಳೆ.ತಂಗಿಯ ರಕ್ಷಣೆ ಅಣ್ಣನಿಂದ ,ಅಣ್ಣನ ಜೊತೆ ಯಾವಾಗಲೂ ಸಹೋದರಿ ನಾನಿರುವೆನೆಂದು ಪರಸ್ಪರ ಭ್ರಾತ್ರತ್ವದ ಭಾವನೆಯನ್ನು ದಟ್ಟಗೊಳಿಸುವ ಹಬ್ಬ ಇದಾಗಿದೆ.ಅಂದಿನ ದಿನವೇ ಉಪಾಕರ್ಮ ಆಚರಣೆ ಎಂದರೆ ಉಪನಯನವಾದ ನಂತರ ಪ್ರತೀವರ್ಷ ಜನಿವಾರಧಾರಣೆ ಗಂಡುಮಕ್ಕಳು ಆಚರಿಸುವ ಹಬ್ಬ ಇದಾಗಿದೆ. ಉಪಾಕರ್ಮ ಆಚರಣೆ ಶಾಸ್ತ್ರೀಯ ಕಟ್ಟುಪಾಡಿನಲ್ಲಿ ನಡೆಯುವ ವಾರ್ಷಿಕ ಹಬ್ಬವಾಗಿದೆ. ಅಂದು ಗಾಯಿತ್ರಿ ಮಂತ್ರದಿಂದ ಹೊಸಸಿದ್ಧಿಯಲ್ಲದೇ ಆತ್ಮಕಲ್ಯಾಣ, ಲೋಕಕಲ್ಯಾಣವಾಗುವದು.

ಕೃಷ್ಣ ಜನ್ಮಾಷ್ಟಮಿ– " ವಂದೇ ನನ ಗಾನಾ ಶ್ಯಾಮಮಂ ಪೀತ ಕೌಶೇಯ ವಾಸಮ್ ಸನಂದನ ಸುಂದರಾಮ್ ಶುಧಾಮ್ ಶ್ರೀಕೃಷ್ಣ ಪೃಕೃತೇಪ್ಯಾರಮ್॥"

ಜನ್ಮಾಷ್ಟಮಿ ನಮ್ಮ ದೇಶದಲ್ಲಿ ಆಚರಿಸುವ ಪ್ರಮುಖ ಹಬ್ಬ. ಈ ದಿನವನ್ನು ಜನ್ಮಾಷ್ಟಮಿ,ಗೋಕುಲಾಷ್ಟಮಿ ಯೆಂದು ಸಂಭ್ರಮದಿಂದ ಆಚರಿಸುತ್ತಾರೆ.ಕೃಷ್ಣನ ಅನೇಕ ರೋಚಕ ಕಥೆಗಳು ಭಾಗವತದಲ್ಲಿವೆ.ಸೂರದಾಸರು,ಪುರುಂದರದಾಸರು ,ಕನಕದಾಸರು ,ಮೀರಾಬಾಯಿ ಇವರೆಲ್ಲ ಕೃಷ್ಣನ ಆರಾಧಕರು.



ಅಂದಿನ ದಿನ ಮನೆ ಮತ್ತು ದೇವಾಲಯಗಳನ್ನು ವಿಶೇಷ ಅಲಂಕರಿಸಿ ಪುಟ್ಟ ಕೃಷ್ಣನ ಹೆಜ್ಜೆಗಳ ರಂಗೋಲಿ ಬರೆದು ಕೃಷ್ಣನ ವಿಗ್ರಹ ಅಲಂಕರಿಸಿ ಬಗೆಬಗೆಯ ತಿಂಡಿ ಮಾಡಿ ಬೆಣ್ಣೆ ಸಮೇತ ನೇವ್ಯದ್ಯ ಮಾಡಿ ರಾತ್ರಿ ಅರ್ಘ್ಯ ಸಮರ್ಪಿಸುತ್ತಾರೆ. ಕಾರುಣ್ಯಕ್ಕೆ ಎಣೆಯಿಲ್ಲ ಎನ್ನುವ ಹಾಗೆ ಅವನು ನಮಗಾಗಿ ಅವತರಿಸಿದ ಪರಮಾತ್ಮನೆಂದು ಉಪವಾಸವಿದ್ದು ಪೂಜೆ ಸಲ್ಲಿಸುತ್ತಾರೆ.ಸಮಗ್ರ ಭೂಮಿಯನ್ನು ಪಾತ್ರೆಯನ್ನಾಗಿ ಮಾಡಿ ಅದರಲ್ಲಿ ರತ್ನ ಕವಚ ತುಂಬಿಸಿ ಉತ್ತಮೋತ್ತಮರಿಗೆ ದಾನ ಮಾಡಿದಷ್ಟು ಪುಣ್ಯ ಬರುತ್ತದೆ ಎಂಬ ನಂಬಿಕೆ ನಮ್ಮಲ್ಲಿದೆ.

ಶ್ರಾವಣ ಮಾಸದಲ್ಲಿ ಬರುವ ಎಲ್ಲ ಹಬ್ಬಗಳೂ ಅಮೂಲ್ಯವಾದವುಗಳು.ಇಂಥಹ ಅಮೂಲ್ಯ ಸಂದರ್ಭದಲ್ಲಿ ದೇವತೆಗಳ ವಿಶೇಷ ಪೂಜೆ ,ಹೋಮಹವನ,ಧರ್ಮಚಿಂತನೆ , ಕಾರ್ಯಸಿದ್ಧಿಯ ಸಂಕಲ್ಪಗಳ ಮುಖಾಂತರ ಬದುಕಿನಲ್ಲಿ ಸೌಹಾರ್ದ,ಸಹಬಾಳ್ವೆ,ಸಾತ್ವಿಕ ಸಂಪನ್ನತೆ ನಮಗೆಲ್ಲ ತಂದುಕೊಡುತ್ತದೆ.ಬರುತ್ತಿರುವ ಶ್ರಾವಣದ ಸಂಭ್ರಮ ಆಚರಿಸಿ ಭಗವಂತನ ಕೃಪೆಗೆ ಪಾತ್ರರಾಗೋಣ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,